بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 13

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

31 ಮಾರ್ಚ್ 2022, 31 ಅಮಾನ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
27 ಶಅ್‌ಬಾನ್ 1443 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْا
كُتِبَ عَلَيْكُمُ الصِّيَامُ
كَمَا كُتِبَ عَلَى الَّذِيْنَ
مِنْ قَبْلِكُمْ لَعَلَّكُمْ تَتَّقُوْنَ

(ಅಲ್ ಬಖರ:184)

ಅಂದರೆ: ಎಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ವ್ರತಾನುಷ್ಠಾನವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ದಜ್ಜಾಲ್ ಮಕ್ಕ ಮದೀನಕ್ಕೆ ಪ್ರವೇಶಿಸುವುದಿಲ್ಲ

**(1879)** ಹ'ರ್ಝ್'ರತ್ ಅಬೂಬಕರ್(ರ) ವರದಿ ಮಾಡುತ್ತಾರೆ. ನಬಿ(ಸ) ರವರು ಹೇಳಿದರು. ಮಸೀಹ್ ದಜ್ಜಾಲಿನ ಭಯ ಮದೀನ ಪ್ರವೇಶಿಸುವುದಿಲ್ಲ ಆ ದಿನ ಅದಕ್ಕೆ ಏಳು ಬಾಗಿಲುಗಳು ಇರುವವು, ಪ್ರತಿಯೊಂದು ಬಾಗಿಲಿಗೆ ಎರಡು ದೇವದೂತರನ್ನು ನೇಮಿಸಲಾಗುವುದು.

**(1880)** ಹ'ರ್ಝ್'ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಮದೀನದ ದ್ವಾರಗಳಲ್ಲಿ ದೇವದೂತರಿರುವರು. ಅದರೊಳಗೆ ತಾವೂನ್ (ಮಹಾಮಾರಿ) ಆಗಲಿ ದಜ್ಜಾಲ್ ಆಗಲಿ ಪ್ರವೇಶ ಮಾಡಲಾರರು.

**(1881)** ಹಝ್‌ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ. ನಬಿ(ಸ) ರವರು ನುಡಿದರು. ದಜ್ಜಾಲ್ ನಾಶಪಡಿಸದಂತಹ ಯಾವ ನಗರವು ಇರಲಿಕ್ಕಿಲ್ಲ, ಮಕ್ಕ ಮತ್ತು ಮದೀನ ಹೊರತುಪಡಿಸಿ, ಅದರ ಎಲ್ಲ ಮಾರ್ಗಗಳಲ್ಲಿ ದೇವದೂತರು ಸಾಲುಗಟ್ಟಿ ನಿಂತಿರುವರು, ಅವು ಅದರ ರಕ್ಷಣೆ ಮಾಡುವರು, ಮತ್ತು ಮದೀನ ಮೂರು ಸಲ ತನ್ನ ನಿವಾಸಿಯರಿಂದ ಕಂಪಿಸಲ್ಪಡುವುದು. ಆಗ ಅಲ್ಲಾಹನು ಎಲ್ಲ ಅವಿಶ್ವಾಸಿಗಳಿಗೆ ಮತ್ತು ಕಪಟ ವಿಶ್ವಾಸಿಗಳಿಗೆ ಯುದ್ಧಕ್ಕಾಗಿ ಬರುವಂತೆ ಮಾಡುವನು.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬ್ ಫಝಾಎಲುಲ್ ಮದೀನ, ಮುದ್ರಣ 2008)**

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

**MUSLIM TELEVISION AHMADIYYA INTERNATIONAL**
**www.mta.tv**

**ವಿಷೇಶ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609
(ವ್ಯವಸ್ಥಾಪಕರು)

**ಅತ್ಯಂತ ದುಃಖಕರವಾಗಿ, ಈಗ ಉಕ್ರೇನ್‌ನಲ್ಲಿ ಯುದ್ಧ ಪ್ರಾರಂಭವಾಗಿದೆ ಹಾಗೂ ಪರಿಸ್ಥಿತಿಯು ಗಂಭೀರ ಮತ್ತು ಅನಿಶ್ಚಿತವಾಗಿದೆ.**

**ವಿಶೇಷವಾಗಿ 20ನೇ ಶತಮಾನದಲ್ಲಿ ಘಟಿಸಿದ ಎರಡು ವಿನಾಶಕಾರಿ ವಿಶ್ವ ಯುದ್ಧಗಳಿಂದ ಪಾಠಗಳನ್ನು ಕಲಿಯಬೇಕು ಎಂದು ನಾನು ಹಲವು ವರ್ಷಗಳಿಂದ ಲೋಕದ ಪ್ರಮುಖ ರಾಷ್ಟ್ರಗಳಿಗೆ ಮುನ್ನೆಚ್ಚರಿಕೆ ನೀಡುತ್ತಾ ಬಂದಿದ್ದೇನೆ.**

**ಮಾನವೀಯತೆಯ ಸಲುವಾಗಿ ಸಂಘರ್ಷವನ್ನು ತಗ್ಗಿಸಲಿಕ್ಕಾಗಿ ಮತ್ತು ಶಾಂತಿಯುತ ಪರಿಹಾರಕ್ಕಾಗಿ ದಕ್ಷತೆಯಿಂದ ಎಲ್ಲ ಪ್ರಯತ್ನಗಳನ್ನು ಮಾಡುವ ಕಡೆಗೆ ಗಮನಹರಿಸಬೇಕೆಂದು ನಾನು ರಷ್ಯಾ, ನ್ಯಾಟೋ ಮತ್ತು ಎಲ್ಲ ಪ್ರಮುಖ ರಾಷ್ಟ್ರಗಳೊಡನೆ ನಿವೇದಿಸಿಕೊಳ್ಳುತ್ತೇನೆ**

**ಪತ್ರಿಕಾ ಪ್ರಕಟಣೆ (24 ಫೆಬ್ರವರಿ 2022)**

ರಷ್ಯಾ – ಉಕ್ರೇನ್ ಬಿಕ್ಕಟ್ಟಿಗೆ ಸಂಬಂಧಿಸಿ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರ ಹಝ್ರ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬ್‌ರವರ ಹೇಳಿಕೆ:

ಇತಿಹಾಸದಿಂದ, ವಿಶೇಷವಾಗಿ 20ನೇ ಶತಮಾನದಲ್ಲಿ ಘಟಿಸಿದ ಎರಡು ವಿನಾಶಕಾರಿ ವಿಶ್ವ ಯುದ್ಧಗಳಿಂದ ಪಾಠಗಳನ್ನು ಕಲಿಯಬೇಕು ಎಂದು ನಾನು ಹಲವು ವರ್ಷಗಳಿಂದ ಲೋಕದ ಪ್ರಮುಖ ರಾಷ್ಟ್ರಗಳಿಗೆ ಮುನ್ನೆಚ್ಚರಿಕೆ ನೀಡುತ್ತಾ ಬಂದಿದ್ದೇನೆ. ಈ ನಿಟ್ಟಿನಲ್ಲಿ ಸಮಾಜದ ಎಲ್ಲ ಹಂತಗಳಲ್ಲೂ ನಿಜವಾದ ನ್ಯಾಯವನ್ನು ಸ್ಥಾಪಿಸುತ್ತಾ ವಿಶ್ವದ ಶಾಂತಿ ಮತ್ತು ಭದ್ರತೆಗೆ ಆದ್ಯತೆ ನೀಡುವ ಸಲುವಾಗಿ ತಮ್ಮ ರಾಷ್ಟೀಯ ಮತ್ತು ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗಿಡಲು ಒತ್ತಾಯಿಸಿ ವಿವಿಧ ರಾಷ್ಟ್ರಗಳ ನಾಯಕರಿಗೆ ಪತ್ರಗಳನ್ನು ಬರೆದಿದ್ದೆ.

ಅತ್ಯಂತ ದುಃಖಕರವಾಗಿ, ಈಗ ಉಕ್ರೇನ್‌ನಲ್ಲಿ ಯುದ್ಧ ಪ್ರಾರಂಭವಾಗಿದೆ ಹಾಗೂ ಪರಿಸ್ಥಿತಿಯು ಗಂಭೀರ ಮತ್ತು ಅನಿಶ್ಚಿತವಾಗಿದೆ. ಇದಲ್ಲದೆ, ರಷ್ಯಾ ಸರಕಾರದ ಮುಂದಿನ ಕ್ರಮಗಳಿಂದ ಹಾಗೂ ನ್ಯಾಟೋ ಮತ್ತು ಪ್ರಮುಖ ರಾಷ್ಟ್ರಗಳ ಪ್ರತಿಕ್ರಿಯೆಯಿಂದ ಇದು ಇನ್ನಷ್ಟು ಉಲ್ಬಣಗೊಳ್ಳುವ ಸಾಧ್ಯತೆಯಿದೆ. ಯಾವುದೇ ಉಲ್ಬಣಗೊಳ್ಳುವಿಕೆಯ ಪರಿಣಾಮ ಅತ್ಯಂತ ಭಯಾನಕ ಮತ್ತು ವಿನಾಶಕಾರಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದ್ದರಿಂದ ಇನ್ನಷ್ಟು ಯುದ್ಧ ಮತ್ತು ಹಿಂಸಾಚಾರವನ್ನು ತಪ್ಪಿಸಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಮಾಡುವುದು ಈಗಿನ ಮುಖ್ಯ ಅಗತ್ಯವಾಗಿದೆ. ವಿಪತ್ತಿನ ಅಂಚಿನಿಂದ ಹಿಂದೆ ಸರಿಯಲು ಲೋಕಕ್ಕೆ ಇನ್ನೂ ಸಮಯವಿದೆ. ಆದ್ದರಿಂದ ಮಾನವೀಯತೆಯ ಸಲುವಾಗಿ ಸಂಘರ್ಷವನ್ನು ತಗ್ಗಿಸಲಿಕ್ಕಾಗಿ ಮತ್ತು ಶಾಂತಿಯುತ ಪರಿಹಾರಕ್ಕಾಗಿ ದಕ್ಷತೆಯಿಂದ ಎಲ್ಲ ಪ್ರಯತ್ನಗಳನ್ನು ಮಾಡುವ ಕಡೆಗೆ ಗಮನಹರಿಸಬೇಕೆಂದು ನಾನು ರಷ್ಯಾ, ನ್ಯಾಟೋ ಮತ್ತು ಎಲ್ಲ ಪ್ರಮುಖ ರಾಷ್ಟ್ರಗಳೊಡನೆ ನಿವೇದಿಸಿಕೊಳ್ಳುತ್ತೇನೆ.

ಮನುಕುಲದ ಯೋಗಕ್ಷೇಮಕ್ಕಾಗಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮತ್ತು ಶತ್ರುತ್ವಗಳನ್ನು ಬದಿಗಿಟ್ಟು ಜಾಗತಿಕ ಶಾಂತಿಗೆ ಆದ್ಯತೆ ನೀಡುವ ಕಡೆಗೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ನೇತಾರನೆಂಬ ನೆಲೆಯಲ್ಲಿ ನಾನು ಲೋಕದ ರಾಜಕೀಯ ನಾಯಕರ ಗಮನವನ್ನು ಸೆಳೆಯಬಲ್ಲೆ ಅಷ್ಟೆ. ಹೀಗಾಗಿ, ಲೋಕದ ಆಡಳಿತಗಾರರು ಜಾಣ್ಮೆ ಮತ್ತು ವಿವೇಕದಿಂದ ವರ್ತಿಸಬೇಕು ಹಾಗೂ ಮಾನವೀಯತೆಯ ಹಿತಕ್ಕಾಗಿ ಶ್ರಮಿಸಬೇಕು ಎಂಬುದು ನನ್ನ ಪ್ರಾಮಾಣಿಕವಾದ ಪ್ರಾರ್ಥನೆಯಾಗಿದೆ. ಯುದ್ಧದ ಯಾತನೆ, ರಕ್ತಪಾತ ಹಾಗೂ ವಿನಾಶದಿಂದ ಮನುಕುಲವನ್ನು ರಕ್ಷಿಸಲು ಜಾಗತಿಕ ನಾಯಕರು ಭಗೀರಥ ಪ್ರಯತ್ನಗಳನ್ನು ಈಗಲೂ ಮುಂದೆಯೂ ನಡೆಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ನಮ್ಮ ಮಕ್ಕಳ ಮತ್ತು ಮುಂದಿನ ಪೀಳಿಗೆಗಳ ಭವಿಷ್ಯವನ್ನು ನಾಶಮಾಡುವ ಕ್ರಮಗಳನ್ನು ಪ್ರಮುಖ ರಾಷ್ಟ್ರಗಳು ಮತ್ತು ಅವುಗಳ ಸರ್ಕಾರಗಳು ಕೈಗೆತ್ತಿಕೊಳ್ಳದಿರಲಿ ಎಂದು ನಾನು ಮನಸ್ಸಾರೆ ಪ್ರಾರ್ಥಿಸುತ್ತೇನೆ. ಬದಲಿಗೆ, ಅವುಗಳ ಪ್ರತಿ ಪ್ರಯತ್ನ ಮತ್ತು ಪ್ರೇರಣೆಯು ನಮ್ಮ ಮುಂದಿನ ಪೀಳಿಗೆಗಳಿಗಾಗಿ ಶಾಂತಿ ಮತ್ತು ಸಮೃದ್ಧಿಯ ಜಗತ್ತನ್ನು ಬಿಟ್ಟು ಹೋಗುವಂತಾಗಿರಬೇಕು.

ಲೋಕದ ಶಾಂತಿ ಮತ್ತು ಭದ್ರತೆಯನ್ನು ಖಾತರಿಪಡಿಸಲು ಸಮಯದ ಸಂದಿಗ್ಧತೆ ಮತ್ತು ಮೌಲ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ತಮ್ಮ ಮಹತ್ವಪೂರ್ಣ ಹೊಣೆಗಾರಿಕೆಗಳನ್ನು ಜಾಗತಿಕ ನಾಯಕರು ಅರಿತು ನಡೆದುಕೊಳ್ಳುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಸರ್ವಶಕ್ತನಾದ ಅಲ್ಲಾಹನು ಎಲ್ಲ ಮುಗ್ಧ ಮತ್ತು ನಿರಾಶ್ರಿತ ಜನರನ್ನು ರಕ್ಷಿಸಲಿ ಹಾಗೂ ಲೋಕದಲ್ಲಿ ನಿಜವಾದ ಹಾಗೂ ಶಾಶ್ವತವಾದ ಶಾಂತಿ ಸ್ಥಾಪಿತವಾಗಲಿ.

**ಮಿರ್ಝಾ ಮಸ್ರೂರ್ ಅಹ್ಮದ್,**
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ನೇತಾರ

# ಖುತ್‌ಬ ಜುಮುಅ

**ಅಲ್ಲಾಹನು ನನಗೆ ಪವಿತ್ರ ಖುರ್‌ಆನಿನ ಅರಿವನ್ನು ದಯಪಾಲಿಸಿರುವನು. ಈ ಕಾಲದಲ್ಲಿ ಪವಿತ್ರ ಖುರ್‌ಆನನ್ನು ಕಲಿಸಲು ಅಲ್ಲಾಹನು ನನ್ನನ್ನು ಲೋಕದ ಅಧ್ಯಾಪಕನನ್ನಾಗಿ ಮಾಡಿರುವನು. ಮುಹಮ್ಮದ್(ಸ)ರ ಮತ್ತು ಪವಿತ್ರ ಖುರ್‌ಆನಿನ ಹೆಸರನ್ನು ಲೋಕದ ಮೂಲೆ ಮೂಲೆಗೂ ತಲುಪಿಸಲಿಕ್ಕಾಗಿ ಮತ್ತು ಇಸ್ಲಾಮಿನ ಮುಂದೆ ಲೋಕದ ಎಲ್ಲ ಸುಳ್ಳು ಧರ್ಮಗಳನ್ನು ಪರಾಜಿತಗೊಳಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ಎಬ್ಬಿಸಿ ನಿಲ್ಲಿಸಿದ್ದಾನೆ**

## ಮುಸ್ಲಿಹ್ ಮೌಊದ್ ಭವಿಷ್ಯವಾಣಿಗೆ ಸಾಕ್ಷಾತ್ಕಾರರಾದ ಹಝ್ರತ್ ಮಿರ್ಝ ಬಶೀರ್ ಉದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್‌ರವರ ಜೀವನ ಚರಿತ್ರೆಯ ಪ್ರಸ್ತಾವನೆ

**ಲೋಕವು ತಮ್ಮ ಎಲ್ಲ ಶಕ್ತಿಗಳನ್ನು ಮತ್ತು ಗುಂಪುಗಳನ್ನು ಒಟ್ಟು ಸೇರಿಸಿ ಪ್ರಯತ್ನಿಸಲಿ. ಕ್ರೈಸ್ತ ಅರಸರು ಮತ್ತು ಅವರ ಆಡಳಿತಗಳು ಒಟ್ಟುಸೇರಲಿ. ಯುರೋಪ್ ಮತ್ತು ಅಮೇರಿಕ ಕೂಡ ಒಟ್ಟು ಸೇರಲಿ. ಲೋಕದ ಎಲ್ಲ ದೊಡ್ಡ ದೊಡ್ಡ ಶ್ರೀಮಂತರು ಮತ್ತು ಶಕ್ತಿಶಾಲಿ ಸಮುದಾಯಗಳು ಒಟ್ಟು ಸೇರಲಿ. ಅವರೆಲ್ಲರೂ ನನ್ನ ಉದ್ದೇಶವನ್ನು ತಡೆಯಲು ಒಟ್ಟು ಸೇರಲಿ. ಆದರೂ ನಾನು ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ: ಅವರೆಲ್ಲರೂ ನನ್ನ ಮುಂದೆ ಪರಾಜಿತಗೊಳ್ಳುವರು. ನನ್ನ ಪ್ರಾರ್ಥನೆಗಳು ಮತ್ತು ಯೋಜನೆಗಳ ಮುಂದೆ ಅವರ ಎಲ್ಲ ಯೋಜನೆಗಳು, ಕುತಂತ್ರಗಳು ಮತ್ತು ಮೋಸಗಾರಿಕೆಗಳನ್ನು ಅಲ್ಲಾಹನು ಅಳಿಸಿ ಹಾಕುವನು. ಅಲ್ಲಾಹನು ನನ್ನ ಮೂಲಕ ಅಥವಾ ನನ್ನ ಶಿಷ್ಯರ ಮೂಲಕ ಈ ಭವಿಷ್ಯವಾಣಿಯ ಸತ್ಯತೆಯನ್ನು ಸಾಬೀತುಪಡಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ)ರ ಹೆಸರಿನ ಮೂಲಕ ಮತ್ತು ಅವರ ಪರವಾಗಿ ಇಸ್ಲಾಮಿನ ಗೌರವವನ್ನು ಸ್ಥಾಪಿಸುವನು. ಇಸ್ಲಾಂ ಪುನಃ ತನ್ನ ಪೂರ್ಣ ವೈಭವದೊಂದಿಗೆ ಲೋಕದಲ್ಲಿ ಸ್ಥಾಪಿಸಲ್ಪಡುವ ತನಕ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಲೋಕದ ಜೀವಂತ ಪ್ರವಾದಿಯೆಂದು ಲೋಕವು ಒಪ್ಪುವ ತನಕ ಅಲ್ಲಾಹನು ಲೋಕವನ್ನು ಬಿಡಲಾರನು.**

**ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್(ರ)ರನ್ನು ಜ್ಞಾನಗಳಿಂದ ತುಂಬಿಸಿದಕ್ಕೆ ಖಲೀಫರಾಗಿದ್ದುಕೊಂಡು ಅವರ 52 ವರ್ಷಗಳ ಜೀವಿತವೇ ಸಾಕ್ಷಿಯಾಗಿದೆ. ಧಾರ್ಮಿಕ ವಿಷಯಗಳಾಗಿರಲಿ, ಭೌತಿಕ ವಿಷಯವಾಗಿರಲಿ, ಅವರೊಡನೆ ಯಾವುದಾದರೂ ವಿಷಯದ ಬಗ್ಗೆ ಬರೆಯಲು ಮತ್ತು ವಿವರಿಸಲು ಹೇಳಲಾದಾಗ ಅವರು ಅರಿವು ಮತ್ತು ಜ್ಞಾನದ ನದಿಯನ್ನೇ ಹರಿಸಿದರು**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–02–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಪ್ರತಿ ವರ್ಷ ಫೆಬ್ರವರಿ 20ರಂದು ನಾವು ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿಗೆ ಸಂಬಂಧಪಟ್ಟು ಸಮ್ಮೇಳನಗಳನ್ನು ನಡೆಸುತ್ತೇವೆ ಮತ್ತು ಆ ದಿನವನ್ನು ಸ್ಮರಿಸುತ್ತೇವೆ. ಇಸ್ಲಾಂ ಯಾವುದೇ ದೃಷ್ಟಾಂತವನ್ನು, ಚಿಹ್ನೆಗಳನ್ನು ಪ್ರಸ್ತುತಪಡಿಸುವುದಿಲ್ಲ, ತೋರಿಸುತ್ತಿಲ್ಲವೆಂಬ ಶತ್ರುಗಳ ಆರೋಪಗಳಿಗೆ ಉತ್ತರವಾಗಿ, ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ಅರಿವು ಪಡೆದು ಪುತ್ರನೊಬ್ಬನ ಜನನದ ಬಗ್ಗೆ ಭವಿಷ್ಯ ನುಡಿದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಇಸ್ಲಾಮಿನ ಸತ್ಯತೆಗೆ ನನ್ನ ಮೂಲಕ ಪ್ರಕಟವಾಗಲಿರುವ ಒಂದು ಮಹಾನ್ ದೃಷ್ಟಾಂತ ಮತ್ತು ಗುರುತು ಏನೆಂದರೆ, ದೀರ್ಘಾಯುಳ್ಯವನ್ನು ಪಡೆಯಲಿರುವ ಮತ್ತು ಇಸ್ಲಾಮಿಗೆ ಮಹತ್ತರವಾದ ಸೇವೆಗಳನ್ನು ಸಲ್ಲಿಸಲಿರುವ ಒಬ್ಬ ಪುತ್ರನ ಜನನವಾಗಿದೆ. ಮಗನಲ್ಲಿ ಇಂತಿಂತಹ ವಿಶೇಷತೆಗಳು ಇರುವುವು ಎಂದೂ ಸುಮಾರು 52 ಗುಣವೈಶಿಷ್ಟ್ಯಗಳು ಇರುವುವು ಎಂದೂ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಇದು ಸಾಮಾನ್ಯ ಭವಿಷ್ಯವಾಣಿಯಲ್ಲವಾಗಿತ್ತು. ಹೇಗಿದ್ದರೂ ನಿರ್ಧಿಷ್ಟ ಸಮಯದೊಳಗೆ ಆ ಮಗನು ಜನಿಸಿದನು ಮತ್ತು ಅವನು ದೀರ್ಘಾಯುಸ್ಸನ್ನು ಪಡೆದನು ಹಾಗೂ ಅವನಗೆ ಇಸ್ಲಾಮಿನ ಅಸಾಮಾನ್ಯ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತು. ಪ್ರತಿ ವರ್ಷ ಈ ಭವಿಷ್ಯವಾಣಿಗೆ ಸಂಬಂಧಪಟ್ಟ ವಿವಿಧ ಅಂಶಗಳ ಕುರಿತು ಜಮಾಅತಿನ ಸಭೆಗಳಲ್ಲಿ ಬೆಳಕು ಬೀರಲಾಗುತ್ತದೆ. ಈ ವರ್ಷವೂ ಜಮಾಅತುಗಳಲ್ಲಿ ಕಾರ್ಯಕ್ರಮಗಳು ನಡೆಯುವುವು. ಅದೇ ರೀತಿಯಲ್ಲಿ ಎಂ.ಟಿ.ಎ.ಯಲ್ಲೂ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ವಿಶದವಿವರಣೆಗಳು ಅಲ್ಲಿಂದ ಲಭಿಸುವುವು. ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಸ್ವಂತ ಮಾತುಗಳಲ್ಲಿ ಅವರ ಆರಂಭಿಕ ಜೀವಿತ ಹೇಗಿತ್ತು ಮತ್ತು ಅವರ ಆರೋಗ್ಯದ ಸ್ಥಿತಿ ಏನಾಗಿತ್ತು ಹಾಗೂ ಅವರೊಂದಿಗೆ ಅಲ್ಲಾಹನ ವರ್ತನೆ ಹೇಗಿತ್ತು ಎಂಬುದರ ಕುರಿತು ಕೆಲವು ಪರಾಮರ್ಶೆಗಳನ್ನು, ಉಲ್ಲೇಖಗಳನ್ನು ಮುಂದಿರಿಸುತ್ತೇನೆ.

ಭವಿಷ್ಯವಾಣಿಯು ದೀರ್ಘಾಯುಸ್ಸು ಪಡೆಯಲಿರುವ ಪುತ್ರನೊಬ್ಬನ ಬಗ್ಗೆಯಾಗಿತ್ತು. ಈ ದೀರ್ಘಾಯುಸ್ಸು ಪಡೆಯುವ ಪುತ್ರನ ಆರೋಗ್ಯಸ್ಥಿತಿಯ ಅಂದಾಜು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಸ್ವಂತ ಮಾತಿನಿಂದ ತಿಳಿಯಬಹುದಾಗಿದೆ. ಅವರು ಸ್ವತಃ ಹೇಳುತ್ತಾರೆ:

ಬಾಲ್ಯದಲ್ಲಿ ನನ್ನ ಆರೋಗ್ಯ ಬಹಳ ದುರ್ಬಲವಾಗಿತ್ತು. ಆರಂಭದಲ್ಲಿ ನಾಯಿಕೆಮ್ಮು ಎಂದು ಹೇಳಲಾಗುವ ಅತಿತೀವ್ರತರದ ಕೆಮ್ಮು ಇತ್ತು. ನನ್ನ ಆರೋಗ್ಯ ಎಷ್ಟು ಕೆಟ್ಟುಹೋಯಿತು ಎಂದರೆ, 11, 12 ವರ್ಷ ಪ್ರಾಯದಲ್ಲಿ ನಾನು ಜೀವನ್ಮರಣದ ನಡುವೆ ಇದ್ದೆ. ನನಗೆ ದೀರ್ಘಾಯುಸ್ಸು ಇರದು ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತಿತ್ತು. ಅದೇ ಕಾಲದಲ್ಲಿ ನನಗೆ ಕಣ್ಣು ಬೇನೆ ಉಂಟಾಯಿತು. ನನ್ನ ಕಣ್ಣುಗಳು ಬಹುತೇಕ ನಷ್ಟವಾಗುವಷ್ಟು ಕಣ್ಣು ನೋವಿತ್ತು. ಎಂದರೆ, ದೃಷ್ಟಿಶಕ್ತಿ ಇಲ್ಲಂತಾಯಿತು. ಬಹಳ ಸ್ವಲ್ಪ ಕಾಣಬಹುದಾಗಿತ್ತು. ಈಗಲೂ ನನ್ನ ದೃಷ್ಟಿಶಕ್ತಿ ಬಹಳ ಕಡಿಮೆ. ನಾನು ಸ್ವಲ್ಪ ದೊಡ್ಡವನಾದಾಗ ಸತತ ಆರೇಳು ತಿಂಗಳು ನನಗೆ ಜ್ವರ ಬರುತ್ತಿತ್ತು. ನನಗೆ ಕ್ಷಯರೋಗವಿದೆ ಎಂದು ಹೇಳಲಾಗಿತ್ತು. ಈ ಕಾರಣಗಳಿಂದ ಸರಿಯಾಗಿ ಕಲಿಯಲು ಕೂಡ ಸಾಧ್ಯವಾಗಿರಲಿಲ್ಲ. ಶಾಲೆಗೆ ಹೋಗುತ್ತಿರಲಿಲ್ಲ. ಮುಸ್ಲಿಮ್‌ಟಾನಿನಲ್ಲಿ ವಾಸಿಸುತ್ತಿದ್ದ ಲಾಹೋರಿನ ಮಾಸ್ಟರ್ ಫಕೀರುಲ್ಲಾಹ್ ಸಾಹಿಬ್ ನಮಗೆ ಶಾಲೆಯಲ್ಲಿ ಗಣಿತ ಕಲಿಸುತ್ತಿದ್ದರು. ಕಲಿಯಲು ಬರುವುದಿಲ್ಲ ಮತ್ತು ಹೆಚ್ಚಾಗಿ ಗೈರುಹಾಜರಾಗಿರುತ್ತಾನೆ ಎಂದು ಅವರು ಒಂದು ಬಾರಿ ನನ್ನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ರ)ರಿಗೆ ದೂರು ನೀಡಿದರು. ಹಝ್ರತ್ ಮಸೀಹ್ ಮೌಊದ್(ರ) ಕೋಪಗೊಳ್ಳುವರು ಎಂದು ನಾನು ಹೆದರಿದೆ. ಆದರೆ ಹಝ್ರತ್ ಮಸೀಹ್ ಮೌಊದ್(ರ) ಹೇಳಿದರು: ಮಾಸ್ಟರ್ ಸಾಹಿಬರೇ, ಅವನ ಆರೋಗ್ಯ ದುರ್ಬಲವಾಗಿರುತ್ತದೆ. ಅವನು ಕೆಲವೊಮ್ಮೆ ಶಾಲೆಗೆ ಹೋಗುತ್ತಾನೆ ಮತ್ತು ಕೆಲವು ಸಂಗತಿಗಳು ಅವನ ಕಿವಿಗೆ ಬೀಳುತ್ತವೆ ಎಂಬುದಕ್ಕೆ ನಾವು ಅಲ್ಲಾಹನನ್ನು ವಂದಿಸುತ್ತೇವೆ. ಅವನ ಮೇಲೆ ಹೆಚ್ಚಿನ ಒತ್ತಡ ಹೇರಬೇಡಿರಿ. ಅದಲ್ಲದೆಯೂ ಅವನಗೆ ಲೆಕ್ಕ ಕಲಿಸಿ ನಾವೇನು ಮಾಡುವುದು? ನಾವು ಅವನಂದ ಯಾವುದಾದರೂ ಅಂಗಡಿ ತೆರೆಯಲಿಕ್ಕಿದೆಯೇ?

ಇದಾಗಿತ್ತು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಬಾಲ್ಯದ ಆರೋಗ್ಯಸ್ಥಿತಿ ಮತ್ತು ಶಾಲೆಗೆ ಹೋಗುವುದರ ಸ್ಥಿತಿ. ಇಂತಹ ಸ್ಥಿತಿಯಲ್ಲಿ ಅವರಿಗೆ ದೀರ್ಘಾಯುಸ್ಸು ಲಭಿಸುವುದು ಎಂದು ಯಾರಿಗೆ ಖಾತರಿ ಕೊಡಲು ಸಾಧ್ಯ? ದೀರ್ಘಾಯುಸ್ಸು ಮಾತ್ರವಲ್ಲ, ಅವರನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ಅರಿವುಗಳಿಂದ ತುಂಬಿಸಲಾಗುವುದು ಎಂದೂ ಭವಿಷ್ಯ ನುಡಿಯಲಾಗಿತ್ತು. ಇಂತಹ ಸ್ಥಿತಿಯಲ್ಲಿ ಅವರಿಗೆ ಇಂತಹ ಜ್ಞಾನಗಳು ಲಭಿಸುವುವು ಎಂದು ಯಾರಿಗೆ ಹೇಳಲು ಸಾಧ್ಯ? ಹೇಗಿದ್ದರೂ ಪವಿತ್ರ ಖುರ್‌ಆನ್ ಮತ್ತು ಹದೀಸ್ ಕಲಿತರೆ ಸಾಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಅವರ ಕುರಿತು ಹೇಳಿದ್ದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನ್ನ ಆರೋಗ್ಯ ಎಷ್ಟು ದುರ್ಬಲವಾಗಿತ್ತು ಎಂದರೆ, ಭೌತಿಕ ಅರಿವು ಕಲಿಯಲು ನಾನು ಕಿಂಚಿತ್ತೂ ಯೋಗ್ಯನಾಗಿರಲಿಲ್ಲ. ನನ್ನ ದೃಷ್ಟಿಯೂ ದುರ್ಬಲವಾಗಿತ್ತು. ಪ್ರೈಮರಿ, ಹೈಸ್ಕೂಲ್ ಮತ್ತು ಹತ್ತನೇ ತರಗತಿಯ ಪರೀಕ್ಷೆಗಳಲ್ಲಿ ನಾನು ಸೋತೆನು. ಯಾವುದೇ ಪರೀಕ್ಷೆಯಲ್ಲಿ ಪಾಸ್ ಆಗಿರಲಿಲ್ಲ. ಆದರೆ ನನ್ನನ್ನು ಬಾಹ್ಯ ಮತ್ತು ಆಂತರಿಕ ಜ್ಞಾಣಗಳಿಂದ ತುಂಬಿಸಲಾಗುವುದು ಎಂದು ಅಲ್ಲಾಹನು ನನ್ನ ಕುರಿತು ಮುನ್ಸೂಚನೆ ನೀಡಿದ್ದನು. ಹೀಗೆ ಲೌಕಿಕವಾದ ಕಲಿಕೆಗಳಿಂದ ನಾನು ಏನೂ ಕಲಿಯದಿದ್ದರೂ ಲೋಕವು ಓದಿ ಅಚ್ಚರಿಗೊಳ್ಳುವಂತಹ ಮಹತ್ತಾದ ಸಾಹಿತ್ಯ ಗ್ರಂಥಗಳನ್ನು ಅಲ್ಲಾಹನು ನನ್ನ ಲೇಖನಿಯಿಂದ ಬರೆಸಿದನು. ಇದಕ್ಕಿಂತ ಉತ್ತಮವಾಗಿ ಇಸ್ಲಾಮಿನ ವಿಷಯಗಳಲ್ಲಿ ಬರೆಯಲು ಸಾಧ್ಯವಿಲ್ಲವೆಂದು ಲೋಕದ ಜನರು ಒಪ್ಪಲು ನಿರ್ಬಂಧಿತರಾದರು. ಈಗ ನಾನು ತಫ್ಸೀರ್ ಕಬೀರ್ ಎಂಬ ಹೆಸರಿನಲ್ಲಿ ಪವಿತ್ರ ಖುರ್‌ಆನಿನ ವ್ಯಾಖ್ಯಾನದ ಒಂದು ಭಾಗವನ್ನು ಬರೆದಿರುವೆನು. ಇಂತಹ ವ್ಯಾಖ್ಯಾನವನ್ನು ಇಂದಿನ ತನಕ ಬರೆಯಲಾಗಿಲ್ಲವೆಂದು ಅದನ್ನು ಓದಿ ದೊಡ್ಡ ದೊಡ್ಡ ವಿರೋಧಿಗಳು ಕೂಡ ಒಪ್ಪಿಕೊಂಡಿರುವರು. ನಾನು ಯಾವಾಗಲೂ ಲಾಹೋರಿಗೆ ಹೋಗುತ್ತಿರುತ್ತೇನೆ. ಕಾಲೇಜಿನ ಪ್ರಾಧ್ಯಾಪಕರು, ವಿದ್ಯಾರ್ಥಿಗಳು,

ಡಾಕ್ಟರ್‌ಗಳು ನನ್ನನ್ನು ಭೇಟಿಯಾಗಲು ಬರುತ್ತಾರೆ ಎಂದು ಅಲ್ಲಿಯ ಜನರಿಗೆ ಗೊತ್ತಿದೆ. ಆದರೆ ನನ್ನ ಮುಂದೆ ಇಸ್ಲಾಂ ಮತ್ತು ಪವಿತ್ರ ಖುರ್‌ಆನಿನ ಮೇಲೆ ಆರೋಪ ಮಾಡಿದ ಯಾವನೇ ಸುಪ್ರಸಿದ್ಧ ಪಂಡಿತನಿಗೆ ನಾನು ಇಸ್ಲಾಂ ಮತ್ತು ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಬೆಳಕಿನಲ್ಲಿ ಪ್ರತ್ಯುತ್ತರ ಕೊಟ್ಟು ಅವನ ಬಾಯಿ ಮುಚ್ಚದೇ ಇರದ ಸನ್ನಿವೇಶ ಇಂದಿನ ತನಕ ಬಂದಿಲ್ಲ. ನಿಸ್ಸಂಶಯವಾಗಿಯೂ ಇಸ್ಲಾಮಿನ ಅಧ್ಯಾಪನೆಗಳ ಬಗ್ಗೆ ಯಾರಿಗೂ ಆಕ್ಷೇಪವೆತ್ತಲು ಸಾಧ್ಯವಿಲ್ಲವೆಂದು ಅವರಿಗೆ ಯಾವಾಗಲೂ ಒಪ್ಪಬೇಕಾಗಿ ಬರುತ್ತಿತ್ತು. ಇದು ನನ್ನೊಂದಿಗೆ ಅಲ್ಲಾಹನ ಕೃಪೆ ಮಾತ್ರವಾಗಿದೆ. ಸತ್ಯದಲ್ಲಿ ನಾನು ಭೌತಿಕ ಜ್ಞಾನ ಎಂಬ ನೆಲೆಯಲ್ಲಿ ಯಾವುದೇ ಅರಿವು ಕಲಿತಿಲ್ಲ. ಆದರೆ ಅಲ್ಲಾಹನು ಸ್ವತಃ ನನಗೆ ಅರಿವು ನೀಡಿದನು ಮತ್ತು ಅವನು ಸ್ವತಃ ನನಗೆ ಎಲ್ಲ ರೀತಿಯ ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ಪಾಲು ನೀಡಿದನು ಎಂಬುದನ್ನು ನನಗೆ ನಿರಾಕರಿಸಲು ಸಾಧ್ಯವಿಲ್ಲ.

ಹೇಗೆ ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸಲಾಯಿತು ಮತ್ತು ಅಲ್ಲಾಹನು ಹೇಗೆ ಕಲಿಸಿದನು ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಸಣ್ಣವನಾಗಿದ್ದಾಗ ಒಂದು ಕನಸನ್ನು ಕಂಡೆನು. ಒಂದು ಸಣ್ಣ ಗಂಟೆ ಬಾರಿಸಿತು ಮತ್ತು ಅದರಿಂದ ಟನ್ ಎಂದು ಶಬ್ಧ ಬಂತು. ಅದು ವರ್ಧಿಸುತ್ತಾ ವರ್ಧಿಸುತ್ತಾ ಒಂದು ಫೋಟೋ ಫ್ರೇಮಿನ ರೂಪವಾಗಿ ಪರಿವರ್ತನೆಗೊಂಡಿತು. ಅನಂತರ ಆ ಫ್ರೇಮಿನಿಂದ ಒಂದು ಫೋಟೋ ಪ್ರತ್ಯಕ್ಷಗೊಂಡಿದ್ದಾಗಿ ನಾನು ಕನಸಿನಲ್ಲಿ ಕಂಡೆನು. ಸ್ವಲ್ಪ ಸಮಯದ ನಂತರ ಆ ಫೋಟೋ ಅಲುಗಾಡಲು ಶುರುವಾಯಿತು. ಅನಂತರ ಅದರಿಂದ ಫಕ್ಕನೆ ಒಂದು ಅಸ್ತಿತ್ವ ನನ್ನ ಮುಂದೆ ಬಂತು. ಅದು ಹೀಗೆ ಹೇಳಿತು: ನಾನು ಅಲ್ಲಾಹನ ದೇವದೂತನಾಗಿದ್ದೇನೆ. ನಿನಗೆ ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಕಲಿಸಲು ಬಂದಿದ್ದೇನೆ. ಕಲಿಸುಕೊಡು ಎಂದು ನಾನು ಹೇಳಿದೆ. ಆಗ ಆ ದೇವದೂತ ನನಗೆ ಸೂರಃ ಫಾತಿಹದ ವ್ಯಾಖ್ಯಾನವನ್ನು ಕಲಿಸಲು ಶುರುಮಾಡಿದರು. ಅವರು ನನಗೆ ಕಲಿಸುತ್ತಲೇ ಹೋದರು. ಅವರು **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್** ತನಕ ತಲುಪಿದಾಗ ಅವರು ಹೇಳಿದರು: ಇದು ವರೆಗೂ ಗತಿಸಿಹೋದ ವ್ಯಾಖ್ಯಾನಗಾರರು ಕೇವಲ ಈ ಆಯತ್ ತನಕ ವ್ಯಾಖ್ಯಾನವನ್ನು ಬರೆದಿರುವರು. ಆದರೆ ನಾನು ನಿಮಗೆ ಇದರ ನಂತರದ ತಫ್ಸೀರ್ ಸಹ ಕಲಿಸುತ್ತೇನೆ. ಹೀಗೆ ಅವರು ನನಗೆ ಸೂರಃ ಫಾತಿಹದ ಸಂಪೂರ್ಣ ವ್ಯಾಖ್ಯಾನವನ್ನು ಕಲಿಸು ಕೊಟ್ಟರು.

ಸತ್ಯದಲ್ಲಿ ಈ ಕನಸಿನ ಅರ್ಥವೇನೆಂದರೆ, ಪವಿತ್ರ ಖುರ್‌ಆನಿನ ಜ್ಞಾನ ಮತ್ತು ಅದನ್ನು ಮನವರಿಕೆ ಮಾಡುವ ಸಾಮರ್ಥ್ಯವನ್ನು ನನ್ನೊಳಗೆ ಇರಿಸಲಾಗಿದೆ ಎಂದಾಗಿದೆ. ಆದ್ದರಿಂದ ಈ ಸಾಮರ್ಥ್ಯ ನನ್ನೊಳಗೆ ಎಷ್ಟಿದೆ ಎಂದರೆ, ಸೂರಃ ಫಾತಿಹದ ಮೂಲಕವೇ ಇಸ್ಲಾಮಿನ ಎಲ್ಲ ಜ್ಞಾನಗಳನ್ನು ಹೊರತೆಗೆದು ವಿವರಿಸಲು ನನಗೆ ಸಾಧ್ಯವೆಂದು ನಾನು ಯಾವುದೇ ಸಭೆಯಲ್ಲಿ ವಾದಿಸಲು ತಯಾರಿದ್ದೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಸಾರ್ವಜನಿಕ ಸಭೆಯಲ್ಲಿ ಈ ಭಾಷಣವನ್ನು ಮಾಡುತ್ತಾ ಲೋಕಕ್ಕೆ ಈ ಚ್ಯಾಲೇಂಜ್, ಪಂಥಾಹ್ವಾನ ನೀಡುತ್ತಿದ್ದಾರೆ. ಆದರೆ ಯಾರೂ ಅವರ ವಾದಕ್ಕೆ ಸವಾಲು ಹಾಕಲು ಬರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಾನು ಸಣ್ಣವನಾಗಿದ್ದೆ. ಸ್ಕೂಲಿನಲ್ಲಿ ಕಲಿಯುತ್ತಿದ್ದೆ. ನಮ್ಮ ಸ್ಕೂಲಿನ ಫುಟ್‌ಬಾಲ್ ಟೀಮ್ ಅಮೃತ್‌ಸರಿನ ಖಾಲಿಸ ಕಾಲೇಜಿನ ಟೀಮ್‌ನೊಂದಿಗೆ ಫುಟ್‌ಬಾಲ್ ಆಡಲು ಹೋಯಿತು. ಸ್ಪರ್ಧೆ ನಡೆಯಿತು ಮತ್ತು ನಮ್ಮ ಟೀಂ ಜಯಿಸಿತು. ಆಗ ನಮ್ಮ ಜಮಾಅತಿನೊಂದಿಗೆ ಮುಸ್ಲಿಮರಿಗೆ ವಿರೋಧವಿದ್ದರೂ, ಈ ವಿಜಯ ಅವರ ಗೌರವಕ್ಕೆ ಕಾರಣವಾಗಿದ್ದಕ್ಕಾಗಿ ಅಮೃತ್‌ಸರಿನ ಒಬ್ಬ ಮುಸ್ಲಿಂ ಸರದಾರ ನಮ್ಮ ಟೀಮನ್ನು ಚಾ ಕುಡಿಯಲು ಕರೆದರು. ನಾವು ಅಲ್ಲಿ ಹೋದಾಗ ನನ್ನನ್ನು ಭಾಷಣ ಮಾಡಲು ನಿಲ್ಲಿಸಲಾಯಿತು. ನಾನು ಆ ಭಾಷಣಕ್ಕಾಗಿ ಯಾವುದೇ ತಯಾರಿ ಮಾಡಿರಲಿಲ್ಲ. ನನ್ನನ್ನು ನಿಲ್ಲಿಸಲಾದಾಗ, ನನಗೆ ತಕ್ಷಣ ದೇವದೂತ ವ್ಯಾಖ್ಯಾನ ಕಲಿಸಿದ ಕನಸು ನೆನಪಿಗೆ ಬಂತು. ಆಗ ನಾನು ಮೊದಲು ಅಲ್ಲಾಹನೊಡನೆ ಹೀಗೆ ದುಆ ಮಾಡಿದೆ: ಯಾ ಅಲ್ಲಾಹ್, ನಿನ್ನ ದೇವದೂತ ನನಗೆ ಸೂರಃ ಫಾತಿಹದ ವ್ಯಾಖ್ಯಾನವನ್ನು ಕಲಿಸಿಕೊಟ್ಟಿದ್ದರು. ಆ ಕನಸು ನಿನ್ನ ಕಡೆಯಿಂದ ಆಗಿತ್ತೋ ಅಥವಾ ನನ್ನ ಸ್ವಂತ ಮನಸ್ಸಿನ ಚಿಂತೆಯಾಗಿತ್ತೇ ಎಂಬುದರ ಪರೀಕ್ಷೆ ನಾನಿಂದು ಮಾಡಲು ಬಯಸುತ್ತೇನೆ.

ಆ ಕನಸು ನಿನ್ನ ಕಡೆಯಿಂದ ಆಗಿದ್ದರೆ, ಸೂರಃ ಫಾತಿಹದ ಬಗ್ಗೆ ಯಾವನೇ ವ್ಯಾಖ್ಯಾನಗಾರ ಇಲ್ಲಿಯ ವರೆಗೂ ಹೇಳಿರದ ಒಂದು ಅಂಶವನ್ನು ನನಗೆ ತಿಳಿಸಿಕೊಡು. ಈ ಪ್ರಾರ್ಥನೆಯನ್ನು ಮಾಡಿದ ಕೂಡಲೇ ಅಲ್ಲಾಹನು ನನ್ನ ಹೃದಯದಲ್ಲಿ ಒಂದು ಸೂಕ್ಷ್ಮ ವಿಷಯವನ್ನು ಹಾಕಿದನು. ನಾನು ಹೇಳಿದೆ: ನೋಡಿರಿ, ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು **ಗೈರಿಲ್ ಮಗ್ಝೂಬಿ ಅಲೈಹಿಂ ವಲಝ್ಝಾಲ್ಲೀನ್** ಎಂಬ ಪ್ರಾರ್ಥನೆಯನ್ನು ಕಲಿಸಿರುವನು. ಎಂದರೆ, ಎಲೈ ಮುಸ್ಲಿಮರೇ, ಕೋಪಕ್ಕೆ ಈಡಾದವರ ಮತ್ತು ದಾರಿ ತಪ್ಪಿದವರ ಮಾರ್ಗದಲ್ಲಿ ಆಗದಿರಲು ನೀವು ಐದು ಹೊತ್ತಿನ ನಮಾಝ್‌ಗಳಲ್ಲಿ ಮತ್ತು ನಮಾಝಿನ ಪ್ರತಿ ರಕಅತಿನಲ್ಲಿ ದುಆ ಮಾಡಬೇಕು ಎಂದು ಕಲಿಸಿಕೊಟ್ಟಿರುವನು. **ಮಗ್‌ಝೂಬ್** ಎಂಬುದರಿಂದ ಯಹೂದಿಗಳು ಮತ್ತು **ಝ್ಝಾಲ್** ಎಂಬುದರಿಂದ ಕ್ರೈಸ್ತರು ಎಂದಾಗಿದೆ ತಾತ್ಪರ್ಯ ಎಂದು ಹಝ್ರತ್ ಪೈಗಂಬರ್(ಸ) ಸ್ವತಃ ಹೇಳಿರುವುದಾಗಿ ಹದೀಸುಗಳಿಂದ ತಿಳಿದುಬರುತ್ತದೆ. ಆದ್ದರಿಂದ **ಗೈರಿಲ್ ಮಗ್‌ಝೂಬಿ** ಎಂದರೆ, ಹೇ ದೇವಾ ನಾವು ಯಹೂದಿರಂತಾಗದಿರಲಿ ಎಂದೂ **ವಲಝ್ಝಾಲ್ಲೀನ್** ಎಂದರೆ, ನಾವು ಕ್ರೈಸ್ತರಂತಾಗದಿರಲಿ ಎಂದೂ ಆಗಿದೆ. ಈ ಉಮ್ಮತಿನಲ್ಲಿ ಒಬ್ಬ ಮಸೀಹ್ ಬರುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವುದರಿಂದಲೂ ಈ ಸಂಗತಿ ಹೆಚ್ಚು ಸ್ಪಷ್ಟವಾಗುತ್ತದೆ. ಆದ್ದರಿಂದ ಯಾರು ಆಗಮಿಸಲಿರುವ ಮಸೀಹ್‌ರನ್ನು ನಿರಾಕರಿಸುವರೋ ಅವರು ಖಂಡಿತ ಯಹೂದಿ ಗುಣವುಳ್ಳವರಾಗುವರು. ಮತ್ತೊಂದೆಡೆ, ಕ್ರೈಸ್ತರ ಪಿತೂರಿ ಒಂದು ಕಾಲದಲ್ಲಿ ವಿಶೇಷವಾಗಿ ಅಧಿಕವಾಗುವುದು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಜನರು ಆಹಾರಕ್ಕಾಗಿ, ನೌಕರಿಗಾಗಿ, ಸಮಾಜದಲ್ಲಿ ಗೌರವ ಗಳಿಸಲಿಕ್ಕಾಗಿ ಕ್ರೈಸ್ತ ಧರ್ಮವನ್ನು ಸ್ವೀಕರಿಸುವರು ಎಂದರ್ಥ ಅಥವಾ ಮೋಸಕ್ಕೆ ಒಳಗಾಗಿ ಮತ್ತು ತಮ್ಮ ಧರ್ಮದ ಅಧ್ಯಾಪನೆಗಳನ್ನು ಮನವರಿಕೆ ಮಾಡಲಾಗದೆ ಕ್ರೈಸ್ತರಾಗುವರು. ಆದರೆ ಅಚ್ಚರಿಯ ಸಂಗತಿಯೇನೆಂದರೆ, ಸೂರಃ ಫಾತಿಹ ಮಕ್ಕದಲ್ಲಿ ಅವತೀರ್ಣವಾದ ಸಮಯದಲ್ಲಿ ಕ್ರೈಸ್ತರು ಮತ್ತು ಯಹೂದಿಗಳು ಇಸ್ಲಾಮಿನ ದೊಡ್ಡ ಶತ್ರುವಾಗಿರಲಿಲ್ಲ. ಆ ಸಮಯದಲ್ಲಿ ಅತ್ಯಂತ ಹೆಚ್ಚಿನ ವಿರೋಧ ಮಕ್ಕದ ಬಹುದೇವಾರಾಧಕರ ಕಡೆಯಿಂದ ಆಗಿತ್ತು. ಆದರೆ ಬಹುದೇವಾರಾಧಕನಾಗದಿರಲಿ ಎಂಬ ಪ್ರಾರ್ಥನೆಯನ್ನು ಅಲ್ಲಾಹನು ಕಲಿಸಲಿಲ್ಲ. ಬದಲಾಗಿ ನಾವು ಯಹೂದಿ ಮತ್ತು ಕ್ರೈಸ್ತರಾಗದಿರಲಿ ಎಂಬ ಪ್ರಾರ್ಥನೆಯನ್ನು ಕಲಿಸಿಕೊಟ್ಟನು. ಇದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಮಕ್ಕದ ಬಹುದೇವಾರಾಧಕರು ಎಂದೆಂದಿಗೂ ಅಳಿಸಿಹೋಗಲ್ಪಡುವರು ಮತ್ತು ಅವರು ನಾಮಾವಾಶೇಷ ಆಗುವರು ಎಂಬ ಭವಿಷ್ಯವಾಣಿ ಈ ಸೂರದ ಮೂಲಕ ಅಲ್ಲಾಹನು ತಿಳಿಸಿದನು. ಆದ್ದರಿಂದ ಅವರ ಕುರಿತು ಯಾವುದೇ ದುಆ ಕಲಿಸುವ ಆವಶ್ಯಕತೆಯೇ ಇರಲಿಲ್ಲ. ಆದರೆ ಯಹೂದಿಯರು ಮತ್ತು ಕ್ರೈಸ್ತರು ಬಾಕಿಯುಳಿಯುವರು. ಆದ್ದರಿಂದ ಅವರ ಪಿತೂರಿಗಳಿಂದ ರಕ್ಷಣೆ ಪಡೆಯಲು ಸದಾ ದುಆ ಮಾಡುವ ಆವಶ್ಯಕತೆಯಿದೆ. ಹೇಗಿದ್ದರೂ ನನ್ನ ಭಾಷಣ ಕೊನೆಗೊಂಡ ನಂತರ ದೊಡ್ಡ ದೊಡ್ಡ ಸರದಾರರು ನನ್ನನ್ನು ಭೇಟಿಯಾದರು ಮತ್ತು ಹೀಗೆ ಹೇಳಿದರು: ನೀವು ಪವಿತ್ರ ಖುರ್‌ಆನನ್ನು ಚೆನ್ನಾಗಿ ಕಲಿತಿದ್ದೀರಿ. ನಾವಂತು ನಮ್ಮ ಪೂರ್ತಿ ಜೀವಿತದಲ್ಲಿ ಮೊದಲ ಬಾರಿ ಈ ಸೂಕ್ಷ್ಮವಾದ ಸಂಗತಿಯನ್ನು ಆಲಿಸಿದ್ದೇವೆ. ಇದೇ ಸತ್ಯ ಸಂಗತಿಯಾಗಿದೆ. ಎಲ್ಲ ವ್ಯಾಖ್ಯಾನಗಳನ್ನು ನೋಡಿರಿ. ಇಂದಿನ ತನಕ ಯಾವನೇ ವ್ಯಾಖ್ಯಾನಗಾರ ಈ ಸೂಕ್ಷ್ಮ ಸಂಗತಿಯನ್ನು ಹೇಳಿಲ್ಲ. ನನಗೆ ಅಲ್ಲಾಹನು ಈ ಸೂಕ್ಷ್ಮ ಸಂಗತಿಯನ್ನು ಮನವರಿಕೆ ಮಾಡಿಸಿಕೊಟ್ಟ ಸಮಯದಲ್ಲಿ, ನನ್ನ ವಯಸ್ಸು ಇಪ್ಪತ್ತು ವರ್ಷದ ಆಸುಪಾಸಾಗಿತ್ತು. ಒಟ್ಟಿನಲ್ಲಿ ಅಲ್ಲಾಹನು ತನ್ನ ದೇವದೂತರ ಮೂಲಕ ನನಗೆ ಪವಿತ್ರ ಖುರ್‌ಆನಿನ ಅರಿವು ದಯಪಾಲಿಸಿದನು. ಒಬ್ಬನಿಗೆ ಖಜಾನೆ ಅಥವಾ ಭಂಡಾರದ ಕೀಲಿಗೈ ಸಿಕ್ಕಿರುವ ಹಾಗೆಯೇ ನನಗೆ ಪವಿತ್ರ ಖುರ್‌ಆನಿನ ಅರಿವಿನ ಕೀಲಿಗೈ ಲಭಿಸಿತ್ತು. ಅಂತಹ ಸಾಮರ್ಥ್ಯವನ್ನು ಅಲ್ಲಾಹನು ನನ್ನೊಳಗೆ ಇರಿಸಿರುವನು. ಪವಿತ್ರ ಖುರ್‌ಆನಿನ ಶ್ರೇಷ್ಠತೆಯನ್ನು ಲೋಕದ ಪಂಡಿತರಲ್ಲಿ ಯಾರಿಗೆ ಬೇಕಾದರೂ ತೋರಿಸಿಕೊಡಲು ನನಗೆ ಸಾಧ್ಯವಿದೆ. ಲಾಹೋರಿನಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಭಾಷಣ ಮಾಡುತ್ತಿದ್ದರು. ಅವರು ಹೇಳಿದರು: ಇದು ಲಾಹೋರ್ ಪಟ್ಟಣವಾಗಿದೆ. ಇಲ್ಲಿ ಯೂನಿವರ್ಸಿಟಿಯಿದೆ. ಅನೇಕ ಕಾಲೇಜುಗಳು ಇಲ್ಲಿ ತೆರೆದಿವೆ. ವಿವಿಧ ಜ್ಞಾನಗಳ ದೊಡ್ಡ ದೊಡ್ಡ ಪಂಡಿತರು ಇಲ್ಲಿರುವರು. ಅವರೆಲ್ಲರೊಡನೆ ನಾನು ಹೇಳುತ್ತೇನೆ: ಲೋಕದ ಯಾವುದೇ ಅರಿವಿನ ಪಂಡಿತ ನನ್ನ ಮುಂದೆ ಬರಲಿ, ಲೋಕದ ಯಾವನೇ ಪ್ರೊಫೆಸ್ಸರ್ ನನ್ನ ಮುಂದೆ ಬರಲಿ, ಲೋಕದ ಯಾವನೇ ವಿಜ್ಞಾನಿ ನನ್ನ ಮುಂದೆ ಬರಲಿ, ಅವರು ತಮ್ಮ ಜ್ಞಾನದ ಮೂಲಕ, ಅರಿವಿನ ಮೂಲಕ ಪವಿತ್ರ ಖುರ್‌ಆನಿನ ಮೇಲೆ ಹಲ್ಲೆ ನಡೆಸಿ ನೋಡಲಿ, ನಾನು ಅಲ್ಲಾಹನ ಅನುಗ್ರಹದಿಂದ ಅವನಿಗೆ ಎಂತಹ ಪ್ರತ್ಯುತ್ತರವನ್ನು ಕೊಡುವೆನು ಎಂದರೆ, ಆ ಆರೋಪಕ್ಕೆ ಸರಿಯಾದ ಉತ್ತರ ನೀಡಲಾಗಿದೆ ಎಂದು ಲೋಕವು ಒಪ್ಪುವುದು. ನಾನು ಅಲ್ಲಾಹನ ವಚನಗಳಿಂದಲೇ, ಪವಿತ್ರ ಖುರ್‌ಆನಿನ ವಚನಗಳ ಮೂಲಕವೇ ಅವನಿಗೆ ಉತ್ತರ ಕೊಡುವೆನು ಎಂದು ನಾನು ವಾದಿಸುತ್ತೇನೆ. (ಮೈಂ ಹೀ ಮುಸ್ಲಿಹ್ ಮೌಊದ್ ಕೀ ಪೇಶ್‌ಗೋಯಿ ಕಾ ಮಿಸ್ದಾಖ್ ಹೂಂ, ಅನ್ವಾರುಲ್ ಉಲೂಮ್, ಸಂಪುಟ–17, ಪುಟ–213–217)

ಮೇಲೆ ಹೇಳಿದ ಘಟನೆ ನಡೆಯುವಾಗ ಹಝ್ರತ್ ಮುಸ್ಲಿಹ್ ಮೌಊದ್(ರ)ರಿಗೆ 20 ವರ್ಷ ಪ್ರಾಯವಾಗಿತ್ತು. ಅಲ್ಲಾಹನ ಮೇಲೆ ಅವರಿಗೆ ದೃಢವಿಶ್ವಾಸವಿತ್ತು. ಆದರೆ ಅಲ್ಲಾಹನ ಮೇಲೆ ಈ ದೃಢವಿಶ್ವಾಸ ಅವರಿಗೆ ಎಷ್ಟನೇ ಪ್ರಾಯದಲ್ಲಿ ಬಂದಿತ್ತು ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಸ್ವತಃ ಹೇಳಿರುವರು. ಚಿಕ್ಕಂದಿನಿಂದಲೇ ಅವರು ಮುಸ್ಲಿಹ್ ಮೌಊದ್ ಆಗಲು ಅರ್ಹರಾಗುತ್ತಿದ್ದರು ಎಂದೂ ಇದರಿಂದ ಗೊತ್ತಾಗುತ್ತದೆ.

ಇದರ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

1900ನೇ ಇಸವಿ ಎಂಬುದು, ನನ್ನ ಹೃದಯಯು ಇಸ್ಲಾಮಿನ ಅಧ್ಯಾಪನೆಗಳ ಕಡೆಗೆ ಗಮನಹರಿಸಲು ಕಾರಣವಾದ ವರ್ಷವಾಗಿತ್ತು. ಆಗ ನನಗೆ 11 ವರ್ಷ ಪ್ರಾಯವಿತ್ತು. ಹಝ್ರತ್ ಮಸೀಹ್ ಮೌಊದ್(ಅ)ರಿಗಾಗಿ ಒಬ್ಬ ವ್ಯಕ್ತಿ ಒಂದು ನಿಲುವಂಗಿಯನ್ನು ಕೊಂಡುಬಂದರು. ನಾನು ಆ ನಿಲುವಂಗಿಯನ್ನು ಪಡೆದೆನು. ಬೇರೆ ಯಾವುದೇ ಕಾರಣದಿಂದಲ್ಲ, ಬದಲಾಗಿ ಅದರ ಬಣ್ಣ ಮತ್ತು ಅದರ ರೂಪ ನನಗೆ ಇಷ್ಟವಾಗಿತ್ತು. ನನಗೆ ಅದನ್ನು ಧರಿಸಲು ಸಾಧ್ಯವಿರಲಿಲ್ಲ. ಏಕೆಂದರೆ ಅದು ಬಹಳ ಉದ್ದದ ಜುಬ್ಬವಾಗಿತ್ತು. ಒಟ್ಟಿನಲ್ಲಿ 1900ನೇ ಇಸವಿಯಲ್ಲಿ ನನಗೆ 11 ವರ್ಷ ಪ್ರಾಯವಾದಾಗ, ಅಲ್ಲಾಹನ ಮೇಲೆ ಏಕೆ ನಂಬಿಕೆ ಇರಿಸಿದ್ದೇನೆ ಮತ್ತು ಅವನ ಅಸ್ತಿತ್ವದ ಪುರಾವೆ ಏನೆಂಬ ಚಿಂತೆ ನನ್ನ ಹೃದಯದಲ್ಲಿ ಉಂಟಾಯಿತು. ನಾನು ತಡರಾತ್ರಿ ವರೆಗೂ ಈ ವಿಷಯದಲ್ಲಿ ಯೋಚಿಸುತ್ತಾ ಇದ್ದೆ. ಕೊನೆಗೆ 10, 11 ಗಂಟೆಗೆ, ದೇವನಿದ್ದಾನೆ ಎಂಬ ತೀರ್ಮಾನವನ್ನು ನನ್ನ ಹೃದಯ ನೀಡಿತು.

ಅದು ನನಗೆ ಎಷ್ಟು ಖುಶಿ ನೀಡಿದ ಘಳಿಗೆ ಆಗಿತ್ತು ಎಂದರೆ, ಒಬ್ಬ ಮಗುವಿಗೆ ಅದರ ತಾಯಿ ಸಿಗುವಾಗ ಲಭಿಸುವ ಸಂತೋಷದಷ್ಟೇ ನನಗೆ ನನ್ನ

ಸೃಷ್ಟಿಕರ್ತನು ಲಭಿಸಿದಾಗ ಉಂಟಾಯಿತು. ಇದಾಗಿತ್ತು ಹನ್ನೊಂದನೇ ವಯಸ್ಸಿನಲ್ಲಿ ಹಝ಼್ರತ್ ಮುಸ್ಲಿಹ್ ಮೌಊದ್(ರ)ರ ಆಲೋಚನೆ. ಕಿವಿಮಾತಿನ ವಿಶ್ವಾಸ, ಸ್ವಂತ ಅರಿವಿನ ವಿಶ್ವಾಸವಾಗಿ ಬದಲಾಯಿತು. ಹೇಗಿದ್ದರೂ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆಗ ನನ್ನ ಸಂತೋಷಕ್ಕೆ ಮಿತಿಯಿರಲಿಲ್ಲ. ಆಗ ನಾನು ಅಲ್ಲಾಹನಲ್ಲಿ ದುಆ ಮಾಡಿದೆ ಮತ್ತು ಒಂದು ದೀರ್ಘಕಾಲ ಹೀಗೆ ದುಆ ಮಾಡುತ್ತಿದ್ದೆ: ಹೇ ದೇವಾ, ನಿನ್ನ ಅಸ್ತಿತ್ವದ ಬಗ್ಗೆ ನನಗೆ ಎಂದಿಗೂ ಸಂಶಯ ಉಂಟಾಗದಿರಲಿ. ಆ ಸಮಯದಲ್ಲಿ ನನಗೆ 11 ವರ್ಷ ಪ್ರಾಯವಾಗಿತ್ತು. ಈಗ ನನಗೆ 35 ವರ್ಷ ಪ್ರಾಯವಿದೆ. ಆದರೆ ಇಂದು ಕೂಡ ಆ ದುಆವನ್ನು ಗೌರವದಿಂದ ಕಾಣುತ್ತೇನೆ. ದೇವಾ, ನಿನ್ನ ಅಸ್ತಿತ್ವದ ಬಗ್ಗೆ ನನಗೆ ಯಾವುದೇ ಸಂಶಯ ಉಂಟಾಗದಿರಲಿ ಎಂದು ಈಗಲೂ ನಾನು ಹೇಳುತ್ತೇನೆ. ಆಗ ನಾನು ಹುಡುಗನಾಗಿದ್ದೆ. ಈಗ ನನಗೆ ಹೆಚ್ಚಿನ ಅನುಭವವಿದೆ. ಆದ್ದರಿಂದ ಈಗ ನಾನು ಹೀಗೆ ದುಆ ಮಾಡುತ್ತೇನೆ: ದೇವಾ, ನಿನ್ನ ಅಸ್ತಿತ್ವದ ಬಗ್ಗೆ ನನಗೆ ದೃಢವಾದ ಅನುಭವ ಜ್ಞಾನವನ್ನು ನೀಡು. ಹೇಗಿದ್ದರೂ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮಾತು ಎಲ್ಲಿಂದ ಎಲ್ಲಿಗೆ ತಲುಪಿದೆ. ನಾನು ಹೇಳುತ್ತಿದ್ದಂತೆ, ಹಝ಼್ರತ್ ಮಸೀಹ್ ಮೌಊದ್(ಅ)ರ ಒಂದು ನಿಲುವಂಗಿಯನ್ನು ನಾನು ಅವರಿಂದ ಪಡೆದಿದ್ದೆ. ನಾನು ಮೇಲೆ ಪ್ರಸ್ತಾಪಿಸಿದ ಯೋಚನೆಗಳ ಅಲೆಗಳು ನನ್ನ ಹೃದಯದಲ್ಲಿ ಏಳಲು ಶುರುವಾದಾಗ ಒಂದು ದಿನ ನಾನು ಝುಹಾ ಸಮಯದಲ್ಲೋ ಇಶ್‌ರಾಖ್ ಸಮಯದಲ್ಲೋ, ಎಂದರೆ ಸೂರ್ಯೋದಯವಾಗಿ ಸ್ವಲ್ಪ ಸಮಯವಾದ ನಂತರ ನಾನು ವುಝೂ಼ ಮಾಡಿಕೊಂಡೆನು ಮತ್ತು ಈಗ ಆ ಜುಬ್ಬವನ್ನು ಅದು ಸುಂದರವಾಗಿದ್ದ ಕಾರಣದಿಂದಲ್ಲ, ಬದಲಾಗಿ ಹಝ಼್ರತ್ ಮಸೀಹ್ ಮೌಊದ್(ಅ)ರದ್ದು ಆಗಿದ್ದ ಕಾರಣದಿಂದ ಮತ್ತು ಅನುಗ್ರಹೀತವಾದ ಕಾರಣದಿಂದ ಅದನ್ನು ಧರಿಸಿದೆ. ಅಲ್ಲಾಹನ ಪ್ರವಾದಿಯರು ಪವಿತ್ರರು ಎಂಬ ಭಾವನೆ ನನ್ನೊಳಗೆ ಮೂಡಿದ ಮೊದಲ ಅನುಭವವಾಗಿತ್ತು ಅದು. ಅನಂತರ ನಾನು ಬಾಗಿಲನ್ನು ಚೆನ್ನಾಗಿ ಮುಚ್ಚಿ, ಬಹಳವಾಗಿ ಅಳುತ್ತಾ ನಫ್ಲ್ ನಮಾಝ಼್‌ನಲ್ಲಿ ದುಆ ಮಾಡಿದೆ. (ಯಾದೆ ಅಯ್ಯಾಮ್, ಅನ್ವಾರುಲ್ ಉಲೂಮ್, ಸಂಪುಟ–8, ಪುಟ–365–366)

ಹನ್ನೊಂದನೇ ವಯಸ್ಸಿನಲ್ಲಿ ಅಲ್ಲಾಹನ ಬಗ್ಗೆ ಇರುವ ಅರಿವು ಹೇಗೆ ಉಂಟಾಯಿತು ಎಂಬುದನ್ನು ಮತ್ತೊಂದೆಡೆ ಹಝ಼್ರತ್ ಮುಸ್ಲಿಹ್ ಮೌಊದ್(ರ) ವಿವರಿಸುತ್ತಾ ಹೇಳುತ್ತಾರೆ: ನನಗೆ ಹನ್ನೊಂದು ವರ್ಷವಾದಾಗ ನನ್ನ ನಾಮಮಾತ್ರವಾದ ನಂಬಿಕೆಯನ್ನು ದೃಢವಿಶ್ವಾಸವನ್ನಾಗಿ ಮಾಡಲು ಅಲ್ಲಾಹನು ತನ್ನ ಕೃಪೆಯಿಂದ ನನಗೆ ಸೌಭಾಗ್ಯ ನೀಡಿದನು. ಮಗ್‌ರಿಬಿನ ನಂತರದ ಸಮಯವಾಗಿತ್ತು. ನಾನು ನನ್ನ ಮನೆಯಲ್ಲಿ ಇದ್ದೆ. ಒಂದೇ ಸವನೆ ನನಗೆ ಹೀಗೆ ಚಿಂತೆಯುಂಟಾಯಿತು: ನನ್ನ ತಂದೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಎಂಬ ಕಾರಣಕ್ಕಾಗಿ ನಾನು ಅಹ್ಮದಿಯಾಗಿರುವೆನೋ ಅಥವಾ ಅಹ್ಮದಿಯಾ ಜಮಾಅತ್ ಎಂಬುದು ಅಲ್ಲಾಹನು ಸ್ಥಾಪಿಸಿದ ಸತ್ಯ ಜಮಾಅತಾಗಿದೆ ಎಂಬ ಕಾರಣಕ್ಕೆ ಅಹ್ಮದಿಯಾಗಿರುವೆನೋ? ಈ ಚಿಂತೆ ಬಂದಾಗ ನಾನು ಹೀಗೆ ತೀರ್ಮಾನ ಮಾಡಿದೆ: ಈ ಬಗ್ಗೆ ಆಲೋಚಿಸುತ್ತಾ ನಾನು ಮನೆಯಿಂದ ಹೊರಡುವೆನು. ಅಹ್ಮದಿಯ್ಯತ್ ಸತ್ಯವಲ್ಲವೆಂದು ನನಗೆ ಅನಿಸಿದರೆ ನಾನು ನನ್ನ ಕೊಠಡಿಗೆ ಪ್ರವೇಶಿಸುವುದಿಲ್ಲ, ಮಾತ್ರವಲ್ಲ ಅಂಗಳದಿಂದಲೇ ಹೊರಗೆ ಹೋಗುವೆನು. ಮರಳಿ ಬರಲಾರೆನು. ಇದು ಹನ್ನೊಂದು ವರ್ಷ ಪ್ರಾಯದ ಹುಡುಗನ ಚಿಂತೆಯಾಗಿತ್ತು. ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹೀಗೆ ತೀರ್ಮಾನ ಮಾಡಿ ಅದರ ಬಗ್ಗೆ ಯೋಚಿಸಲು ಶುರುಮಾಡಿದೆ. ಸಹಜವಾಗಿಯೇ ಇದರ ಕಾರಣದಿಂದ ಕೆಲವು ಪುರಾವೆಗಳು ನನ್ನ ಮುಂದೆ ಬಂತು. ನಾನು ಆ ಪುರಾವೆಗಳನ್ನು ಪರಿಶೋಧನೆ ಮಾಡಲು ಶುರುಮಾಡಿದೆ. ಹೀಗೆ ಒಂದರ ನಂತರ ಮತ್ತೊಂದು ಎಂಬಂತೆ ಪುರಾವೆಗಳನ್ನು ರದ್ದುಗೊಳಿಸುತ್ತಲೂ ಇದ್ದೆ. ಕೊನೆಗೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಂ ಅಲ್ಲಾಹನ ಸತ್ಯಪ್ರವಾದಿಯಾಗಿರುವರೇ ಎಂಬ ಸವಾಲು ನನ್ನ ಮುಂದೆ ಬಂತು. ನನ್ನ ತಂದೆ ತಾಯಂದಿರು ಅವರನ್ನು ಸತ್ಯವಂತರೆಂದು ನಂಬುವ ಕಾರಣದಿಂದ ನಾನು ಅವರನ್ನು ನಂಬುತ್ತಿದ್ದೇನೋ ಅಥವಾ ಪುರಾವೆಗಳ ಆಧಾರದಲ್ಲಿ ಹಝ಼್ರತ್ ಪೈಗಂಬರ್(ಸ) ಸತ್ಯಪ್ರವಾದಿಯಾಗಿರುವರು ನನಗೆ ಗೊತ್ತಾಗಿರುವ ಕಾರಣದಿಂದ ನಂಬುತ್ತಿದ್ದೇನೋ? ಈ ಪ್ರಶ್ನೆ ನನ್ನ ಮುಂದೆ ಬಂದಾಗ, ಈ ವಿಷಯದಲ್ಲೂ ಒಂದು ತೀರ್ಮಾನಕ್ಕೆ ಬರುತ್ತೇನೆ ಎಂದು ನನ್ನ ಮನಸ್ಸು ಹೇಳಿತು. ಅನಂತರ ಸಹಜವಾಗಿಯೇ ನನಗೆ ಅಲ್ಲಾಹನ ಕುರಿತು ನನ್ನ ಹೃದಯದಲ್ಲಿ ಸವಾಲು ಎದ್ದಿತು. ನಾನು ಅಲ್ಲಾಹನನ್ನು ಕೇವಲ ವಿಶ್ವಾಸ ಎಂಬ ನೆಲೆಯಲ್ಲಿ ನಂಬುತ್ತಿದ್ದೇನೋ ಅಥವಾ ಸತ್ಯವಾಗಿಯೂ ಲೋಕಕ್ಕೆ ಒಂದು ದೇವನಿದ್ದಾನೆ ಎಂದು ನನಗೆ ಗೊತ್ತಾಗಿ ನಂಬುತ್ತಿದ್ದೇನೋ ಎಂಬ ಸವಾಲನ್ನು ಕೂಡ ಬಗೆಹರಿಸುವುದು ಆವಶ್ಯಕ ಎಂದು ನನ್ನ ಹೃದಯ ಹೇಳಿತು. ಹೀಗೆ ನಾನು ಅಲ್ಲಾಹನ ಬಗ್ಗೆ ಇರುವ ಸವಾಲಿನ ಬಗ್ಗೆ ಯೋಚಿಸಲು ಶುರುಮಾಡಿದೆ. ಅಲ್ಲಾಹನು ಇರುವನಾದರೆ ಮುಹಮ್ಮದ್(ಸ) ಸತ್ಯವಂತರು. ಮುಹಮ್ಮದ್(ಸ) ಸತ್ಯವಂತರು ಎಂದಾದರೆ ಹಝ಼್ರತ್ ಮಸೀಹ್ ಮೌಊದ್(ಅ) ಕೂಡ ಸತ್ಯವಂತರು. ಹಝ಼್ರತ್ ಮಸೀಹ್ ಮೌಊದ್(ಅ) ಸತ್ಯವಂತರು ಎಂದಾದರೆ, ಖಂಡಿತವಾಗಿಯೂ ಅಹ್ಮದಿಯ್ಯತ್ ಸತ್ಯವಾದ ಜಮಾಅತ್ ಆಗಿದೆ ಎಂದು ನನ್ನ ಹೃದಯ ಹೇಳಿತು. ಲೋಕಕ್ಕೆ ದೇವನಿಲ್ಲವೆಂದಾದರೆ, ಇವುಗಳಲ್ಲಿ ಯಾವುದೂ ಸತ್ಯವಲ್ಲ. ಹೇಗಿದ್ದರೂ ಇಂದು ಈ ಸವಾಲಿಗೆ ಉತ್ತರ ಕಂಡುಹಿಡಿಯುತ್ತೇನೆ ಮತ್ತು ದೇವನಿಲ್ಲವೆಂದು ನನ್ನ ಹೃದಯ ತೀರ್ಪು ನೀಡಿದರೆ, ನಾನು ಮನೆಯಲ್ಲಿ ಇರದೇ ಬೇಗನೇ ಹೊರಗೆ ಹೋಗುವೆನು ಎಂದು ನಾನು ತೀರ್ಮಾನ ಮಾಡಿದೆ. ಈ ತೀರ್ಮಾನವನ್ನು ಮಾಡಿ ನಾನು ಯೋಚಿಸಲು ಶುರುಮಾಡಿದೆ. ಯೋಚಿಸುತ್ತಾ ಹೋದೆ. ಸಣ್ಣವನಾದ ಕಾರಣದಿಂದ ಬುದ್ಧಿಪೂರ್ವಕವಾದ ಉತ್ತರ ಸಿಗುತ್ತಿರಲಿಲ್ಲ. ಆದರೂ ಯೋಚಿಸುತ್ತಾ ಹೋದೆ. ಕೊನೆಗೆ ನನ್ನ ಮಿದುಳು ಆಯಾಸಗೊಂಡಿತು. ಆಗ ನಾನು ಆಕಾಶದ ಕಡೆಗೆ ದೃಷ್ಟಿ ಹಾಯಿಸಿದೆ. ಅದರ ಕಡೆಗೆ ತಲೆಯೆತ್ತಿ ನೋಡಿದೆ. ಅಂದು ಮೋಡಗಳು ಇರಲಿಲ್ಲ. ಆಕಾಶವು ಬಹಳ ಶುಭ್ರವಾಗಿತ್ತು. ನಕ್ಷತ್ರಗಳು ಬಹಳ ಉಜ್ವಲವಾಗಿ ಆಕಾಶದಲ್ಲಿ ಬೆಳಗುತ್ತಿದ್ದುವು. ದನಿದ ಮಿದುಳಿಗೆ ಇದಕ್ಕಿಂತ ಹೆಚ್ಚು ಖುಶಿ ನೀಡುವ ದೃಶ್ಯ ಬೇರೇನು ಇರಲು ಸಾಧ್ಯ? ನಾನು ಆಯಾಸಗೊಂಡಿದ್ದೆ. ಆಕಾಶವನ್ನು ನೋಡುತ್ತಾ ಉಲ್ಲಾಸಭರಿತನಾಗಿದ್ದೆ. ನಕ್ಷತ್ರಗಳನ್ನು ನೋಡುತ್ತಾ ಅದರಲ್ಲೇ ತಲ್ಲೀನನಾದೆನು. ನನ್ನ ಮಿದುಳಿಗೆ ನವಚೈತನ್ಯ ಮತ್ತು ತಾಜಾತನ ಲಭಿಸಿದಾಗ, ನನ್ನ ಹೃದಯ ಹೇಳಿತು: ಎಷ್ಟು ಸುಂದರ ನಕ್ಷತ್ರಗಳು. ಆದರೆ ಈ ನಕ್ಷತ್ರಗಳ ನಂತರ ಏನು? ಅದರ ನಂತರ ಮತ್ತಷ್ಟು ನಕ್ಷತ್ರಗಳು ಇರಬಹುದು ಎಂದು ನನ್ನ ಹೃದಯ ಹೇಳಿತು. ಆ ನಕ್ಷತ್ರಗಳ ನಂತರ ಏನು? ಅದರ ನಂತರ ಮತ್ತಷ್ಟು ನಕ್ಷತ್ರಗಳು ಇರಬಹುದು ಎಂದು ನನ್ನ ಹೃದಯ ಹೇಳಿತು. ಸರಿ ಆ ನಕ್ಷತ್ರಗಳ ನಂತರ ಏನು? ಅದರ ನಂತರ ಮತ್ತಷ್ಟು ನಕ್ಷತ್ರಗಳು ಇರಬಹುದು ಎಂದೇ ನನ್ನ ಹೃದಯ ಹೇಳಿತು. ಸರಿ ಆ ನಕ್ಷತ್ರಗಳ ನಂತರ ಏನು? ಅದರ ನಂತರ ಮತ್ತಷ್ಟು ನಕ್ಷತ್ರಗಳು ಇರಬಹುದು ಎಂದೇ ನನ್ನ ಹೃದಯ ಹೇಳಿತು. ಅದು ಹೇಗೆ, ಈ ನಕ್ಷತ್ರಗಳ ಸಾಲಿಗೆ ಕೊನೆಯಿಲ್ಲವೇ ಎಂದು ನಾನು ಕೇಳಿದೆ. ಕೊನೆಯಿದೆ ಎಂದಾದರೆ ಅದರ ನಂತರವೇನು? ಇದೇ ರೀತಿಯ ಸವಾಲಿನ ಬಗ್ಗೆ ಅನೇಕರು ಅಚ್ಚರಿ ಪಡುತ್ತಿರುತ್ತಾರೆ. ಎಂದರೆ ಅಲ್ಲಾಹನು ಅಪರಿಮಿತನೂ ಅನಂತನೂ ಎಂಬುದರ ಅರ್ಥವೇನು? ಏನಾದರೂ ಮಿತಿ ಇರಬೇಡವೇ? ಇದೇ ಸವಾಲು ನನಗೆ ನಕ್ಷತ್ರಗಳ ಕುರಿತು ಉಂಟಾಯಿತು. ಕೊನೆಗೂ ಇದು ಎಲ್ಲಾದರೂ ಮುಕ್ತಾಯಗೊಳ್ಳುವುದೋ ಇಲ್ಲವೋ? ಕೊನೆಗೊಳ್ಳುತ್ತದೆ ಎಂದಾದರೆ ಅದರ ನಂತರವೇನು? ಕೊನೆಗೊಳ್ಳುವುದಿಲ್ಲವೆಂದಾದರೆ, ಮಿತಿಯಿಲ್ಲದ ಈ ಸಾಲು ಎಂಥದ್ದು? ನನ್ನ ಚಿಂತೆ ಇಲ್ಲಿಯ ವರೆಗೂ ತಲುಪಿದಾಗ ನಾನು ಹೇಳಿದೆ: ಅಲ್ಲಾಹನ ಅಸ್ತಿತ್ವದ ಬಗ್ಗೆ ಪರಿಮಿತ ಮತ್ತು ಅಪರಿಮಿತವೆಂಬ ಸವಾಲೇ ತಪ್ಪಾಗಿದೆ ಮತ್ತು ವ್ಯರ್ಥವಾಗಿದೆ. ಅಲ್ಲಾಹನ ವಿಷಯ ಬಿಡಿ. ನನ್ನ ಮುಂದೆ ಈ ನಕ್ಷತ್ರಗಳು ಇವೆ. ಇದು ಪರಿಮಿತವಾಗಿದೆ ಎಂದಾದರೆ, ಅನಂತರ ಮತ್ತೊಂದು ಸಂಗತಿ ಶುರುವಾಗಬೇಕು. ಇದು ಅಪರಿಮಿತವೆಂದಾದರೆ, ಮನುಷ್ಯನು ಇದನ್ನು ಅಪರಿಮಿತವೆಂದು ಒಪ್ಪಲು ತಯಾರಿರುವನು ಎಂದಾದರೆ, ಅಲ್ಲಾಹನು ಅಪರಿಮಿತನೆಂದು ಒಪ್ಪುವುದರಲ್ಲಿ ಅಡ್ಡಿಯೇನು? ಆಗ ಖಂಡಿತವಾಗಿಯೂ ಅಲ್ಲಾಹನು ಇದ್ದಾನೆ ಎಂದು ನನ್ನ ಹೃದಯ ಹೇಳಿತು. ಏಕೆಂದರೆ, ಅವನ ಅಸ್ತಿತ್ವದ ಬಗ್ಗೆ ಉಂಟಾಗುವ ಅದೇ ಸವಾಲನ್ನು ಅವನು ಪ್ರಕೃತಿಯ ಕುರಿತು ಕೂಡ ಉಂಟಾಗುವಂತೆ ಮಾಡಿರುವನು. ಕಣ್ಣಿಗೆ ಕಾಣದ ಅಲ್ಲಾಹನ ಅಸ್ತಿತ್ವದ ಕುರಿತು ಆಕ್ಷೇಪವೆತ್ತುತ್ತಿರುವಿರಿ ಎಂದಾದರೆ, ನಿಮ್ಮ ಕಣ್ಣಿಗೆ ಕಾಣುವ ಇಂತಹ ಸಂಗತಿಗಳ ಕುರಿತು ನಿಮ್ಮ ಉತ್ತರವೇನು? ಇದಕ್ಕೆ ನಿಮ್ಮ ಬಳಿ ಉತ್ತರವಿಲ್ಲವೆಂದಾದರೆ, ಅಲ್ಲಾಹನ ಕುರಿತು, ಅಲ್ಲಾಹನು ಅಪರಿಮಿತನು ಎಂಬ ಸಂಗತಿ ನಮಗೆ ಅರ್ಥವಾಗುತ್ತಿಲ್ಲವೆಂದು ಆರಾಮವಾಗಿ ಹೇಗೆ ಹೇಳಬಲ್ಲಿರಿ? ಮತ್ತೊಂದೆಡೆ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು: ಈ ಪುರಾವೆಯಿಂದ ನನಗೆ ಅಲ್ಲಾಹನ ಅಸ್ತಿತ್ವದ ಬಗ್ಗೆ ದೃಢವಿಶ್ವಾಸವುಂಟಾದಾಗ, ಹಝ಼್ರತ್ ಪೈಗಂಬರ್(ಸ) ಮತ್ತು ಹಝ಼್ರತ್ ಮಸೀಹ್ ಮೌಊದ್(ಅ)ರ ಸತ್ಯತೆಯೂ ನನಗೆ ಸ್ಪಷ್ಟವಾಯಿತು. (ಖುತ್‌ಬಾತೆ ಮಹ್ಮೂದ್, ಸಂಪುಟ–19, ಪುಟ–689–692)

ಹೇಗಿದ್ದರೂ ಅಲ್ಲಾಹನು ಹಝ಼್ರತ್ ಮುಸ್ಲಿಹ್ ಮೌಊದ್(ರ)ರನ್ನು ಜ್ಞಾನಗಳಿಂದ ತುಂಬಿಸಿದ ಬಗ್ಗೆ ಇದೂ ಒಂದು ಪುರಾವೆಯಾಗಿದೆ. ಸಾಮಾನ್ಯ ವಿದ್ಯಾಭ್ಯಾಸವನ್ನು ಹೊಂದಿದ ಒಬ್ಬ ಹುಡುಗನ ಹೃದಯದಲ್ಲಿ ಅಲ್ಲಾಹನು ಈ ಸವಾಲು ಉಂಟುಮಾಡಿದ ನಂತರ ಅಲ್ಲಾಹನೇ ಮಾರ್ಗದರ್ಶನ ಮಾಡಿದನು.

ಅವರ ಕುರಿತು ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಇರಿಸುತ್ತಿದ್ದ ಯೋಚನೆಯೇನು ಎಂಬುದರ ಬಗ್ಗೆ ಹಝ಼್ರತ್ ಮುಸ್ಲಿಹ್ ಮೌಊದ್(ರ) ಹೇಳಿರುವರು. ಈ ಪುತ್ರನೇ ಮುಸ್ಲಿಹ್ ಮೌಊದ್ ಆಗುವರು ಎಂದು ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ತಿಳಿದಿದ್ದರು ಎಂದು ಅದರಿಂದ ಗೊತ್ತಾಗುತ್ತದೆ. ಹಝ಼್ರತ್ ಮುಸ್ಲಿಹ್ ಮೌಊದ್(ರ) ಒಂದೆರಡು ಘಟನೆಗಳನ್ನು ಪ್ರಸ್ತಾಪಿಸಿರುವರು. ಅವರು ಹೇಳುತ್ತಾರೆ: ಬಹಳ ವರ್ಷಗಳ ಹಿಂದೆ ನಾನು ಆರಂಭದಲ್ಲಿ ಕೆಲವು ಸ್ನೇಹಿತರ ಜೊತೆ ಸೇರಿಕೊಂಡು **ತಶ್‌ಹೀಝ಼ುಲ್ ಅದ್‌಼ಹಾನ್** ಎಂಬ ನಿಯತಕಾಲಿಕೆಯನ್ನು ಜಾರಿಗೊಳಿಸಿದಾಗ ಆ ನಿಯತಕಾಲಿಕೆಯನ್ನು ಪ್ರಕಾಶನಗೊಳಿಸುವುದರ ಉದ್ದೇಶ ಲಕ್ಷ್ಯಗಳ ಬಗ್ಗೆ ನಾನು ಅದರಲ್ಲಿ ಒಂದು ಲೇಖನವನ್ನು ಬರೆದೆನು. ಅದನ್ನು ಹಝ಼್ರತ್ ಮಸೀಹ್ ಮೌಊದ್(ಅ)ರ ಮುಂದೆ ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ವಿಶೇಷವಾಗಿ ಶ್ಲಾಘಿಸಿದರು ಮತ್ತು ಅದನ್ನು ಖಂಡಿತ ಓದಬೇಕೆಂದು ಹಝ಼್ರತ್ ಮಸೀಹ್ ಮೌಊದ್(ಅ)ರೊಡನೆ ಅವರು ಹೇಳಿದರು. ಹೀಗೆ ಹಝ಼್ರತ್ ಮಸೀಹ್ ಮೌಊದ್(ಅ) ಮಸ್ಜಿದ್ ಮುಬಾರಕ್‌ನಲ್ಲಿ ಆ ಮ್ಯಾಗಝಿ಼ನನ್ನು ತರಸಿಕೊಂಡರು ಮತ್ತು ಮೌಲವಿ ಮುಹಮ್ಮದ್ ಅಲಿ ಸಾಹಿಬ್‌ರೊಡನೆ ಆ ಲೇಖನವನ್ನು ಓದಿಹೇಳಲು ಹೇಳಿದರು. ಆದರೆ ಅನಂತರ ವೈಯಕ್ತಿಕವಾಗಿ ಹಝ಼್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ನನ್ನನ್ನು ಭೇಟಿಯಾಗಿ ಹೇಳಿದರು: ಮಿಯಾ, ನಿನ್ನ ಲೇಖನ ಬಹಳ ಉತ್ತಮವಾಗಿತ್ತು. ಆದರೆ ನನ್ನ ಮನಸ್ಸಿಗೆ ಅದು ಖುಶಿ ತಂದಿಲ್ಲ. ಏಕೆಂದರೆ ನಿನ್ನ

ಮುಂದೆ ಹಝ್ರತ್ ಮಸೀಹ್ ಮೌಊದ್(ಅ)ರ ಗ್ರಂಥವಾದ ಬರಾಹೀನೆ ಅಹ್ಮದಿಯಾ ಇತ್ತು. ಅದರಿಂದ ಪ್ರಯೋಜನ ಪಡೆದು ಅದಕ್ಕಿಂತ ಉತ್ತಮವಾದದ್ದನ್ನು ನೀನು ಕೊಂಡುಬರುತ್ತೀಯ ಎಂದು ನಾನು ಆಶಿಸಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಬರಾಹೀನೆ ಅಹ್ಮದಿಯಾ ಎಂಬ ಗ್ರಂಥವನ್ನು ಬರೆದಾಗ ಅವರ ಮುಂದೆ ಅಂತಹ ಯಾವುದೇ ಇಸ್ಲಾಮಿಕ ಸಾಹಿತ್ಯವಿರಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನಿಂದ ನಿಯೋಜಿತರಾದ ವ್ಯಕ್ತಿಗಿಂತ ಉತ್ತಮವಾದ ಅರಿವನ್ನು ಬೇರೆಯವರಿಗೆ ಕೊಂಡುಬರಲು ಸಾಧ್ಯವಿಲ್ಲ. ಅವರ ಗ್ರಂಥಗಳಲ್ಲಿ ಅಡಗಿರುವ ಅರಿವಿನ ಖಜಾನೆಗಳನ್ನು ಹೊರತೆಗೆಯಬಹುದು ಅಷ್ಟೆ. ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಹೇಳಿದ್ದರ ತಾತ್ಪರ್ಯವೇನೆಂದರೆ, ಹಿಂದಿನ ಬುನಾದಿಯನ್ನು ಮೇಲಕ್ಕೆ ಎತ್ತುವುದೇ ನಂತರ ಬರುವ ಪೀಳಿಗೆಗಳ ಕೆಲಸವಾಗಿದೆ. ಇದು ಎಂತಹ ಸಂಗತಿಯೆಂದರೆ, ಇದನ್ನು ಮುಂದಿನ ಪೀಳಿಗೆಗಳು ಮನವರಿಕೆ ಮಾಡಿದರೆ ಸ್ವತಃ ಅನುಗ್ರಹಗಳನ್ನು ಮತ್ತು ವರದಾನಗಳನ್ನು ಗಳಿಸಬಹುದಾಗಿದೆ. ಮಾತ್ರವಲ್ಲ ಸಮುದಾಯದಕ್ಕೆ ಅನುಗ್ರಹಗಳು ಮತ್ತು ಕೃಪೆಗಳು ಲಭಿಸಲು ಅವರು ಕಾರಣಕರ್ತರಾಗುವರು. ಆದರೆ ಮುಂದಾಗುವ ಪ್ರಯತ್ನವು ಒಳ್ಳೆಯ ಸಂಗತಿಗಳಲ್ಲಿ ಆಗಿರಬೇಕು. ಅದಲ್ಲದೇ ಕಳ್ಳನ ಮಗನು ತಂದೆಗಿಂತ ದೊಡ್ಡ ಕಳ್ಳನಾಗಲು ಪ್ರಯತ್ನಿಸುವುದಲ್ಲ. ಬದಲಾಗಿ ನಮಾಝ್ ಮಾಡುವ ವ್ಯಕ್ತಿಯ ಮಕ್ಕಳು ತಂದೆಗಿಂತ ಉತ್ತಮವಾಗಿ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು. (ಖುತ್‌ಬಾತೆ ಮಹ್ಮೂದ್, ಸಂಪುಟ–3, ಪುಟ–484–485)

ಹಝ್ರತ್ ಮುಸ್ಲಿಹ್ ಮೌಊದ್(ರ)ರ ದುರ್ಬಲ ಆರೋಗ್ಯ ಮತ್ತು ವಿದ್ಯಾಭ್ಯಾಸದ ಬಗ್ಗೆ ಗೊತ್ತಿದ್ದೂ ಅತ್ಯುತ್ತಮವಾದ ಲೇಖನಗಳನ್ನು ಬರೆಯುವ ಸಾಮರ್ಥ್ಯವನ್ನು ಈ ಹುಡುಗನು ಹೊಂದಿರುವನು ಎಂಬ ಉನ್ನತ ಆಲೋಚನೆಗಳನ್ನು ಹಝ್ರತ್ ಮುಸ್ಲಿಹ್ ಮೌಊದ್(ರ)ರ ಕುರಿತು ಹಝ್ರತ್ ಖ಼ಲೀಫ ಅವ್ವಲ್(ರ) ಇರಿಸಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಆರೋಗ್ಯದ ಕುರಿತು ಬೇರೊಂದು ಘಟನೆಯನ್ನು ಹೇಳುತ್ತಾರೆ: ನನ್ನ ವಿದ್ಯಾಭ್ಯಾಸದ ವಿಷಯದಲ್ಲಿ ನನ್ನ ಮೇಲೆ ಅತ್ಯಂತ ಹೆಚ್ಚಿನ ಔದಾರ್ಯ ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ)ರದ್ದಾಗಿದೆ. ಅವರು ವೈದ್ಯರು ಕೂಡ ಆಗಿದ್ದ ಕಾರಣ, ಪುಸ್ತಕದ ಕಡೆಗೆ ಹೆಚ್ಚು ಸಮಯ ನೋಡಲು ಯೋಗ್ಯವಾದ ಆರೋಗ್ಯ ನನಗೆ ಇಲ್ಲವೆಂದು ಅವರಿಗೆ ಗೊತ್ತಿತ್ತು. ಆದ್ದರಿಂದ ಅವರು ನನ್ನನ್ನು ಅವರ ಬಳಿ ಕುಳ್ಳಿರಿಸುತ್ತಿದ್ದರು ಮತ್ತು ಹೀಗೆ ಹೇಳುತ್ತಿದ್ದರು: ಮಿಯಾ ನಾನು ಓದುತ್ತಾ ಹೋಗುತ್ತೇನೆ. ನೀನು ಕೇಳುತ್ತಾ ಹೋಗು. ನನ್ನ ಕಣ್ಣುಗಳಲ್ಲಿ ಕುರುಗಳಿದ್ದುವು. ಈ ಕುರುಗಳ ಕಾರಣದಿಂದ ನನ್ನ ಕಣ್ಣುಗಳಲ್ಲಿ ಮೂರ್‍ನಾಲ್ಕು ವರ್ಷಗಳ ತನಕ ನೋವು ಇರುತ್ತಿತ್ತು. ನನ್ನ ಕಣ್ಣಿನ ದೃಷ್ಟಿ ನಷ್ಟವಾಗುವುದು ಎಂದು ಡಾಕ್ಟರ್‌ಗಳು ಹೇಳಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ನನ್ನ ಆರೋಗ್ಯಕ್ಕಾಗಿ ವಿಶೇಷವಾಗಿ ದುಆಗಳನ್ನು ಮಾಡಲು ಮತ್ತು ಅದರೊಂದಿಗೆ ಉಪವಾಸಗಳನ್ನು ಇರಿಸಲು ಶುರುಮಾಡಿದರು. ಅವರ ಎಷ್ಟು ಉಪವಾಸಗಳನ್ನು ಇರಿಸಿದ್ದರು ಎಂದು ನನಗೆ ಗೊತ್ತಿಲ್ಲ. ಏಳರ ತನಕ ಉಪವಾಸಗಳನ್ನು ಇರಿಸಿರಬಹುದು. ಕೊನೆಯ ಉಪವಾಸವನ್ನು ಕೊನೆಗೊಳಿಸಿ ಅದನ್ನು ತೆರೆಯಲಿಕ್ಕಾಗಿ ಅವರು ಬಾಯಿಗೆ ಏನೋ ಹಾಕಿದಾಗ ಒಂದೇ ಸವನೆ ನಾನು ಕಣ್ಣುಗಳನ್ನು ತೆರೆದೆನು ಮತ್ತು ನನಗೀಗ ಕಾಣಬಹುದಾಗಿದೆ ಎಂದು ನಾನು ಉಚ್ಚಸ್ವರದಲ್ಲಿ ಹೇಳಿದೆನು. ಆದರೆ ಈ ರೋಗದ ತೀವ್ರತೆ ಮತ್ತು ಅದು ನಿರಂತರವಾಗಿ ಇದ್ದ ಕಾರಣದಿಂದ ನನ್ನ ಒಂದು ಕಣ್ಣಿನ ದೃಷ್ಟಿ ನಷ್ಟವಾಯಿತು. ನನ್ನ ಎಡಗಣ್ಣಿಗೆ ದೃಷ್ಟಿ ಶಕ್ತಿಯಿಲ್ಲ. ನಾನು ರಸ್ತೆಯನ್ನು ನೋಡಬಲ್ಲನು ಆದರೆ ಪುಸ್ತಕವನ್ನು ಓದಲಾರೆನು. ಅಪರಿಚಿತನಾದ ವ್ಯಕ್ತಿ 4 ಫುಟ್ ದೂರದಲ್ಲಿ ನಿಂತರೆ ಅವನ ಮುಖವನ್ನು ಸರಿಯಾಗಿ ಗುರುತು ಹಿಡಿಯಲು ನನಗೆ ಸಾಧ್ಯವಲ್ಲ. ಬಲಗಣ್ಣಿನ ಮೂಲಕ ಮಾತ್ರವೇ ನೋಡಬಹುದಾಗಿದೆ. ಆದರೆ ಅದರಲ್ಲೂ ಕುರುಗಳು ಇದ್ದುವು. ಅದು ಎಷ್ಟು ಅಧಿಕವಿತ್ತು ಎಂದರೆ ಅನೇಕ ರಾತ್ರಿಗಳು ಎಚ್ಚರಗೊಂಡೇ ಕಳೆಯುತ್ತಿದ್ದೆ.

ಇದಾಗಿತ್ತು ಅವರ ಆರೋಗ್ಯದ ಸ್ಥಿತಿ. ಅನಂತರ ಅವರ ಸಾಹಿತ್ಯ ಮತ್ತು ಜ್ಞಾನಪರವಾದ ಕೆಲಸಗಳನ್ನು ನೋಡಿರಿ. ಅಲ್ಲಾಹನು ಯಾವ ರೀತಿಯ ನೆರವು ಮತ್ತು ಸಹಾಯಗಳನ್ನು ಅವರಿಗೆ ದಯಪಾಲಿಸಿದ್ದನು ಎಂದು ನೋಡಿರಿ. ಹೇಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನ್ನ ಕಲಿಕೆ ನನ್ನ ಇಷ್ಟ ಪ್ರಕಾರವಾಗಿರುವುದು ಎಂದು ಹಝ್ರತ್ ಮಸೀಹ್ ಮೌಊದ್(ರ) ನನ್ನ ಅಧ್ಯಾಪಕರೊಡನೆ ಹೇಳಿಕೊಟ್ಟಿದ್ದರು. ನಾನು ಎಷ್ಟು ಕಲಿಯಲು ಬಯಸುತ್ತೇನೋ ಅಷ್ಟು ಕಲಿಯಲಿ, ಕಲಿಯದಿದ್ದರೆ ಹೆಚ್ಚಿನ ಒತ್ತಡ ಹೇರಬಾರದು, ಏಕೆಂದರೆ ಕಲಿಕೆಯ ಭಾರವನ್ನು ಸಹಿಸುವಷ್ಟು ಆರೋಗ್ಯವಿಲ್ಲವೆಂದು ಹೇಳಿದ್ದರು. ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ಹಝ್ರತ್ ಖ಼ಲೀಫ ಅವ್ವಲ್(ರ)ರಿಂದ ಬುಖ಼ಾರಿ ಕಲಿಯಬೇಕೆಂದು ಮಾತ್ರ ಹಝ್ರತ್ ಮಸೀಹ್ ಮೌಊದ್(ಅ) ಅನೇಕ ಬಾರಿ ಹೇಳುತ್ತಿದ್ದರು. ಅದರೊಂದಿಗೆ ಸ್ವಲ್ಪ ವೈದ್ಯಶಾಸ್ತ್ರವನ್ನು (ರೋಗ ಚಿಕಿತ್ಸೆ) ಕಲಿಯಬೇಕು, ಏಕೆಂದರೆ ಅದು ನಮ್ಮ ಕೌಟುಂಬಿಕ ವೃತ್ತಿಯಾಗಿದೆ ಎಂದು ಹೇಳಿದ್ದರು.

ಹೇಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಟ್ಟಿನಲ್ಲಿ ಇದಾಗಿತ್ತು ನನ್ನ ವಿದ್ಯಾಭ್ಯಾಸ. ಸತ್ಯದಲ್ಲಿ ನನಗೆ ಬೇರೆ ನಿರ್ವಾಹವಿರಲಿಲ್ಲ. ಏಕೆಂದರೆ ಕಣ್ಣುಗಳ ನೋವು ಅಲ್ಲದೇ ನನಗೆ ಕರುಳಿನ ರೋಗವೂ ಇತ್ತು. ಅನೇಕ ರೋಗಗಳು ಬೇರೆಯೂ ಇದ್ದುವು. ಆರಾರು ತಿಂಗಳಷ್ಟು ಕಾಲ ಬೇಳೆಯ ನೀರು ಅಥವಾ ಸೊಪ್ಪಿನ ನೀರನ್ನು ನನಗೆ ನೀಡಲಾಗುತ್ತಿತ್ತು. ಅನೇಕ ರೋಗಗಳ ಜೊತೆಗೆ ಆರಾರು ತಿಂಗಳುಗಳ ಕಾಲ ಜ್ವರ ಬರುತ್ತಿತ್ತು. ಕಲಿಯುವಷ್ಟು ಕಲಿಯಲಿ, ಹೆಚ್ಚಿನ ಒತ್ತಡ ಹೇರಬಾರದು ಎಂದೆಲ್ಲ ನನ್ನ ಬಗ್ಗೆ ನನ್ನ ಹಿರಿಯರು ತೀರ್ಪು ನೀಡಿರುವುದರಿಂದ ನನ್ನ ವಿದ್ಯಾಭ್ಯಾಸದ ಸ್ಥಿತಿ ಏನಾಗಿರಬಹುದು ಎಂದು ಯಾರಿಗೆ ಬೇಕಾದರೂ ಊಹಿಸಬಹುದಾಗಿದೆ.

ಒಂದು ಬಾರಿ ನನ್ನ ತಾತರಾದ ಹಝ್ರತ್ ಮೀರ್ ನಾಸಿರ್ ನವಾಬ್ ಸಾಹಿಬ್(ರ) ನನ್ನ ಉರ್ದು ಪರೀಕ್ಷೆ ನಡೆಸಿದರು. ಈಗಲೂ ನನ್ನ ಕೈ ಬರಹ ಒಳ್ಳೆಯದಲ್ಲ. ಆದರೆ ಆ ಕಾಲದಲ್ಲಿ ನನ್ನ ಕೈಬರಹ ಯಾರಿಗೂ ಓದಲಾರದಷ್ಟು ಕೆಟ್ಟದ್ದಾಗಿತ್ತು. ನಾನು ಪರೀಕ್ಷೆಯಲ್ಲಿ ಏನು ಬರೆದಿರುವನು ಎಂದು ಅವರು ಬಹಳ ಪ್ರಯತ್ನದಿಂದ ನೋಡುತ್ತಿದ್ದರು. ಆದರೆ ಏನೂ ಗೊತ್ತಾಗಲಿಲ್ಲ. ಅವರು ಕೋಪ ಪ್ರಕೃತದವರಾಗಿದ್ದರು. ಅವರು ಕೋಪದಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿಗೆ ಹೋದರು. ನಾನು ಸಹ ಮನೆಯಲ್ಲೇ ಇದ್ದೆ. ನಾವಂತು ಮೊದಲೇ ಅವರ ಕೋಪ ಸ್ವಭಾವದ ಕಾರಣದಿಂದ ಹೆದರುತ್ತಿದ್ದೆವು. ನನ್ನ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರ ಬಳಿ ದೂರು ನೀಡಲು ಅವರು ಬಂದಾಗ, ಇನ್ನು ಏನಾಗಬಹುದು ಎಂದು ಯೋಚಿಸಿ ಹೆದರಿಕೊಂಡೆನು. ಹೇಗಿದ್ದರೂ ಮೀರ್ ಸಾಹಿಬ್ ಬಂದು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೇಳಿದರು: ಮಹ್ಮೂದ್‌ರ ಶಿಕ್ಷಣದ ಬಗ್ಗೆ ನಿಮಗೆ ಕಿಂಚಿತ್ತೂ ಗಮನವಿಲ್ಲ. ನಾನು ಅವರ ಉರ್ದು ಪರೀಕ್ಷೆ ನಡೆಸಿದ್ದೆ. ನೀವು ಅವರ ಪೇಪರನ್ನು ಸ್ವಲ್ಪ ನೋಡಿರಿ. ಎಷ್ಟು ಕಳಪೆ ಕೈಬರಹವೆಂದರೆ, ಯಾರಿಗೂ ಅದನ್ನು ಓದಲು ಸಾಧ್ಯವಲ್ಲ. ನೀವು ಸ್ವಲ್ಪವೂ ಪರಿವೆ ಮಾಡುತ್ತಿಲ್ಲ. ಹುಡುಗನ ಜೀವನ ಹಾಳಾಗುತ್ತಿದೆ. ಮೀರ್ ಸಾಹಿಬ್‌ರ ಈ ಆವೇಶವನ್ನು ನೋಡಿಕೊಂಡು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಮೌಲವಿ ಸಾಹಿಬ್‌ರನ್ನು ಕರೆಯಿರಿ. ಯಾವುದಾದರೂ ತೊಂದರೆಯ ವಿಷಯ ಮುಂದೆ ಬಂದರೆ, ಅವರು ಯಾವಾಗಲೂ ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್‌ರನ್ನು ಕರೆಯುತ್ತಿದ್ದರು. ಹಝ್ರತ್ ಖ಼ಲೀಫ ಅವ್ವಲ್‌ರಿಗೆ ನನ್ನೊಡನೆ ಬಹಳ ಪ್ರೀತಿಯಿತ್ತು. ಅವರು ಅಲ್ಲಿಗೆ ಬಂದು ಮಾಮೂಲಿಯಂತೆ ತಲೆ ತಗ್ಗಿಸಿ ಒಂದು ಕಡೆ ನಿಂತುಕೊಂಡರು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ಮೌಲವಿ ಸಾಹಿಬ್, ನಾನು ನಿಮ್ಮನ್ನು ಕರೆದದ್ದು ಏಕೆಂದರೆ, ಮಹ್ಮೂದ್ ಬರೆದದ್ದು ಓದಲು ಆಗುತ್ತಿಲ್ಲವೆಂದು ಮೀರ್ ಸಾಹಿಬ್ ಹೇಳುತ್ತಿದ್ದಾರೆ. ಮಹ್ಮೂದ್‌ನ ಪರೀಕ್ಷೆ ನಡೆಸಬೇಕೆಂದು ನಾನು ಬಯಸುತ್ತೇನೆ. ಹೀಗೆ ಹೇಳುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಲೇಖನಿಯನ್ನು ಎತ್ತಿದರು. ಎರಡು ಮೂರು ಸಾಲುಗಳಲ್ಲಿ ಒಂದು ವಾಕ್ಯವನ್ನು ಬರೆದು ನನಗೆ ಕೊಟ್ಟರು ಮತ್ತು ಅದನ್ನು ನೋಡಿ ಬರೆಯಲು ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ನಡೆಸಿದ ಪರೀಕ್ಷೆ ಇದಾಗಿತ್ತು. ನಾನು ಬಹಳ ಜಾಗರೂಕತೆಯಿಂದ ಮತ್ತು ಬಹಳ ಯೋಚಿಸಿ ಅದನ್ನು ನೋಡಿ ಬರೆದೆನು. ಮೊದಲನೆಯದಾಗಿ ಆ ವಾಕ್ಯ ಅಷ್ಟು ದೀರ್ಘವಾಗಿರಲಿಲ್ಲ, ಎರಡನೆಯದಾಗಿ ನೋಡಿ ಬರೆಯಬೇಕಾಗಿತ್ತು. ನೋಡಿ ಬರೆಯುವುದು ಬಹಳ ಸುಲಭದ ಸಂಗತಿಯಾಗಿದೆ. ಹೀಗೆ ನಾನು ಮೆಲ್ಲಮೆಲ್ಲನೆ ನೋಡಿ ಬರೆದೆನು. ಅಲಿಫ್, ಬಾ ಇತ್ಯಾದಿಗಳನ್ನು ಬಹಳ ಜಾಗರೂಕತೆಯಿಂದ ಬರೆದೆನು. ನಾನು ಬರೆದದ್ದನ್ನು ಹಝ್ರತ್ ಮಸೀಹ್ ಮೌಊದ್(ಅ) ನೋಡಿದಾಗ ಅವರು ಹೇಳಿದರು: ಮೀರ್ ಸಾಹಿಬ್‌ರ ಮಾತಿನಿಂದ ನಾನು ಬಹಳ ಚಿಂತಿತನಾಗಿದ್ದೆ. ಆದರೆ ಮಹ್ಮೂದಿನ ಕೈಬರಹ ನನ್ನ ಕೈಬರಹದೊಂದಿಗೆ ಹೋಲಿಕೆಯಿದೆ. ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಮೊದಲೇ ನನ್ನ ಪರವಾಗಿ ಇರುತ್ತಿದ್ದರು. ನನ್ನ ನೆರವಿಗಾಗಿಯೇ ಇರುವವರು ಎಂಬಂತೆ ಆಗಿತ್ತು ಅವರ ಸ್ಥಿತಿ. ಅವರು ಹೇಳಿದರು: ಹುಝೂರ್ ಮೀರ್ ಸಾಹಿಬ್‌ರು ಸುಮ್ಮನೇ ಕೋಪಗೊಂಡಿರುವರು. ಸತ್ಯದಲ್ಲಿ ಮಹ್ಮೂದ್‌ನ ಕೈಬರಹ ಬಹಳ ಉತ್ತಮವಾದುದಾಗಿದೆ. ನೋಡಿರಿ ಇಂತಹ ಸ್ಥಿತಿಯಲ್ಲಿ ನಾನು ಬಾಹ್ಯವಾದ ಕಲಿಕೆಯನ್ನು ಹೇಗೆ ಗಳಿಸಲು ಸಾಧ್ಯ?

ತನ್ನ ವಿದ್ಯಾರ್ಹತೆಯ ಬಗ್ಗೆ ಒಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಖ಼ಲೀಫ ಅವ್ವಲ್(ರ) ನನ್ನೊಡನೆ ಹೀಗೆ ಹೇಳುತ್ತಿದ್ದರು: ಮಿಯಾ. ನಿನ್ನದು ನೀನು ಸ್ವತಃ ಕಲಿಯಲು ಯೋಗ್ಯವಾದ ಆರೋಗ್ಯವಲ್ಲ. ನನ್ನ ಬಳಿಗೆ ಬರುತ್ತಿರು. ನಾನು ಓದುತ್ತಾ ಹೋಗುವೆನು. ನೀನು ಆಲಿಸುತ್ತಾ ಹೋಗು. ಹೀಗೆ ಅವರು ಬಹಳ ಕಷ್ಟಪಟ್ಟು ಮೊದಲು ಪವಿತ್ರ ಖುರ್‌ಆನ್ ಕಲಿಸಿದರು. ಅನಂತರ ಬುಖ಼ಾರಿ ಕಲಿಸಿದರು. ಮೆಲ್ಲ ಮೆಲ್ಲನೆ ಓದುವ ರೀತಿಯಾಗಿರಲಿಲ್ಲ ಅವರದ್ದು. ಅವರು ಪವಿತ್ರ ಖುರ್‌ಆನ್ ಓದುತ್ತಾ ಅದರೊಂದಿಗೆ ಅದರ ಅರ್ಥವನ್ನು ಹೇಳುತ್ತಾ ಹೋಗುತ್ತಿದ್ದರು. ಆವಶ್ಯಕವೆಂದು ತೋರುವ ಏನಾದರೂ ಸಂಗತಿಯಿದ್ದರೆ ಹೇಳಿಕೊಡುತ್ತಿದ್ದರು. ಇಲ್ಲದಿದ್ದರೆ ಬೇಗಬೇಗನೆ ಓದುತ್ತಾ ಹೋಗುತ್ತಿದ್ದರು. ಮೂರು ತಿಂಗಳಲ್ಲಿ ಪೂರ್ತಿ ಖುರ್‌ಆನನ್ನು ಓದಿಸಿದ್ದರು. ಹಝ್ರತ್ ಮಸೀಹ್ ಮೌಊದ್(ಅ)ರ ನಿಧನದ ನಂತರ ಅವರು ನನ್ನೊಡನೆ ಹೇಳಿದರು: ಮಿಯಾ ನನ್ನಿಂದ ಬುಖ಼ಾರಿಯನ್ನು ಓದಿ ಮುಗಿಸು. ಹೀಗೆ ನಾನು ಹಝ್ರತ್ ಖ಼ಲೀಫ ಅವ್ವಲ್(ರ)ರಿಂದ ಹಝ್ರತ್ ಮಸೀಹ್ ಮೌಊದ್(ಅ)ರ ಜೀವಿತದಲ್ಲೇ ಪವಿತ್ರ ಖುರ್‌ಆನ್ ಮತ್ತು ಬುಖ಼ಾರಿ ಓದಲು ಶುರುಮಾಡಿದ್ದೆ. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ನಿರ್ದೇಶನ ಪ್ರಕಾರ ವೈದ್ಯಶಾಸ್ತ್ರವನ್ನು ಸಹ ಅವರಿಂದ ಕಲಿಯುತ್ತಿದ್ದೆ.

ಒಟ್ಟಿನಲ್ಲಿ, ನಾನು ಅವರಿಂದ ವೈದ್ಯಶಾಸ್ತ್ರ ಮತ್ತು ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಕಲಿತೆನು. ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಎರಡು ತಿಂಗಳಲ್ಲಿ ಮುಗಿಸಿದ್ದರು. ಅವರು ನನ್ನನ್ನು ಅವರ ಬಳಿಯಲ್ಲಿ ಕುಳ್ಳಿರಿಸಿ, ಕೆಲವೊಮ್ಮೆ ಅರ್ಧ ಜುಝ್ಊ, ಕೆಲವೊಮ್ಮೆ ಪೂರ್ತಿ ಒಂದು ಜುಝ್ಊವಿನ ತರ್ಜುಮೆ ಓದಿಹೇಳುತ್ತಿದ್ದರು.

ಕೆಲವು ವಚನಗಳ ವ್ಯಾಖ್ಯಾನವನ್ನು ಮಾಡುತ್ತಿದ್ದರು. ಅದೇ ರೀತಿಯಲ್ಲಿ ಬುಖಾರಿಯನ್ನು ಕೂಡ ಎರಡು ಮೂರು ತಿಂಗಳಲ್ಲಿ ಮುಕ್ತಾಯಗೊಳಿಸಿದರು. ಒಂದು ಬಾರಿ ರಮಝಾನ್ ತಿಂಗಳಲ್ಲಿ ಅವರು ಪೂರ್ತಿ ಖುರ್‌ಆನಿನ ದರ್ಸ್ ನೀಡಿದರು. ಅದರಲ್ಲೂ ನಾನು ಭಾಗಿಯಾಗಿದ್ದೆ. ಅರಬಿ ಭಾಷೆಯ ಕೆಲವು ನಿಯಕಕಾಲಿಕಗಳನ್ನು ಸಹ ನನಗೆ ಓದಲು ಸಂದರ್ಭ ಸಿಕ್ಕಿತ್ತು. ಒಟ್ಟಿನಲ್ಲಿ ಇದಾಗಿತ್ತು ನನ್ನ ವಿದ್ಯಾಭ್ಯಾಸ.
(ಅಲ್‌ಮೌಊದ್, ಅನ್ವಾರುಲ್ ಉಲೂಮ್, ಸಂಪುಟ-17, ಪುಟ-532-537)

ಹಝ್ರತ್ ಮುಸ್ಲಿಹ್ ಮೌಊದ್(ರ)ರ ಮೊದಲ ಭಾಷಣವನ್ನು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಮೆಚ್ಚಿದ ಬಗ್ಗೆ ಹೇಳುತ್ತಾರೆ: 1907ರಲ್ಲಿ ಮಸ್ಜಿದ್ ಅಖ್ಸಾದಲ್ಲಿ ನಾನು ಮೊದಲ ಪಬ್ಲಿಕ್ ಭಾಷಣ ಮಾಡಿದೆ. ಜಲ್ಸದ ಸಮಯವಾಗಿತ್ತು. ಇದು ಹಝ್ರತ್ ಮಸೀಹ್ ಮೌಊದ್(ಅ)ರ ನಿಧನಕ್ಕೆ ಒಂದು ವರ್ಷ ಮುಂಚಿನ ಘಟನೆಯಾಗಿದೆ. ಅನೇಕ ಜನರು ಜಲ್ಸಗೆ ಬಂದುಸೇರಿದ್ದರು. ಹಝ್ರತ್ ಖಲೀಫ ಅವ್ವಲ್(ರ) ಕೂಡ ಇದ್ದರು. ನಾನು ಸೂರಃ ಲುಕ್ಮಾನಿನ ಎರಡನೇ ರುಕೂ ಓದಿದೆ. ಅನಂತರ ಅದರ ವ್ಯಾಖ್ಯಾನವನ್ನು ವಿವರಿಸಿದೆ. ಪಬ್ಲಿಕ್ ಆಗಿ ಅದುವರೆಗೂ ನಾನು ಭಾಷಣ ಮಾಡಿರಲಿಲ್ಲ. ನನಗೆ ಆ ಸಮಯದಲ್ಲಿ 18 ವರ್ಷ ಪ್ರಾಯವಿದ್ದಿತ್ತು. ಆ ಸಮಯದಲ್ಲಿ ಹಝ್ರತ್ ಖಲೀಫ ಅವ್ವಲ್ ಕೂಡ ಇದ್ದರು. ಅಂಜುಮನಿನ ಮೆಂಬರ್‌ಗಳು ಸಹ ಇದ್ದರು. ಬೇರೆ ಅನೇಕ ಜನರಿದ್ದರು. ಆದ್ದರಿಂದ ನನ್ನ ಕಣ್ಣುಗಳ ಮುಂದೆ ಇರುಳು ಕವಿದಂತೆ ಇತ್ತು. ನನ್ನ ಮುಂದೆ ಯಾರಿದ್ದಾರೆ ಎಂದು ಅರಿವಾಗದ ಸ್ಥಿತಿ ಉಂಟಾಯಿತು. ಅರ್ಧ ಮುಕ್ಕಾಲು ಗಂಟೆ ತನಕ ಭಾಷಣ ಮುಂದುವರೆಯಿತು. ನಾನು ಭಾಷಣವನ್ನು ಮುಕ್ತಾಯಗೊಳಿಸಿದಾಗ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನಿಂತುಕೊಂಡು ಹೇಳಿದರು: ನಾನು ನನಗೆ ಶುಭಾಯವನ್ನು ಕೋರುತ್ತೇನೆ. ನೀನು ಬಹಳ ಉತ್ತಮವಾಗಿ ಭಾಷಣವನ್ನು ಮಾಡಿದ್ದೀಯ. ನಾನು ಇದನ್ನು ನಿನ್ನನ್ನು ಸಂತೋಷಪಡಿಸಲು ಹೇಳುತ್ತಿಲ್ಲ. ಅದು ಖಂಡಿತವಾಗಿಯೂ ಉತ್ತಮವಾಗಿತ್ತು ಎಂದು ಖಚಿತಪಡಿಸುತ್ತೇನೆ.
(ಖುತ್‌ಬಾತೆ ಮಹ್ಮೂದ್, ಸಂಪುಟ-22, ಪುಟ-472-473)

ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್(ರ)ರನ್ನು ಜ್ಞಾನಗಳಿಂದ ತುಂಬಿಸಿದಕ್ಕೆ ಖಲೀಫರಾಗಿದ್ದುಕೊಂಡು ಅವರ 52 ವರ್ಷಗಳ ಜೀವಿತವೇ ಸಾಕ್ಷಿಯಾಗಿದೆ. ಧಾರ್ಮಿಕ ವಿಷಯಗಳಾಗಿರಲಿ, ಭೌತಿಕ ವಿಷಯವಾಗಿರಲಿ, ಅವರೊಡನೆ ಯಾವುದಾದರೂ ವಿಷಯದ ಬಗ್ಗೆ ಬರೆಯಲು ಮತ್ತು ವಿವರಿಸಲು ಹೇಳಲಾದಾಗ ಅವರು ಅರಿವು ಮತ್ತು ಜ್ಞಾನದ ನದಿಯನ್ನೇ ಹರಿಸಿದರು. ಅವರ ಭಾಷಣಗಳನ್ನು ಅನೇಕ ಬಾರಿ ಅನ್ಯರು ಕೂಡ ಬಹಳವಾಗಿ ಹೊಗಳಿದ್ದರು ಮತ್ತು ಪತ್ರಿಕೆಗಳು ಕೂಡ ವಾರ್ತೆಗಳನ್ನು ಪ್ರಕಟಿಸಿದರು. ಹಝ್ರತ್ ಮಸೀಹ್ ಮೌಊದ್(ಅ)ರ ಭವಿಷ್ಯವಾಣಿ ಬಹಳ ವೈಭವಶಾಲಿಯಾಗಿ ಈಡೇರಿತು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಹೇಗಿದ್ದರೂ ಅವರ ಸಾಹಿತ್ಯ ಗ್ರಂಥಗಳು ಮತ್ತು ಖುತ್ಬಗಳ ಬೆಲೆಬಾಳುವ ಒಂದು ಭಂಡಾರ ಲಕ್ಷಾಂತರ ಪುಟಗಳಲ್ಲಿ ಇವೆ. ಈಗ ಆಂಗ್ಲ ಭಾಷೆಯಲ್ಲೂ ಇತರ ಭಾಷೆಗಳಲ್ಲೂ ತರ್ಜುಮೆ ಆಗುತ್ತಿವೆ. ಅವುಗಳಿಂದ ನಾವು ಪ್ರಯೋಜನ ಪಡೆಯಬೇಕು.

ಭವಿಷ್ಯವಾಣಿಯಲ್ಲಿ ಹೇಳಲಾದ ಮುಸ್ಲಿಹ್ ಮೌಊದ್(ರ) ತಾನೇ ಎಂದು ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಹೇಳುತ್ತಾರೆ: ಯಾವ ಭವಿಷ್ಯವಾಣಿಯ ಈಡೇರಿಕೆಯನ್ನು ಒಂದು ದೀರ್ಘಕಾಲದಿಂದ ಕಾಯಲಾಗುತ್ತಿತ್ತೋ ಆ ಭವಿಷ್ಯವಾಣಿಯು ಅಲ್ಲಾಹನ ಅನುಗ್ರಹ ಮತ್ತು ಕೃಪೆಯಿಂದ ನನ್ನ ಮೂಲಕ ಈಡೇರಿದೆ ಎಂದು ಅಲ್ಲಾಹನು ತನ್ನ ದಿವ್ಯವಾಣಿ ಮತ್ತು ಸೂಚನೆಗಳ ಮೂಲಕ ನನಗೆ ತಿಳಿಸಿರುವನು. ಇಸ್ಲಾಮ್ ಎಂಬುದು ಅಲ್ಲಾಹನ ಸತ್ಯಧರ್ಮವೆಂದೂ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸತ್ಯ ಸಂದೇಶವಾಹಕ ಎಂದೂ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ಸತ್ಯ ಪ್ರವಾದಿಯೆಂದೂ ಈಗ ಇಸ್ಲಾಮಿನ ಶತ್ರುಗಳ ಮೇಲೆ ಅಲ್ಲಾಹನು ಪರಿಪೂರ್ಣವಾದ ಪುರಾವೆಗಳೊಂದಿಗೆ ಸ್ಥಾಪಿಸಿರುವನು. ಇಸ್ಲಾಮನ್ನು ಸುಳ್ಳು ಎಂದು ಹೇಳುವವರು ಸುಳ್ಳರು. ಮುಹಮ್ಮದ್(ಸ)ರನ್ನು ಕಳ್ಳವಾದಿಯೆಂದು ಹೇಳುವವರು ಕಳ್ಳವಾದಿಗಳು. ಅಲ್ಲಾಹನು ಈ ಮಹೋನ್ನತವಾದ ಭವಿಷ್ಯವಾಣಿಯ ಮೂಲಕ ಇಸ್ಲಾಂ ಮತ್ತು ರಸೂಲ್‌ಕರೀಂ(ಸ)ರ ಸತ್ಯತೆಯ ಒಂದು ಜೀವಂತ ಪುರಾವೆಯನ್ನು ಜನರ ಮುಂದಿರಿಸಿರುವನು.

1886ರಲ್ಲಿ, 58ನೇ ವಯಸ್ಸಿನಲ್ಲಿ ಅವರು ಹೀಗೆ ಹೇಳುತ್ತಾರೆ: ತನಗೆ 9 ವರ್ಷಗಳ ಒಳಗೆ ಒಬ್ಬ ಪುತ್ರನು ಜನಿಸುವನು, ಅವನು ಬೇಗ ಬೇಗನೇ ಬೆಳೆಯುವನು ಮತ್ತು ಲೋಕದ ಎಲ್ಲೆಗಳ ತನಕ ಪ್ರಸಿದ್ಧಿಯನ್ನು ಪಡೆಯುವನು, ಇಸ್ಲಾಮ್ ಮತ್ತು ರಸೂಲ್ ಕರೀಂ(ಸ)ರ ಹೆಸರನ್ನು ಲೋಕದಲ್ಲಿ ಹರಡುವನು, ಅವನನ್ನು ಬಾಹ್ಯ ಮತ್ತು ಆಂತರಿಕ ಅರಿವುಗಳಿಂದ ತುಂಬಿಸಲಾಗುವುದು, ಅವನು ಅಲ್ಲಾಹನ ಪ್ರತಾಪದ ಪ್ರಕಟಣೆಗೆ ಕಾರಣವಾಗುವನು, ಅವನು ಅಲ್ಲಾಹನ ಶಕ್ತಿ, ಸಾಮಿಪ್ಯ ಮತ್ತು ಅವನ ಕರುಣೆಯ ಒಂದು ಜೀವಂತ ಚಿಹ್ನೆ ಮತ್ತು ದೃಷ್ಟಾಂತವಾಗುವನು ಎಂದೆಲ್ಲ 58 ವರ್ಷಗಳ ಹಿಂದೆ ಯಾರಿಗೆ ಹೇಳಲು ಸಾಧ್ಯ? ಲೋಕದ ಯಾವುದೇ ವ್ಯಕ್ತಿ ಸ್ವತಃ ಹೀಗೆ ಹೇಳಲು ಸಾಧ್ಯವಿಲ್ಲ. ಅಲ್ಲಾಹನು ಈ ಮಾಹಿತಿಯನ್ನು ನೀಡಿದನು ಮತ್ತು ಅವನೇ ಅದನ್ನು ಈಡೇರಿಸಿದನು. ಆ ವ್ಯಕ್ತಿ ಜೀವಂತವಾಗಿರುವನು ಮತ್ತು ದೀರ್ಘಾಯುಸ್ಸನ್ನು ಪಡೆಯುವನು ಎಂದು ಡಾಕ್ಟರ್‌ಗೆ ಕೂಡ ಭರವಸೆಯಿಲ್ಲದ ವ್ಯಕ್ತಿಯ ಮೂಲಕ ಅದನ್ನು ಈಡೇರಿಸಿ ತೋರಿಸಿದನು.

ತನ್ನ ಆರೋಗ್ಯದ ಬಗ್ಗೆ ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಂದು ಬಾರಿ, ನನಗೆ ಕ್ಷಯರೋಗವಿದೆವೆಂದೂ ನನ್ನನ್ನು ಯಾವುದಾದರೂ ಪರ್ವತ ಪ್ರದೇಶಕ್ಕೆ ಕಳುಹಿಸಬೇಕು ಎಂದೂ ಡಾಕ್ಟರ್ ಯಖೂಬ್ ಬೇಗ್ ಸಾಹಿಬ್ ನನ್ನ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಹೇಳಿದರು. ಹೀಗೆ ಹಝ್ರತ್ ಮಸೀಹ್ ಮೌಊದ್(ಅ) ನನ್ನನ್ನು ಶಿಮ್ಲಾಗೆ ಕಳುಹಿಸಿದರು. ಆದರೆ ಅಲ್ಲಿಗೆ ಹೋಗಿ ನಾನು ದುಃಖಿತನಾದೆ. ಆದ್ದರಿಂದ ಅಲ್ಲಿಂದ ಬೇಗನೇ ಮರಳಿ ಬಂದೆನು. ಒಂದು ದಿನ ಕೂಡ ಆರೋಗ್ಯ ಸರಿಯಿಲ್ಲದ ಒಬ್ಬನನ್ನು ಅಲ್ಲಾಹನು ಜೀವಂತವಾಗಿ ಉಳಿಸಿದನು. ತನ್ನ ಭವಿಷ್ಯವಾಣಿಯನ್ನು ಈಡೇರಿಸಲಿಕ್ಕಾಗಿ ಮತ್ತು ಅಹ್ಮದಿಯ್ಯತ್ತಿನ ಸತ್ಯತೆಯ ಪುರಾವೆಯನ್ನು ಜನರ ಮುಂದೆ ಒದಗಿಸಲಿಕ್ಕಾಗಿ ನನ್ನನ್ನು ಜೀವಂತವಾಗಿ ಉಳಿಸಿದನು. ನಾನು ಬಾಹ್ಯವಾದ ಯಾವುದೇ ಅರಿವು ಇಲ್ಲದ ಒಬ್ಬ ವ್ಯಕ್ತಿಯಾಗಿದ್ದೆ ಆದರೆ ಅಲ್ಲಾಹನು ತನ್ನ ಕೃಪೆಯಿಂದ ದೇವದೂತರನ್ನು ನನ್ನನ್ನು ಕಲಿಸಲಿಕ್ಕಾಗಿ ಕಳುಹಿಸಿದನು. ಯಾವನೇ ಮನುಷ್ಯನ ಚಿಂತೆ ಮತ್ತು ಊಹೆಗೂ ಬರದಂತಹ ಪವಿತ್ರ ಖುರ್‌ಆನಿನ ಅರ್ಥಗಳನ್ನು ನನಗೆ ಅವನು ತಿಳಿಸಿ ಕೊಟ್ಟನು. ಸಂದೇಹಾಸ್ಪದ ಮತ್ತು ಊಹೆ ಅಲ್ಲದ, ಬದಲಾಗಿ ಖಚಿತ ಮತ್ತು ದೃಢವಾದ ಆಧ್ಯಾತ್ಮಿಕ ಅರಿವಿನ ಕಾರಂಜಿ ನನ್ನ ಹೃದಯದಿಂದ ಹರಿಯಿತು. ನಾನು ಲೋಕಕ್ಕೆ ಪಂಥಾಹ್ವಾನವನ್ನು ನೀಡುತ್ತೇನೆ: ಅಲ್ಲಾಹನ ಕಡೆಯಿಂದ ಪವಿತ್ರ ಖುರ್‌ಆನ್ ಕಲಿಸಲಾಗಿದೆ ಎಂದು ಹೇಳುವ ಯಾರೊಡನೆ ಬೇಕಾದರೂ ಸಂವಾದ ಮತ್ತು ಚರ್ಚೆ ನಡೆಸಲು ನಾನು ಸಿದ್ಧನಿದ್ದೇನೆ. ಆದರೆ ಯಾರೂ ಎದುರಿಸಲು ಬರಲಿಲ್ಲ. ಇಂದು ಲೋಕದ ಮೇಲೆ ನನಗಲ್ಲದೇ ಯಾರಿಗೂ ಪವಿತ್ರ ಖುರ್‌ಆನಿನ ಅರಿವನ್ನು ದಯಪಾಲಿಸಲಾಗಿಲ್ಲವೆಂದು ನಾನು ಬಲ್ಲೆನು. ಅಲ್ಲಾಹನು ನನಗೆ ಪವಿತ್ರ ಖುರ್‌ಆನಿನ ಅರಿವನ್ನು ದಯಪಾಲಿಸಿರುವನು. ಈ ಕಾಲದಲ್ಲಿ ಪವಿತ್ರ ಖೂರ್‌ಆನನ್ನು ಕಲಿಸಲು ಅಲ್ಲಾಹನು ನನ್ನನ್ನು ಲೋಕದ ಅಧ್ಯಾಪಕನನ್ನಾಗಿ ಮಾಡಿರುವನು. ಮುಹಮ್ಮದ್(ಸ)ರ ಮತ್ತು ಪವಿತ್ರ ಖುರ್‌ಆನಿನ ಹೆಸರನ್ನು ಲೋಕದ ಮೂಲೆ ಮೂಲೆಗೂ ತಲುಪಿಸಲಿಕ್ಕಾಗಿ ಮತ್ತು ಇಸ್ಲಾಮಿನ ಮುಂದೆ ಲೋಕದ ಎಲ್ಲ ಸುಳ್ಳು ಧರ್ಮಗಳನ್ನು ಪರಾಜಿತಗೊಳಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ಎಬ್ಬಿಸಿ ನಿಲ್ಲಿಸಿದ್ದಾನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಆ ಕೆಲಸವನ್ನು ಮಾಡಿದರು. ಅವರ ಕಾಲದಲ್ಲಿ ಸಾಕಷ್ಟು ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ತರ್ಜುಮೆಗಳು ಪ್ರಕಾಶನಗೊಂಡಿದುವು. ಅದೇ ಕೆಲಸವನ್ನು ಈಗಲೂ ಮುಂದುವರೆಸುತ್ತಾ ಬರುತ್ತಿದ್ದೇವೆ. ಅವರ ಜೀವಿತ ಕಾಲದಲ್ಲಿ 17, 18 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ತರ್ಜುಮೆ ಆಗಿದ್ದುವು. ಅದೇ ರೀತಿಯಲ್ಲಿ ಇಸ್ಲಾಮಿನ ಸಂದೇಶ ಲೋಕದೆಲ್ಲಡೆ ಅವರ ಕಾಲದಲ್ಲಿ ತಲುಪಿತ್ತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಲೋಕವು ತಮ್ಮ ಎಲ್ಲ ಶಕ್ತಿಗಳನ್ನು ಮತ್ತು ಗುಂಪುಗಳನ್ನು ಒಟ್ಟು ಸೇರಿಸಿ ಪ್ರಯತ್ನಿಸಲಿ. ಕ್ರೈಸ್ತ ಅರಸರು ಮತ್ತು ಅವರ ಆಡಳಿತಗಳು ಒಟ್ಟುಸೇರಲಿ. ಯುರೋಪ್ ಮತ್ತು ಅಮೇರಿಕ ಕೂಡ ಒಟ್ಟು ಸೇರಲಿ. ಲೋಕದ ಎಲ್ಲ ದೊಡ್ಡ ದೊಡ್ಡ ಶ್ರೀಮಂತರು ಮತ್ತು ಶಕ್ತಿಶಾಲಿ ಸಮುದಾಯಗಳು ಒಟ್ಟು ಸೇರಲಿ. ಅವರೆಲ್ಲರೂ ನನ್ನ ಉದ್ದೇಶವನ್ನು ತಡೆಯಲು ಒಟ್ಟು ಸೇರಲಿ. ಆದರೂ ನಾನು ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ: ಅವರೆಲ್ಲರೂ ನನ್ನ ಮುಂದೆ ಪರಾಜಿತಗೊಳ್ಳುವರು. ನನ್ನ ಪ್ರಾರ್ಥನೆಗಳು ಮತ್ತು ಯೋಜನೆಗಳ ಮುಂದೆ ಅವರ ಎಲ್ಲ ಯೋಜನೆಗಳು, ಕುತಂತ್ರಗಳು ಮತ್ತು ಮೋಸಗಾರಿಕೆಗಳನ್ನು ಅಲ್ಲಾಹನು ಅಳಿಸಿ ಹಾಕುವನು. ಅಲ್ಲಾಹನು ನನ್ನ ಮೂಲಕ ಅಥವಾ ನನ್ನ ಶಿಷ್ಯರ ಮೂಲಕ ಈ ಭವಿಷ್ಯವಾಣಿಯ ಸತ್ಯತೆಯನ್ನು ಸಾಬೀತುಪಡಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ)ರ ಹೆಸರಿನ ಮೂಲಕ ಮತ್ತು ಅವರ ಪರವಾಗಿ ಇಸ್ಲಾಮಿನ ಗೌರವವನ್ನು ಸ್ಥಾಪಿಸುವನು. ಇಸ್ಲಾಂ ಪುನಃ ತನ್ನ ಪೂರ್ಣ ವೈಭವದೊಂದಿಗೆ ಲೋಕದಲ್ಲಿ ಸ್ಥಾಪಿಸಲ್ಪಡುವ ತನಕ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಲೋಕದ ಜೀವಂತ ಪ್ರವಾದಿಯೆಂದು ಲೋಕವು ಒಪ್ಪುವ ತನಕ ಅಲ್ಲಾಹನು ಲೋಕವನ್ನು ಬಿಡಲಾರನು. (ಅಲ್‌ಮೌಊದ್, ಅನ್ವಾರುಲ್ ಉಲೂಮ್, ಸಂಪುಟ-17, ಪುಟ-613-614)

ಒಟ್ಟಿನಲ್ಲಿ ಈ ಭವಿಷ್ಯವಾಣಿ ಈಡೇರಿತು. ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಕಾಲವನ್ನು ದಾಟಿ ಹೋದರು. ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ಕೆಲಸ ಪೂರ್ತಿಯಾಗುವ ತನಕ ಮತ್ತು ಇಸ್ಲಾಮಿನ ಧ್ವಜ ಲೋಕದೆಲ್ಲಡೆ ಹಾರಾಡುವ ವರೆಗೆ ಭವಿಷ್ಯವಾಣಿಯಲ್ಲಿ ಹೇಳಲಾದ ಸಂಗತಿಗಳು ನೆಲೆನಿಲ್ಲುವುವು. ಹಝ್ರತ್ ಪೈಗಂಬರ್(ಸ)ರ ಗೌರವ ಮತ್ತು ಘನತೆಯನ್ನು ಲೋಕದಲ್ಲಿ ಸ್ಥಾಪಿಸುವ ಮತ್ತು ಇಸ್ಲಾಮಿನ ಸತ್ಯತೆಯನ್ನು ಲೋಕದ ಮೇಲೆ ಪ್ರಕಟಿಸಿ ಅದನ್ನು ಹಝ್ರತ್ ಪೈಗಂಬರ್(ಸ)ರ ಬಾವುಟದ ಅಡಿಯಲ್ಲಿ ಕೊಂಡುಬರುವ ಗುರಿಯನ್ನು ನಾವು ನಮ್ಮ ಮುಂದಿರಿಸಿದರೆ ಮಾತ್ರ ಈ ಭವಿಷ್ಯವಾಣಿಯ ಹೆಸರಲ್ಲಿ ನಡೆಸಲಾಗುವ ಸಮ್ಮೇಳನಗಳು ಪ್ರಯೋಜನಕಾರಿಯಾಗುವುವು. ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬುವವರ ಮೂಲಕ ಮಾತ್ರವೇ ಇಸ್ಲಾಮಿನ ಧ್ವಜ ಲೋಕದಲ್ಲಿ ಪುನಃ ಹಾರಾಡುವುದು. ಅಲ್ಲಾಹನು ನಮಗೆ ಈ ಕೆಲಸವನ್ನು ಮಾಡಲು ಸೌಭಾಗ್ಯ ನೀಡಲಿ. (ಆಮೀನ್)

*************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

# ಖುತ್‌ಬ ಜುಮುಅ

**ಅಲ್ಲಾಹನಾಣೆ, ಅಲ್ಲಾಹನು ನಿಮಗೆ ಎರಡು ಮರಣಗಳನ್ನು ನೀಡಲಾರನು. ಬೇರೆ ಯಾವುದೇ ಪ್ರವಾದಿಯ ಮರಣದಿಂದ ಉಂಟಾದ ನಷ್ಟಕ್ಕಿಂತ ಹೆಚ್ಚಿನ ನಷ್ಟ ನಿಮ್ಮ ಮರಣದಿಂದ ಲೋಕಕ್ಕೆ ಉಂಟಾಗಿದೆ. ನಿಮ್ಮ ಸ್ವಭಾವಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ. ಯಾವುದೇ ಸಂತಾಪ ಸೂಚನೆಯಿಂದ ನಿಮ್ಮ ಅಗಲುವಿಕೆಯ ದುಃಖವನ್ನು ಕಡಿಮೆಗೊಳಿಸಲೂ ಸಾಧ್ಯವಲ್ಲ. ನಿಮ್ಮ ಮರಣವನ್ನು ತಡೆಯುವ ಶಕ್ತಿ ನಮಗೆ ಇರುತ್ತಿದ್ದರೆ, ನಾವೆಲ್ಲರೂ ನಮ್ಮ ಜೀವತೆತ್ತು ನಿಮ್ಮ ಮರಣವನ್ನು ತಡೆಯುತ್ತಿದ್ದೆವು**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಬೂಬಕರ್ ಅಲ್ಲದೇ ಬೇರೆ ಯಾರಾದರೂ ನಮಾಝಿಗೆ ಇಮಾಮತ್ ವಹಿಸುವುದನ್ನು ಅಲ್ಲಾಹನು ಮತ್ತು ಮುಸ್ಲಿಮರು ಇಷ್ಟಪಡುವುದಿಲ್ಲವೆಂದೂ ಹಝ್ರತ್ ಪೈಗಂಬರ್(ಸ) ಹೇಳಿದರು.**

**ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ಅ) ಓದಿದ ವಚನವನ್ನು ಅಲ್ಲಾಹನು ಅವತೀರ್ಣಗೊಳಿಸಿದ್ದು ಗೊತ್ತೇ ಇರಲಿಲ್ಲವೆಂದೂ ಅವರಿಂದಲೇ ಈ ವಚನವನ್ನು ಕಲಿತಿದ್ದೇವೆ ಎಂದೂ ನಮಗೆ ಅನಿಸುತ್ತಿತ್ತು**

**ಹಝ್ರತ್ ಅಬೂಬಕರ್(ರ) ಮುಸ್ಲಿಂ ಸಮುದಾಯಕ್ಕೆ ಮಾಡಿದ ಔದಾರ್ಯಕ್ಕೆ ಕೃತಜ್ಞತೆ ಅರ್ಪಿಸಲು ಕೂಡ ನಮ್ಮಿಂದ ಸಾಧ್ಯವಿಲ್ಲ. ಹಿಂದಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವವರು ಎಂಬ ಪವಿತ್ರ ಖುರ್‌ಆನಿನ ಈ ವಚನವನ್ನು ಮಸ್ಜಿದ್ ನಬವಿಯಲ್ಲಿ ಎಲ್ಲ ಸಹಾಬಿಯರನ್ನು ಒಟ್ಟುಸೇರಿಸಿ ಹಝ್ರತ್ ಅಬೂಬಕರ್(ರ) ಓದಿ ಹೇಳಿರದಿದ್ದರೆ, ಈ ಸಮುದಾಯ ನಾಶವಾಗುತ್ತಿತ್ತು**

**ಜಮಾಅತಿನ ಮರಬ್ಬಿಯಾದ ಸನ್ಮಾನ್ಯ ಖುಶಿ ಮುಹಮ್ಮದ್ ಶಾಕಿರ್ ಸಾಹಿಬ್‌ರ ಜನಾಝ ನಮಾಝ್ ನಿರ್ವಹಣೆ ಹಾಗೂ ಅವರ ಸದ್ಗುಣಗಳ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **25-02-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿತ್ತು. ಹಜ್ಜತುಲ್ ವಿದಾದ ಸಂದರ್ಭದ ಕುರಿತು ಹೀಗೆ ಬರೆಯಲಾಗಿದೆ. ಹಝ್ರತ್ ಪೈಗಂಬರ್(ಸ) ಹಜ್ಜತುಲ್ ವಿದಾಗಾಗಿ ಹಿಜರೀ 10ರಲ್ಲಿ ಗುರುವಾರದಂದು, ಧುಲ್‌ಖಾದ ತಿಂಗಳ 6 ದಿನಗಳು ಬಾಕಿಯಿದ್ದಾಗ ಹೊರಟರು. ಶನಿವಾರದಂದು ಹೊರಟರು ಎಂದು ಒಂದು ಹೇಳಿಕೆಯಿದೆ. (ಅಸ್ಸೀರತುಲ್ ಹಲಬೀಯ, ಸಂಪುಟ-3, ಪುಟ-361, ಬಾಬ್ ಹಜ್ಜತುಲ್ ವಿದಾ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹೇಗಿದ್ದರೂ ಹಝ್ರತ್ ಅಸ್ಮಾ ಬಿನ್ತ್ ಅಬೀ ಬಕರ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹಜ್ಜತುಲ್ ವಿದಾ ಮಾಡಲು ಉದ್ದೇಶಿಸಿದಾಗ ಹಝ್ರತ್ ಅಬೂಬಕರ್(ಅ) ಹೇಳಿದರು: ಯಾ ರಸೂಲಲ್ಲಾಹ್, ನನ್ನ ಬಳಿ ಒಂದು ಒಂಟೆಯಿದೆ. ನಾವು ಅದರಲ್ಲಿ ನಮ್ಮ ಯಾತ್ರಾ ಸಾಮಾನುಗಳನ್ನು ಇರಿಸೋಣ. ಹಾಗೆಯೇ ಮಾಡಿರಿ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹೀಗೆ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ)ರ ಸಾಮಾನುಗಳಿಗಾಗಿ ಒಂದೇ ಒಂಟೆಯಿದ್ದಿತ್ತು. ಹಝ್ರತ್ ಪೈಗಂಬರ್(ಸ) ಸ್ವಲ್ಪ ಗೋಧಿಹಿಟ್ಟು ಮತ್ತು ಸ್ವಲ್ಪ ಹುರಿದ ಧಾನ್ಯಗಳನ್ನು ಯಾತ್ರೆಯಲ್ಲಿ ಜೊತೆಗೆ ಇರಿಸಿದರು ಮತ್ತು ಹಝ್ರತ್ ಅಬೂಬಕರ್(ರ)ರ ಒಂಟೆಯ ಮೇಲೆ ಅವುಗಳನ್ನು ಇರಿಸಿದರು. ಹಝ್ರತ್ ಅಬೂಬಕರ್(ರ) ಒಂಟೆಯನ್ನು ತನ್ನ ಗುಲಾಮನಿಗೆ ಒಪ್ಪಿಸಿದರು.

ಹಝ್ರತ್ ಅಸ್ಮಾ ಬಿನ್ತ್ ಅಬೀಬಕರ್ ವರದಿ ಮಾಡುತ್ತಾರೆ: ನಾವು ಹಝ್ರತ್ ಪೈಗಂಬರ್(ಸ)ರೊಂದಿಗೆ ಹಜ್ಜಿಗಾಗಿ ಹೊರಟೆವು. ನಾವು ಉರ್‌ಶ್ ಎಂಬ ಸ್ಥಳಕ್ಕೆ ತಲುಪಿದಾಗ ಹಝ್ರತ್ ಪೈಗಂಬರ್(ಸ) ಸವಾರಿ ಮೃಗದಿಂದ ಕೆಳಗೆ ಇಳಿದರು. ನಾವು ಕೂಡ ಇಳಿದೆವು. ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ಪಕ್ಕದಲ್ಲೇ ಕುಳಿತುಕೊಂಡರು. ನಾನು ನನ್ನ ತಂದೆಯ ಪಕ್ಕದಲ್ಲಿ ಕುಳಿತುಕೊಂಡೆ. ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ಅ)ರ ಸಾಮಾನುಗಳು ಒಂದೇ ಒಂಟೆಯ ಮೇಲೆ ಒಟ್ಟಿಗೆ ಇದ್ದುವು. ಆ ಒಂಟೆ ಹಝ್ರತ್ ಅಬೂಬಕರ್(ಅ)ರ ಗುಲಾಮನ ಬಳಿಯಿತ್ತು. ಆ ಗುಲಾಮನು ಬರಲು ಹಝ್ರತ್ ಅಬೂಬಕರ್(ಅ)ರ ಕಾಯುತ್ತಿದ್ದರು. ಗುಲಾಮನು ಬಂದನು. ಆದರೆ ಒಂಟೆ ಅವನ ಬಳಿ ಇರಲಿಲ್ಲ. ನಿನ್ನ ಒಂಟೆ ಎಲ್ಲಿದೆ ಎಂದು ಹಝ್ರತ್ ಅಬೂಬಕರ್(ಅ) ಅವನೊಡನೆ ಕೇಳಿದರು. ಕಳೆದ ರಾತ್ರಿ ಅದು ಕಾಣೆಯಾಯಿತು ಎಂದು ಅವನು ಹೇಳಿದನು. ಹಝ್ರತ್ ಅಬೂಬಕರ್(ಅ) ಕೇಳಿದರು: ಒಂದೇ ಒಂಟೆಯಿತ್ತು. ಅದನ್ನೂ ನೀನು ಕಳೆದುಕೊಂಡೆಯಾ? ಹಝ್ರತ್ ಅಬೂಬಕರ್(ಅ) ಅವನನ್ನು ಹೊಡೆಯಲು ಎದ್ದರು. ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಹೇಳಿದರು: ಹಜ್ಜಿಗಾಗಿ ಹೋಗುವ ವ್ಯಕ್ತಿ ಏನು ಮಾಡುತ್ತಿದ್ದಾನೆ ಎಂದು ನೋಡು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-7, ಪುಟ-12-13, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಸನನ್ ಅಬೂದಾವೂದ್, ಕಿತಾಬುಲ್ ಮನಾಸಿಕ್, ಹದೀಸ್-1818)

ಹೇಗಿದ್ದರೂ ಹಝ್ರತ್ ಪೈಗಂಬರ್(ಸ)ರ ಯಾತ್ರಾ ಸಾಮಾನುಗಳು ಕಳೆದುಹೋಯಿತು ಎಂದು ಕೆಲ ಸಹಾಬಿಯರಿಗೆ ಗೊತ್ತಾಯಿತು. ಆಗ ಅವರು ಹೈಸನ್ನು ತೆಗೆದುಕೊಂಡು ಬಂದರು. ಹೈಸ್ ಎಂಬುದು ಖರ್ಜೂರ, ಗೋಧಿಹಿಟ್ಟು ಮತ್ತು ಬೆಣ್ಣೆಯಿಂದ ತಯಾರಿಸಲಾಗುವ ಹಲ್ವವಾಗಿತ್ತು. ಅದನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ಇರಿಸಲಾಯಿತು. ತನ್ನ ಗುಲಾಮನೊಂದಿಗೆ ಕೋಪಗೊಳ್ಳುತ್ತಿದ್ದ ಹಝ್ರತ್ ಅಬೂಬಕರ್(ಅ)ರೊಡನೆ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಸೌಮ್ಯತೆಯನ್ನು ಕೈಗೊಳ್ಳು. ಈ ಸಂಗತಿ ನಿಮ್ಮ ಮತ್ತು ನಮ್ಮ ನಿಯಂತ್ರಣದಲ್ಲಿ ಇಲ್ಲದಂತಹ ಸಂಗತಿಯಾಗಿದೆ. ಒಂಟೆ ಕಾಣೆಯಾಗದಂತೆ ಇರಲು ಗುಲಾಮನು ಪ್ರಯತ್ನಿಸಿರಬಹುದು. ಆದರೆ ಅದು ಕಾಣೆಯಾಯಿತು. ಹೇಗಿದ್ದರೂ ಇದನ್ನು ತೆಗೆದುಕೊಳ್ಳು. ಇದೊಂದು ಒಳ್ಳೆಯ ಆಹಾರವಾಗಿದೆ. ಗುಲಾಮನ ಬಳಿಯಲ್ಲಿದ್ದ ಆಹಾರಕ್ಕೆ ಬದಲಾಗಿ ಅಲ್ಲಾಹನು ಇದನ್ನು ನಮಗೆ ಕಳುಹಿಸಿರುವನು. ಹೀಗೆ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ಅ) ಆ ಹಲ್ವವನ್ನು ತಿಂದರು. ಅವರಿಬ್ಬರ ಜೊತೆಗಿದ್ದ ಜನರು ಕೂಡ ಹೊಟ್ಟೆತುಂಬ ತಿಂದರು. ಅನಂತರ ಸಫ್‌ವಾನ್ ಬಿನ್ ಮುಅತ್ತಲ್ ಅಲ್ಲಿಗೆ ತಲುಪಿದರು. ಯಾತ್ರಾ ತಂಡದ ಹಿಂದೆನಡೆಯುವ ಜವಾಬ್ದಾರಿ ಅವರಿಗೆ ಒಪ್ಪಿಸಲಾಗಿತ್ತು. ಯಾವುದಾದರೂ ವಸ್ತು ಹಿಂದೆ ಬಾಕಿಯುಳಿದಿದೆಯೋ ಎಂದು ನೋಡುವುದೇ ಅವರ ಕರ್ತವ್ಯವಾಗಿತ್ತು. ಹಝ್ರತ್ ಸಫ್‌ವಾನ್ ಅಲ್ಲಿಗೆ ಬಂದಾಗ ಒಂಟೆ ಅವರ ಬಳಿಯಿತ್ತು. ಅದರಲ್ಲಿ ಯಾತ್ರಾ ಸಾಮಾನುಗಳು ಕೂಡ ಇತ್ತು. ಅವರು ಒಂಟೆಯನ್ನು ಹಝ್ರತ್ ಪೈಗಂಬರ್(ಸ)ರ ಡೇರೆಯ ಬಾಗಿಲ ಸಮೀಪ ಕುಳ್ಳಿರಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ಅ)ರೊಡನೆ ಹೇಳಿದರು: ನಿನ್ನ ಸಾಮಾನುಗಳಲ್ಲಿ ಏನಾದರೂ ಕಾಣೆಯಾಗಿದೆಯೇ ಎಂದು ನೋಡಿಕೊಳ್ಳು. ಹಝ್ರತ್ ಅಬೂಬಕರ್(ಅ) ಹೇಳಿದರು: ನಾವು ನೀರು ಕುಡಿಯುತ್ತಿದ್ದ ಒಂದು ಪಾತ್ರೆಯಲ್ಲದೇ ಬೇರೇನೂ ಕಾಣೆಯಾಗಿಲ್ಲ. ಅಷ್ಟರಲ್ಲಿ ಗುಲಾಮನು ಹೇಳಿದನು: ಆ ಪಾತ್ರೆ ನನ್ನ ಬಳಿಯಲ್ಲಿದೆ. (ಅಸ್ಸೀರತುಲ್ ಹಲಬೀಯ, ಸಂಪುಟ-3, ಪುಟ-365, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಫರ್ಹಂಗ್ ಸೀರತ್, ಪುಟ-110, ಝುವಾರ ಅಕಾಡಮಿ ಕರಾಚಿ 2003)

ಹಝ್ರತ್ ಅಬೂಬಕರ್(ಅ)ರಿಂದ ಹೀಗೆ ವರದಿಯಾಗಿದೆ: ಅವರು ಹಜ್ಜತುಲ್ ವಿದಾದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಹೊರಟಾಗ ಅವರ ಜೊತೆಗೆ ಅವರ ಪತ್ನಿಯಾದ ಅಸ್ಮಾ ಬಿನ್ತ್ ಉಮೈಸ್(ರ) ಸಹ ಇದ್ದರು. ಅವರು ಧುಲ್‌ಹಲೀಫಗೆ ತಲುಪಿದಾಗ ಒಂದು ಮಗುವಿಗೆ ಅಸ್ಮಾ ಜನ್ಮವಿತ್ತರು. ಅದಕ್ಕೆ ಮುಹಮ್ಮದ್ ಬಿನ್ ಅಬೂಬಕರ್ ಎಂದು ಹೆಸರಿಡಲಾಯಿತು. ಧುಲ್‌ಹಲೀಫ ಎಂಬುದು ಮದೀನದಿಂದ ಆರೇಳು ಮೈಲುಗಳ ದೂರದಲ್ಲಿರುವ ಪ್ರದೇಶವಾಗಿದೆ. ಹೇಗಿದ್ದರೂ ಹಝ್ರತ್ ಅಬೂಬಕರ್(ಅ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಮಗುವಿನ ಜನನದ ಸುವಾರ್ತೆಯನ್ನು ತಿಳಿಸಿದರು. ಹಝ್ರತ್

ಪೈಗಂಬರ್(ಸ) ಹಝ್ರತ್ ಅಬೂಬಕರ್(ಅ)ರಿಗೆ ಹೀಗೆ ನಿರ್ದೇಶನ ನೀಡಿದರು: ಸ್ನಾನ ಮಾಡಿ ಇಹ್‌ರಾಮಿನ ಬಟ್ಟೆಯನ್ನು ಧರಿಸಲು ಅಸ್ಮಾರೊಡನೆ ಹೇಳು. ಅದೇ ರೀತಿಯಲ್ಲಿ ಹಾಜಿಗಳು ಮಾಡುವ ಎಲ್ಲ ಅನುಷ್ಠಾನ ಕರ್ಮಗಳನ್ನು ಮಾಡಲಿ. ಆದರೆ ಕಅ್‌ಬ ಭವನದ ತವಾಫ್ ಮಾಡದಿರಲಿ. (ಸುನನ್ ಅನ್ನಸಾಇ, ಕಿತಾಬ್ ಮನಾಸಿಕುಲ್ ಹಜ್ಜ್, ಹದೀಸ್–2664) (ಮುಜಮುಲ್ ಬಲದಾನ್, ಸಂಪುಟ–2, ಪುಟ–339, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಪೈಗಂಬರ್(ಸ) ಅಸ್‌ಫಾನ್ ಕಣಿವೆಗೆ ತಲುಪಿದಾಗ, ಇದು ಯಾವ ಕಣಿವೆಯೆಂದು ಹಝ್ರತ್ ಅಬೂಬಕರ್(ಅ)ರೊಡನೆ ಕೇಳಿದರು. ಇದು ಅಸ್‌ಫಾನ್ ಕಣಿವೆಯೆಂದು ಹಝ್ರತ್ ಅಬೂಬಕರ್(ಅ) ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹಝ್ರತ್ ಹೂದ್(ಅ) ಮತ್ತು ಹಝ್ರತ್ ಸಾಲಿಹ್(ಅ) ಎರಡು ಕೆಂಪು ಒಂಟೆಗಳ ಮೇಲೆ ಸವಾರರಾಗಿ ತಕ್ಬೀರ್ ಹೇಳುತ್ತಾ ಕಅ್‌ಬ ಭವನಕ್ಕೆ ಹಜ್ಜಿಗಾಗಿ ಹೋಗುವಾಗ ಇಲ್ಲಿಂದ ದಾಟಿ ಹೋಗಿದ್ದರು.
(ಸಬ್ಲುಲ್ ಹುದಾ ವರ್ರಶ್ಶಾದ್, ಸಂಪುಟ–8, ಪುಟ–461, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಜ್ಜತುಲ್ ವಿದಾದ ಯಾತ್ರೆಯಲ್ಲಿ ಖುರ್ಬಾನಿಯ ಜಾನುವಾರುಗಳನ್ನು ಜೊತೆಗೆ ಕೊಂಡು ಹೋಗಿದ್ದ ಜನರಲ್ಲಿ ಹಝ್ರತ್ ಅಬೂಬಕರ್(ಅ) ಸಹ ಇದ್ದರು. (ಅಸಸೀರತುಲ್ ಹಲಬೀಯ, ಸಂಪುಟ–3, ಪುಟ–369, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಅಬೂಬಕರ್(ಅ) ಹೇಳುತ್ತಾರೆ: ಜಾನುವಾರುಗಳನ್ನು ಕೊಯ್ಯಲಾಗುವ ಜಾಗದಲ್ಲಿ ಸುಹೈಲ್ ಬಿನ್ ಅಮ್ರ್ ನಿಂತಿರುವುದನ್ನು ನಾನು ಕಂಡೆನು. ಅವರು ಹಝ್ರತ್ ಪೈಗಂಬರ್(ಸ)ರ ಖುರ್ಬಾನಿ ಮೃಗವನ್ನು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ಕೊಂಡುಹೋಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಕೈಗಳಿಂದ ಅದನ್ನು ಧಿಬಹ್ ಮಾಡಿದರು. ಕೂದಲು ಕತ್ತರಿಸುವವರನ್ನು ಕರೆದು ತಲೆಗೂದಲನ್ನು ಕತ್ತರಿಸಿದರು. ಹಝ್ರತ್ ಪೈಗಂಬರ್(ಸ)ರ ಕೂದಲನ್ನು ಸುಹೈಲ್(ರ) ತನ್ನ ಕಣ್ಣುಗಳಿಗೆ ಸವರುವುದನ್ನು ನಾನು ಕಂಡೆನು. ಇದೇ ಸುಹೈಲ್ ಹುದೈಬಿಯ ಒಪ್ಪಂದದ ವೇಳೆ ಹಝ್ರತ್ ಪೈಗಂಬರ್(ಸ) ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ ಎಂದು ಒಪ್ಪಂದದಲ್ಲಿ ಬರೆಸುವುದನ್ನು ತಡೆಯುತ್ತಿದ್ದರು ಎಂಬ ಸಂಗತಿ ನನ್ನ ನೆನಪಿಗೆ ಬಂತು. ಸುಹೈಲ್‌ರನ್ನು ಇಸ್ಲಾಮಿನ ಕಡೆಗೆ ತಂದ ಅಲ್ಲಾಹನಿಗೆ ನಾನು ವಂದನೆಗಳನ್ನು ಸಲ್ಲಿಸಿದೆ. ಅಲ್ಲಾಹನು ಅವರಿಗೆ ಸನ್ಮಾರ್ಗ ನೀಡಿದಾಗ ಅವರು ನಿಷ್ಠೆ ಮತ್ತು ಪ್ರಾಮಾಣಿಕತೆಯಲ್ಲಿ ಬಹಳವಾಗಿ ಮುಂದಾದರು.
(ಸಬ್ಲುಲ್ ಹುದಾ ವರ್ರಶಾದ್, ಸಂಪುಟ–5, ಪುಟ–64, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಪೈಗಂಬರ್(ಸ)ರ ಕೊನೆಯ ರೋಗಾವಸ್ಥೆಯಲ್ಲಿ ಹಝ್ರತ್ ಅಬೂಬಕರ್(ಅ) ನಮಾಝ್ನ ಇಮಾಮತ್ ವಹಿಸಿದ್ದ ಬಗ್ಗೆ ವರದಿಯಿದೆ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ರೋಗಾವಸ್ಥೆಯಲ್ಲಿ ಹೇಳಿದರು: ಜನರ ಇಮಾಮತ್ ವಹಿಸಲು ಅಬೂಬಕರ್‌ರೊಡನೆ ಹೇಳಿರಿ. ಹಝ್ರತ್ ಆಯಿಶ(ರ) ಹೇಳಿದರು: ನಿಮ್ಮ ಜಾಗದಲ್ಲಿ ಅವರು ಇಮಾಮತ್ ವಹಿಸಲು ನಿಂತರೆ, ಅವರಿಗೆ ಅಳುಬರುವ ಸಾಧ್ಯತೆಯಿರುವ ಕಾರಣದಿಂದ ನಮಾಝ್‌ಗೆ ಇಮಾಮತ್ ವಹಿಸಲು ಅವರಿಗೆ ಸಾಧ್ಯವಾಗದು. ಆದ್ದರಿಂದ ಉಮರ್‌ರೊಡನೆ ಇಮಾಮತ್ ವಹಿಸಲು ನೀವು ಹೇಳಿರಿ. ಆಗ ಹಝ್ರತ್ ಪೈಗಂಬರ್(ಸ) ಅದನ್ನು ಇಷ್ಟಪಡಲಿಲ್ಲ ಮತ್ತು ಹೀಗೆ ಹೇಳಿದರು: ನೀವು ಯೂಸುಫ್‌ರ ಕಾಲದಲ್ಲಿದ್ದ ಮಹಿಳೆಯರಂತಾಗಿರುವಿರಿ. ಅವರೇ ಇಮಾಮತ್ ವಹಿಸಬೇಕೆಂದು ಹಝ್ರತ್ ಅಬೂಬಕರ್(ಅ)ರೊಡನೆ ಹೇಳಿರಿ.
(ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್–679)

ನಿಧನಕ್ಕೆ ಮುಂಚೆ ಹಝ್ರತ್ ಪೈಗಂಬರ್(ಸ) ರೋಗಿಯಾದಾಗ ಹಝ್ರತ್ ಅಬೂಬಕರ್(ಅ) ಸ್ಥಳದಲ್ಲಿ ಹಾಜರಿಲ್ಲದ ಸಮಯದಲ್ಲಿ ಹಝ್ರತ್ ಉಮರ್‌ರೊಡನೆ(ರ) ಇಮಾಮತ್ ವಹಿಸಲು ಹಝ್ರತ್ ಬಿಲಾಲ್ ಕೋರಿಕೊಂಡರು. ಕೊಠಡಿಯಿಂದ ಹಝ್ರತ್ ಉಮರ್(ರ)ರ ಶಬ್ಧ ಕೇಳಿಬಂದಾಗ ಅಬೂಬಕರ್ ಎಲ್ಲಿರುವರು ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಅಬೂಬಕರ್ ಅಲ್ಲದೇ ಬೇರೆ ಯಾರಾದರೂ ನಮಾಝ್‌ಗೆ ಇಮಾಮತ್ ವಹಿಸುವುದನ್ನು ಅಲ್ಲಾಹನು ಮತ್ತು ಮುಸ್ಲಿಮರು ಇಷ್ಟಪಡುವುದಿಲ್ಲವೆಂದೂ ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಹಝ್ರತ್ ಅಬೂಬಕರ್(ರ)ರನ್ನು ಕರೆಯಲಾಯಿತು. ಹಝ್ರತ್ ಉಮರ್(ರ) ನಮಾಜ಼್‌ಗೆ ಇಮಾಮತ್ ವಹಿಸಿ ಮುಗಿಸಿದ ನಂತರ ಹಝ್ರತ್ ಅಬೂಬಕರ್(ಅ) ಅಲ್ಲಿಗೆ ತಲುಪಿದರು. ಇದರ ನಂತರ ಹಝ್ರತ್ ಪೈಗಂಬರ್(ಸ)ರ ರೋಗಾವಸ್ಥೆಯಲ್ಲಿರುವಾಗಲೂ ಮತ್ತು ಹಝ್ರತ್ ಪೈಗಂಬರ್(ಸ)ರ ನಿಧನದ ತನಕ ಹಝ್ರತ್ ಅಬೂಬಕರ್(ಅ)ರವರೇ ನಮಾಝ್‌ಗೆ ಇಮಾಮತ್ ವಹಿಸುತ್ತಿದ್ದರು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–3, ಪುಟ–96–97, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 2002)

ಹಝ್ರತ್ ಆಇಶ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ರೋಗಾವಸ್ಥೆಯಲ್ಲಿ ಹಝ್ರತ್ ಅಬೂಬಕರ್(ಅ)ರೊಡನೆ ಜನರಿಗಾಗಿ ನಮಾಝ್ನಲ್ಲಿ ಇಮಾಮತ್ ವಹಿಸಲು ಹೇಳಿದ್ದರು. ಆದ್ದರಿಂದ ಅವರು ಜನರಿಗಾಗಿ ನಮಾಝ್‌ಗೆ ಇಮಾಮತ್ ವಹಿಸುತ್ತಿದ್ದರು. ಉರ್‌ವ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ರೋಗಾವಸ್ಥೆಯು ಅಲ್ಪ ಮಟ್ಟಿಗೆ ಕಡಿಮೆಯಾದಾಗ ಅವರು ಹೊರಗೆ ಬಂದು ಮಸೀದಿಗೆ ಹೋದರು. ಹಝ್ರತ್ ಅಬೂಬಕರ್(ಅ) ನಿಂತುಕೊಂಡು ಜನರಿಗಾಗಿ ನಮಾಝ್‌ಗೆ ಇಮಾಮತ್ ವಹಿಸುವುದನ್ನು ಹಝ್ರತ್ ಪೈಗಂಬರ್(ಸ) ಕಂಡರು. ಹಝ್ರತ್ ಪೈಗಂಬರ್(ಸ) ಬಂದದ್ದಾಗಿ ಅವರಿಗೆ ಗೊತ್ತಾದಾಗ ಅವರು ಹಿಂದಕ್ಕೆ ಸರಿದರು. ಆಗ ತನ್ನ ಜಾಗದಲ್ಲೇ ಇರಲು ಸನ್ನೆ ಮಾಡಿ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ಅ)ರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ಅ)ರ ಸಮೀಪದಲ್ಲೆ ಕುಳಿತುಕೊಂಡರು. ಹಝ್ರತ್ ಅಬೂಬಕರ್(ಅ) ಹಝ್ರತ್ ಪೈಗಂಬರ್(ಸ)ರ ನಮಾಝ್ನೊಂದಿಗೆ ನಮಾಝ್ ನಿರ್ವಹಿಸುತ್ತಿದ್ದರು ಮತ್ತು ಜನರು ಹಝ್ರತ್ ಅಬೂಬಕರ್(ಅ)ರ ನಮಾಝ್ನೊಂದಿಗೆ ನಮಾಝ್ ನಿರ್ವಹಿಸುತ್ತಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್....... ಹದೀಸ್–683)

ಸಹೀಹ್ ಬುಖಾರಿಯಲ್ಲೇ ಹೀಗೊಂದು ವರದಿಯಿದೆ: ಹಝ್ರತ್ ಅನಸ್ ಬಿನ್ ಮಾಲಿಕ್ ಅನ್ಸಾರಿಯಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ನಿಧನರಾಗುವುದಕ್ಕೆ ಮುಂಚೆ ರೋಗಿಯಾದಾಗ ಹಝ್ರತ್ ಅಬೂಬಕರ್(ಅ) ಜನರಿಗಾಗಿ ನಮಾಝ್ನ ಇಮಾಮತ್ ವಹಿಸುತ್ತಿದ್ದರು. ಹೀಗೆ ಒಂದು ಸೋಮವಾರದಂದು ಜನರು ನಮಾಝ್ನಲ್ಲಿ ಪಂಕ್ತಿಬದ್ಧರಾಗಿ ನಿಂತಿದ್ದಾಗ ಹಝ್ರತ್ ಪೈಗಂಬರ್(ಸ) ತನ್ನ ಕೊಠಡಿಯ ಪರದೆಯನ್ನು ಎತ್ತಿದರು. ಹಝ್ರತ್ ಪೈಗಂಬರ್(ಸ) ನಮ್ಮನ್ನು ನೋಡುತ್ತಿದ್ದರು. ಅವರ ಅನುಗ್ರಹೀತ ಮುಖ ಪವಿತ್ರ ಖುರ್‌ಆನಿನ ಪುಟದಂತೆ ಬೆಳಗುತ್ತಿತ್ತು. ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಿದ್ದರು. ಅಷ್ಟರಲ್ಲಿ ಹಝ್ರತ್ ಅಬೂಬಕರ್(ಅ) ಪಂಕ್ತಿಯೊಂದಿಗೆ ಸೇರಿಕೊಳ್ಳಲು ಹಿಂದಕ್ಕೆ ಸರಿಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ನಮಾಝ್‌ಗಾಗಿ ಬಂದಿರುವರು ಎಂದು ಅವರು ಭಾವಿಸಿದ್ದರು. ಆದರೆ ನಮಾಝ್ನನ್ನು ಪೂರ್ತಿಗೊಳಿಸಲು ಹಝ್ರತ್ ಪೈಗಂಬರ್(ಸ) ಸನ್ನೆ ಮಾಡಿ ಹೇಳಿದರು ಮತ್ತು ಕೊಠಡಿಯ ಪರದೆಯನ್ನು ಕೆಳಗೆ ಹಾಕಿದರು. ಅದೇ ದಿವಸ ಹಝ್ರತ್ ಪೈಗಂಬರ್(ಸ) ನಿಧನಗೊಂಡರು. (ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್–680)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಿಧನಕ್ಕೆ ಮುಂಚೆ ಹಝ್ರತ್ ಪೈಗಂಬರ್(ಸ) ರೋಗಿಯಾದಾಗ ಕಠಿಣವಾದ ದೌರ್ಬಲ್ಯದ ಕಾರಣದಿಂದ ನಮಾಝ್‌ಗೆ ಇಮಾಮತ್ ವಹಿಸಲು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ಅ)ರೊಡನೆ ನಮಾಝ್‌ಗೆ ಇಮಾಮತ್ ವಹಿಸಲು ನಿರ್ದೇಶಿಸಿದರು. ಹಝ್ರತ್ ಅಬೂಬಕರ್(ಅ) ನಮಾಝ್ ನಿರ್ವಹಿಸಲು ಶುರುಮಾಡಿದಾಗ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಪ ಆರಾಮದ ಅನುಭವವಾಯಿತು. ಆದ್ದರಿಂದ ಅವರು ನಮಾಝ್ ನಿರ್ವಹಿಸಲು ಹೊರಟರು. ಇಬ್ಬರು ವ್ಯಕ್ತಿಗಳ ಆಸರೆಯಿಂದ ಅವರು ನಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ಕಾಲುಗಳು ಜೋಳಾಡುತ್ತಾ ನೆಲಕ್ಕೆ ಮುಟ್ಟುತ್ತಿದ್ದುವು. ಹಝ್ರತ್ ಪೈಗಂಬರ್(ಸ) ಬಂದದ್ದಾಗಿ ಗೊತ್ತಾದಾಗ ಹಝ್ರತ್ ಅಬೂಬಕರ್(ಅ) ಹಿಂದಕ್ಕೆ ಸರಿಯಲು ಬಯಸಿದರು. ತಮ್ಮ ಜಾಗದಲ್ಲೇ ಇರಲು ಹಝ್ರತ್ ಪೈಗಂಬರ್(ಸ) ಸನ್ನೆ ಮಾಡಿ ತಿಳಿಸಿದರು. ಹಝ್ರತ್ ಪೈಗಂಬರ್(ಸ)ರನ್ನು ಹಝ್ರತ್ ಅಬೂಬಕರ್(ಅ)ರ ಸಮೀಪಕ್ಕೆ ಕೊಂಡು ಹೋಗಲಾಯಿತು. ಹಝ್ರತ್ ಪೈಗಂಬರ್(ಸ) ಅವರ ಬಳಿ ಕುಳಿತುಕೊಂಡರು. ಅದರ ನಂತರ ಹಝ್ರತ್ ಪೈಗಂಬರ್(ಸ) ನಮಾಝ್ ನಿರ್ವಹಿಸಲು ಶುರುಮಾಡಿದರು. ಹಝ್ರತ್ ಅಬೂಬಕರ್(ಅ) ಹಝ್ರತ್ ಪೈಗಂಬರ್(ಸ)ರ ನಮಾಝ್ನೊಂದಿಗೆ ನಮಾಝ್ ನಿರ್ವಹಿಸಲು ಶುರುಮಾಡಿದರು. ಇತರ ಜನರು ಹಝ್ರತ್ ಅಬೂಬಕರ್(ಅ)ರ ನಮಾಝ್ನನ್ನು ಅನುಕರಿಸುತ್ತಿದ್ದರು. (ಸೀರತುನ್ನಬಿ(ಸ), ಅನ್ವಾರುಲ್ ಉಲೂಮ್, ಸಂಪುಟ–1, ಪುಟ–506–507)

ಹಝ್ರತ್ ಪೈಗಂಬರ್(ಸ)ರ ನಿಧನದ ಕುರಿತು ಒಂದೆಡೆ ಹೀಗೆ ವರದಿಯಾಗಿದೆ. ಹಝ್ರತ್ ಆಯಿಶ(ರ)ರಿಂದ ಉರ್‌ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನಧನರಾದರು. ಆ ಸಮಯದಲ್ಲಿ ಹಝ್ರತ್ ಅಬೂಬಕರ್(ಅ) ಸುನ್‌ಅದಲ್ಲಿ ಇದ್ದರು. ಅದು ಮದೀನದ ಆಸುಪಾಸಿನಲ್ಲಿದ್ದ ಒಂದು ಗ್ರಾಮವಾಗಿತ್ತು. ಹಝ್ರತ್ ಪೈಗಂಬರ್(ಸ)ರ ನಿಧನದ ಸುದ್ದಿ ಕೇಳಿದಾಗ ಹಝ್ರತ್ ಉಮರ್(ರ) ಎದ್ದು ನಿಂತುಕೊಂಡು ಹೀಗೆ ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಮೃತಪಟ್ಟಿಲ್ಲ. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಅಲ್ಲಿಗೆ ಬಂದರು. ಅವರು ಹಝ್ರತ್ ಪೈಗಂಬರ್(ಸ)ರ ಮುಖದಿಂದ ಬಟ್ಟೆಯನ್ನು ನೀಗಿಸಿದರು. ಅವರ ಹಣೆಯನ್ನು ಚುಂಬಿಸಿದರು ಮತ್ತು ಹೀಗೆ ಹೇಳಿದರು: ನನ್ನ ತಂದೆತಾಯಂದಿರು ನಿಮಗೆ ಅರ್ಪಿತವಾಗಲಿ. ನೀವು ಜೀವಿತದಲ್ಲೂ ಮೃತಪಟ್ಟ ನಂತರವೂ ಪವಿತ್ರರೂ ಪರಿಶುದ್ಧರೂ ಆಗಿರುವಿರಿ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೇಳುತ್ತೇನೆ: ನಿಮಗೆ ಎರಡು ಮರಣಗಳು ಬರಲಾರವು. ಹೀಗೆ ಹೇಳಿ ಹಝ್ರತ್ ಅಬೂಬಕರ್(ಅ) ಹೊರಗೆ ಹೋದರು ಮತ್ತು ಹಝ್ರತ್ ಉಮರ್(ರ)ರೊಡನೆ ಹೀಗೆ ಹೇಳಿದರು: ಎಲೈ ಅಲ್ಲಾಹನ ಮೇಲೆ ಆಣೆ ಹಾಕುವವನೇ, ನಿಲ್ಲು. ಹಝ್ರತ್ ಅಬೂಬಕರ್(ಅ) ಮಾತನಾಡಲು ಶುರುಮಾಡಿದಾಗ, ಹಝ್ರತ್ ಉಮರ್(ರ) ಕುಳಿತುಕೊಂಡರು. ಹಝ್ರತ್ ಅಬೂಬಕರ್(ಅ) ಅಲ್ಲಾಹನಿಗೆ ಸ್ತುತಿಯನ್ನು ಅರ್ಪಿಸಿದ ನಂತರ ಹೇಳಿದರು: **ಮನ್‌ಕಾನ ಮಿನ್‌ಕುಂ ಯಅ್‌ಬುದು ಮುಹಮ್ಮದನ್. ಫಇನ್ನ ಮುಹಮ್ಮದನ್**

**ಖದ್ ಮಾತ ವಮನ್‌ಕಾನ ಮಿನ್‌ಕುಂ ಯಅ್‌ಬುದುಲ್ಲಾಹ ಫಇನ್ನಲ್ಲಾಹ ಲಾ ಯಮೂತ್**. ಎಂದರೆ ಯಾರು ಮುಹಮ್ಮದ್ ರಸೂಲುಲ್ಲಾಹ್‌ರನ್ನು ಆರಾಧಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿರುವರು. ಯಾರು ಅಲ್ಲಾಹನ ಆರಾಧನೆ ಮಾಡುತ್ತಾರೋ ಅವರು ಸಂತೋಷಗೊಳ್ಳಿರಿ. ಏಕೆಂದರೆ, ಅಲ್ಲಾಹನು ಜೀವಂತನಾಗಿರುವನು. ಅವನು ಎಂದಿಗೂ ಮೃತಪಡಲಾರನು. **ಇನ್ನಕ ಮಯ್ಯಿತುನ್ ವ ಇನ್ನಹುಂ ಮಯ್ಯಿತೂನ್**. ನೀವೂ ಮೃತಪಡುವಿರಿ. ಅವರೂ ಮೃತಪಡುವವರೇ ಆಗಿರುವರು. **ವಮಾ ಮುಹಮ್ಮದುನ್ ಇಲ್ಲಾ ರಸೂಲ್, ಖದ್ ಖಲತ್ ಮಿನ್ ಖಬ್ಲಿಹಿರ್ರಸೂಲ್, ಅಫಿಮ್ಮಾತ ಅಔ ಖುತಿಲನ್ಖಲಬ್‌ತುಮ್ ಅಲಾ ಅಅ್‌ಖಾಬಿಕುಮ್, ವಮೈಂಯನ್‌ಖಲಿಬ್ ಅಲಾ ಅಖಿಬೈಹಿ ಫಲೈಂಯುಝುರ್ರಲ್ಲಾಹ ಶೈಅ, ಫಸಯಜ್‌ಝಿಯಲ್ಲಾಹುಶ್ಶಾಕಿರೀನ್** (ಆಲಿ ಇಮ್ರಾನ್:145)

ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ಹಿಂತಿರುಗಿ ಹೋಗುವವನು ಅಲ್ಲಾಹನಿಗೆ ಏನೂ ಹಾನಿಯುಂಟುಮಾಡಲಾರ. ಕೃತಜ್ಞತೆ ಸೂಚಿಸುವವರಿಗೆ ಅಲ್ಲಾಹನು ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ. ವರದಿಗಾರ ಹೇಳುತ್ತಾರೆ: ಇದನ್ನು ಕೇಳಿ ಜನರು ಬಹಳವಾಗಿ ಅತ್ತರು. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬನ್ನಬಿ(ಸ), ಹದೀಸ್-3667-3668)

ಹಝ್ರತ್ ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ಅ) ಓದಿದ ವಚನವನ್ನು ಅಲ್ಲಾಹನು ಅವತೀರ್ಣಗೊಳಿಸಿದ್ದು ಗೊತ್ತೇ ಇರಲಿಲ್ಲವೆಂದೂ ಅವರಿಂದಲೇ ಈ ವಚನವನ್ನು ಕಲಿತಿದ್ದೇವೆ ಎಂದೂ ನಮಗೆ ಅನಿಸುತ್ತಿತ್ತು. ಅನಂತರ ಪ್ರತಿಯೊಬ್ಬರೂ ಈ ವಚನವನ್ನು ಓದಲು ಶುರುಮಾಡಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಅಬೂಬಕರ್(ರ) ಈ ವಚನವನ್ನು ಓದಿಹೇಳಿದಾಗ ನಾನು ಗಾಬರಿಗೊಂಡೆನು ಮತ್ತು ನನ್ನ ಕಾಲುಗಳನ್ನು ನನಗೆ ನಿಯಂತ್ರಿಸಲು ಸಾಧ್ಯವಾಗಲಿಲ್ಲ. ನಾನು ನೆಲಕ್ಕೆ ಬಿದ್ದುಬಿಟ್ಟೆನು. ಹಝ್ರತ್ ಅಬೂಬಕರ್(ಅ) ಈ ವಚನವನ್ನು ಓದಿದಾಗ ಹಝ್ರತ್ ಪೈಗಂಬರ್(ಸ) ನಿಧನರಾದರು ಎಂದು ನನಗೆ ಅರಿವಾಯಿತು. (ಸಹೀಹ್ ಬುಖಾರಿ, ಕಿತಾಬುಲ್ ಮಘಾಝಿ, ಹದೀಸ್-4454)

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹೀಗೆ ಹೇಳುತ್ತಿದ್ದರು: ಹಝ್ರತ್ ಪೈಗಂಬರ್(ಸ) ಮೃತಪಟ್ಟಿಲ್ಲ. ಕಪಟವಿಶ್ವಾಸಿಗಳನ್ನು ಕೊಲ್ಲುವ ತನಕ ಅವರು ಮೃತಪಡಲಾರರು. ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ: ಸಹಾಬಿಯರು ಇದನ್ನು ಕೇಳಿ ಸಂತೋಷಗೊಳ್ಳುತ್ತಿದ್ದರು ಮತ್ತು ತಮ್ಮ ತಲೆಗಳನ್ನು ಎತ್ತಿ ನಡೆಯುತ್ತಿದ್ದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಎಲೈ ಮನುಷ್ಯಾ, ಖಂಡಿತವಾಗಿಯೂ ಹಝ್ರತ್ ಪೈಗಂಬರ್(ಸ) ನಿಧನರಾಗಿರುವರು. ನೀವೂ ಮೃತಪಡುವಿರಿ ಮತ್ತು ಅವರೂ ಮೃತಪಡುವರು ಎಂದು ಅಲ್ಲಾಹನು ಹೇಳಿದ್ದನ್ನು ನೀನು ಕೇಳಿಲ್ಲಲ್ಲವೇ? ಮತ್ತು ಯಾವನೇ ಮನುಷ್ಯನಿಗೆ ನಿನಗಿಂತ ಮುಂಚೆ ಶಾಶ್ವತವಾದ ಜೀವಿತವನ್ನು ನೀಡಿಲ್ಲವೆಂದು ಅಲ್ಲಾಹನು ಹೇಳಿಲ್ಲಲ್ಲವೇ? ಅನಂತರ ಹಝ್ರತ್ ಅಬೂಬಕರ್(ರ) ಪ್ರವಚನ ಪೀಠವನ್ನೇರಿ ಭಾಷಣ ಮಾಡಿದರು. ಈ ಹದೀಸನ್ನು ವಿವರಿಸುತ್ತಾ ಅಬೂ ಅಬ್ದುಲ್ಲಾಹ್ ಖುರ್ತುಬಿ ಹೇಳುತ್ತಾರೆ: ಈ ಸಂಗತಿಯಿಂದ ಹಝ್ರತ್ ಅಬೂಬಕರ್(ಅ)ರ ಧೈರ್ಯದ ಬಗ್ಗೆ ಅರಿವಾಗುತ್ತದೆ. ಏಕೆಂದರೆ ವಿಪತ್ತುಗಳು ಬರುವಾಗ ಮನೋಸ್ಥೈರ್ಯವನ್ನು ತೋರಿಸುವುದೇ ಅಪಾರವಾದ ಧೀರತೆಯಾಗಿದೆ. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಮರಣಕ್ಕಿಂತ ದೊಡ್ಡದಾದ ವಿಪತ್ತು ಬೇರೆ ಇಲ್ಲವಾಗಿತ್ತು. ಆ ಸಮಯದಲ್ಲಿ ಹಝ್ರತ್ ಅಬೂಬಕರ್(ಅ)ರ ಧೈರ್ಯ ಮತ್ತು ಅರಿವು ಪ್ರಕಟವಾದವು.

(ಅಲ್‌ಮವಾಹಿಬುದ್ದುನಿಯ, ಭಾಗ-4, ಪುಟ-547, ಅಲ್‌ಮಕ್ತಬುಲ್ ಇಸ್ಲಾಮಿ 2004)

ದುಃಖವನ್ನು ಸಹಿಸಿಕೊಂಡ ಕಾರಣದಿಂದ ಅವರ ಧೀರತೆಯ ಅರಿವಾಗುತ್ತದೆ. ಪವಿತ್ರ ಖುರ್‌ಆನಿನ ವಚನವನ್ನು ಓದಿ ಅದರ ವಿವರಣೆಯನ್ನು ನೀಡಿದಾಗ ಅವರ ಅರಿವು ಪ್ರಕಟವಾಯಿತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ನಿಧನದ ಪ್ರಭಾವ ಎಷ್ಟಿತ್ತು ಎಂದರೆ, ಅವರು ಅದರಿಂದ ಗಾಬರಿಗೊಂಡರು. ಕೆಲವರಿಗೆ ಮಾತನಾಡಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಕೆಲವರಿಗೆ ನಡೆಯಲು ಕೂಡ ಆಗುತ್ತಿರಲಿಲ್ಲ. ಕೆಲವರಿಗೆ ತನ್ನ ಭಾವನೆಗಳನ್ನು ನಿಯಂತ್ರಿಸಲು ಆಗುತ್ತಿರಲಿಲ್ಲ. ಕೆಲವರು ದುಃಖಿತರಾಗಿ ಕೆಲವು ದಿನಗಳಲ್ಲೇ ಮೃತಪಟ್ಟರು. ಹಝ್ರತ್ ಪೈಗಂಬರ್(ಸ)ರ ಮರಣವನ್ನು ಅಂಗೀಕರಿಸಲು ಕೂಡ ಹಝ್ರತ್ ಉಮರ್(ರ) ಸಿದ್ಧರಿರಲಿಲ್ಲ. ಅವರು ಖಡ್ಗವನ್ನು ಎತ್ತಿ ನಿಂತುಕೊಂಡರು ಮತ್ತು ಹೀಗೆ ಹೇಳಿದರು: ಯಾರು ಹಝ್ರತ್ ಪೈಗಂಬರ್(ಸ) ನಿಧನರಾದರು ಎಂದು ಹೇಳುವರೋ ಅವರನ್ನು ನಾನು ಕೊಲ್ಲುವೆನು. ಹಝ್ರತ್ ಪೈಗಂಬರ್(ಸ)ರನ್ನು ಮೂಸಾ(ಅ)ರಂತೆ ಕರೆಯಲಾಗಿದೆ. ಮೂಸಾ(ಅ) 40 ದಿನಗಳ ನಂತರ ಮರಳಿಬಂದ ಹಾಗೆಯೇ ಹಝ್ರತ್ ಪೈಗಂಬರ್(ಸ) ಕೆಲವು ದಿನಗಳ ನಂತರ ಮರಳಿ ಬರುವರು. ಹಝ್ರತ್ ಪೈಗಂಬರ್(ಸ)ರ ಮೇಲೆ ಆರೋಪ ಹೊರಿಸುವ ಕಪಟವಿಶ್ವಾಸಿಗಳನ್ನು ಅವರು ಕೊಲ್ಲುವರು. ಹಝ್ರತ್ ಉಮರ್(ರ) ಎಷ್ಟು ಆವೇಶದಲ್ಲಿದ್ದರು ಎಂದರೆ, ಅವರ ಮಾತನ್ನು ನಿರಾಕರಿಸಲು ಸಹಾಬಿಯರಿಗೆ ಆಗುತ್ತಿರಲಿಲ್ಲ. ಇದೇ ಸರಿಯೆಂದು ಕೆಲವು ಸಹಾಬಿರಯರಿಗೆ ಹಝ್ರತ್ ಉಮರ್‌ರ ಆವೇಶವನ್ನು ನೋಡಿ ಅನಿಸುತ್ತಿತ್ತು. ತಲೆ ತಗ್ಗಿಸಿ ಕುಳಿತುಕೊಂಡವರು ತಲೆಯೆತ್ತಿದರು. ಹಝ್ರತ್ ಪೈಗಂಬರ್(ಸ)ರ ಆರೋಗ್ಯ ಸ್ವಲ್ಪ ಸುಧಾರಿಸಿಕೊಂಡಾಗ ಹಝ್ರತ್ ಅಬೂಬಕರ್(ರ) ಮದೀನದ ಸಮೀಪವಿದ್ದ ಒಂದು ಗ್ರಾಮಕ್ಕೆ ಹೋಗಿದ್ದರು. ಈ ಅವಸ್ಥೆಯನ್ನು ಕಂಡಾಗ ಹಝ್ರತ್ ಅಬೂಬಕರ್(ರ)ರನ್ನು ಬೇಗನೇ ಕರೆದುಕೊಂಡು ಬರಲಿಕ್ಕಾಗಿ ಕೆಲವು ಸಹಾಬಿಯರು ಒಬ್ಬ ಸಹಾಬಿಯನ್ನು ಅವರ ಬಳಿಗೆ ಕಳುಹಿಸಿದರು. ಹೇಗಿದ್ದರೂ ಮಾರ್ಗದಲ್ಲೇ ಹಝ್ರತ್ ಅಬೂಬಕರ್(ರ)ರನ್ನು ಆ ಸಹಾಬಿ ಭೇಟಿಯಾದರು. ಹಝ್ರತ್ ಅಬೂಬಕರ್(ಅ) ಮರಳಿ ಬರುತ್ತಿದ್ದರು. ಅವರನ್ನು ನೋಡಿ ಆ ಸಹಾಬಿಗೆ ಕಣ್ಣೀರು ಬಂತು. ಭಾವುಕರಾಗಿ ಅವರಿಗೆ ಏನೂ ಹೇಳಲು ಆಗುತ್ತಿರಲಿಲ್ಲ. ಏನಾಗಿದೆ ಎಂದು ಹಝ್ರತ್ ಅಬೂಬಕರ್(ಅ)ರಿಗೆ ಗೊತ್ತಾಯಿತು. ಹಝ್ರತ್ ಪೈಗಂಬರ್(ಸ) ನಿಧನಗೊಂಡರೇ ಎಂದು ಹಝ್ರತ್ ಅಬೂಬಕರ್(ರ) ಆ ಸಹಾಬಿಯೊಡನೆ ಕೇಳಿದರು. ಅವರು ಹೀಗೆ ಉತ್ತರಿಸಿದರು: ಯಾರು ಹಝ್ರತ್ ಪೈಗಂಬರ್(ಸ) ನಿಧನರಾದರು ಎಂದು ಹೇಳುವರೋ ಅವರನ್ನು ನಾನು ಕೊಲ್ಲುವೆನು ಎಂದು ಹಝ್ರತ್ ಉಮರ್(ರ) ಹೇಳುತ್ತಿದ್ದಾರೆ. ಆಗ ಹಝ್ರತ್ ಅಬೂಬಕರ್(ಅ) ಹಝ್ರತ್ ಪೈಗಂಬರ್(ಸ)ರ ಮನೆಗೆ ಹೋದರು. ಹಝ್ರತ್ ಪೈಗಂಬರ್(ಸ)ರ ದೇಹಕ್ಕೆ ಹೊದಿಸಲಾದ ಬಟ್ಟೆಯನ್ನು ಅವರು ನೀಗಿಸಿದರು. ಅವರು ಸತ್ಯವಾಗಿಯೂ ಮೃತಪಟ್ಟಿರುವರು ಎಂದು ಗೊತ್ತುಮಾಡಿದರು. ತನ್ನ ಪ್ರಿಯನ ಅಗಲುವಿಕೆಯ ದುಃಖದಿಂದ ಅವರಿಗೆ ಕಣ್ಣೀರು ಬಂತು. ಬಾಗಿಕೊಂಡು ಹಝ್ರತ್ ಪೈಗಂಬರ್(ಸ)ರ ಹಣೆಯನ್ನು ಚುಂಬಿಸಿದರು ಮತ್ತು ಹೀಗೆ ಹೇಳಿದರು: ಅಲ್ಲಾಹನಾಣೆ, ಅಲ್ಲಾಹನು ನಿಮಗೆ ಎರಡು ಮರಣಗಳನ್ನು ನೀಡಲಾರನು. ಬೇರೆ ಯಾವುದೇ ಪ್ರವಾದಿಯ ಮರಣದಿಂದ ಉಂಟಾದ ನಷ್ಟಕ್ಕಿಂತ ಹೆಚ್ಚಿನ ನಷ್ಟ ನಿಮ್ಮ ಮರಣದಿಂದ ಲೋಕಕ್ಕೆ ಉಂಟಾಗಿದೆ. ನಿಮ್ಮ ಸ್ವಭಾವಗುಣಗಳನ್ನು ವರ್ಣಿಸಲು ಸಾಧ್ಯವಿಲ್ಲ. ಯಾವುದೇ ಸಂತಾಪ ಸೂಚನೆಯಿಂದ ನಿಮ್ಮ ಅಗಲುವಿಕೆಯ ದುಃಖವನ್ನು ಕಡಿಮೆಗೊಳಿಸಲೂ ಸಾಧ್ಯವಲ್ಲ. ನಿಮ್ಮ ಮರಣವನ್ನು ತಡೆಯುವ ಶಕ್ತಿ ನಮಗೆ ಇರುತ್ತಿದ್ದರೆ, ನಾವೆಲ್ಲರೂ ನಮ್ಮ ಜೀವತೆತ್ತು ನಿಮ್ಮ ಮರಣವನ್ನು ತಡೆಯುತ್ತಿದ್ದೆವು. ಹೀಗೆ ಹೇಳಿದ ನಂತರ ಹಝ್ರತ್ ಅಬೂಬಕರ್(ಅ) ಹಝ್ರತ್ ಪೈಗಂಬರ್(ಸ)ರ ದೇಹವನ್ನು ಬಟ್ಟೆಯಿಂದ ಮರೆಮಾಚಿದರು.

ಅನಂತರ ಹಝ್ರತ್ ಉಮರ್(ರ) ಮತ್ತು ಇತರ ಸಹಾಬಿಯರು ಒಟ್ಟುಗೂಡಿದ ಸ್ಥಳಕ್ಕೆ ಅವರು ಬಂದರು. ಹಝ್ರತ್ ಪೈಗಂಬರ್(ಸ) ಮೃತಪಟ್ಟಿಲ್ಲ, ಈಗಲೂ ಜೀವಂತವಾಗಿರುವರು ಎಂದು ಹಝ್ರತ್ ಉಮರ್(ರ) ಹೇಳುತ್ತಿದ್ದರು. ಅಲ್ಲಿಗೆ ಬಂದು ಹಝ್ರತ್ ಉಮರ್‌ರೊಡನೆ ಹಝ್ರತ್ ಅಬೂಬಕರ್(ಅ) ಹೇಳಿದರು: ಈಗ ನೀವು ಸ್ವಲ್ಪ ಸುಮ್ಮನಾಗಿರಿ. ಆದರೆ ಹಝ್ರತ್ ಉಮರ್(ರ) ಅವರ ಮಾತನ್ನು ಅಂಗೀಕರಿಸಲಿಲ್ಲ ಮತ್ತು ತನ್ನ ಮಾತನ್ನು ಹೇಳುತ್ತಲೇ ಹೋದರು. ಆಗ ಹಝ್ರತ್ ಅಬೂಬಕರ್(ಅ) ಒಂದು ಕಡೆಗೆ ಸರಿದುಕೊಂಡು, ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವರು ಎಂಬ ತನ್ನ ಮಾತನ್ನು ಜನರೊಡನೆ ಹೇಳಲು ಶುರುಮಾಡಿದರು. ಆಗ ಸಹಾಬಿಯರು ಹಝ್ರತ್ ಉಮರ್‌ರನ್ನು ಬಿಟ್ಟುಕೊಂಡು ಹಝ್ರತ್ ಅಬೂಬಕರ್(ಅ)ರ ಸುತ್ತ ಒಟ್ಟುಗೂಡಿದರು. ಕೊನೆಗೆ ಹಝ್ರತ್ ಉಮರ್‌ರಿಗೂ ಹಝ್ರತ್ ಅಬೂಬಕರ್(ಅ)ರ ಮಾತನ್ನು ಕೇಳಬೇಕಾಗಿ ಬಂತು. ಹಝ್ರತ್ ಅಬೂಬಕರ್(ರ) ಹೇಳಿದರು:

**ವಮಾ ಮುಹಮ್ಮದುನ್ ಇಲ್ಲಾ ರಸೂಲ್, ಖದ್ ಖಲತ್ ಮಿನ್ ಖಬ್ಲಿಹಿರ್ರಸೂಲ್, ಅಫಿಮ್ಮಾತ ಅಔ ಖುತಿಲನ್ಖಲಬ್‌ತುಮ್ ಅಲಾ ಅಅ್‌ಖಾಬಿಕುಮ್, ವಮೈಂಯನ್‌ಖಲಿಬ್ ಅಲಾ ಅಖಿಬೈಹಿ ಫಲೈಂಯುಝುರ್ರಲ್ಲಾಹ ಶೈಅ, ಫಸಯಜ್‌ಝಿಯಲ್ಲಾಹುಶ್ಶಾಕಿರೀನ್- ಯಾ ಅಯ್ಯುಹನ್ನಾಸು ಮನ್‌ಕಾನ ಮಿನ್‌ಕುಂ ಯಅ್‌ಬುದು ಮುಹಮ್ಮದನ್. ಫಇನ್ನ ಮುಹಮ್ಮದನ್ ಖದ್ ಮಾತ ವಮನ್‌ಕಾನ ಮಿನ್‌ಕುಂ ಯಅ್‌ಬುದುಲ್ಲಾಹ ಫಇನ್ನಲ್ಲಾಹ ಲಾ ಯಮೂತ್**. ಎಂದರೆ ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ನೀವೂ ಮೃತಪಡುವಿರಿ. ಅವರೂ ಮೃತಪಡುವವರೇ ಆಗಿರುವರು. ಎಲೈ ಜನರೇ, ಯಾರು ಮುಹಮ್ಮದ್ ರಸೂಲುಲ್ಲಾಹ್‌ರನ್ನು ಆರಾಧಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿರುವರು. ಯಾರು ಅಲ್ಲಾಹನ ಆರಾಧನೆ ಮಾಡುತ್ತಾರೋ ಅವರು ಸಂತೋಷಗೊಳ್ಳಿರಿ. ಏಕೆಂದರೆ, ಅಲ್ಲಾಹನು ಜೀವಂತನಾಗಿರುವನು. ಅವನು ಎಂದಿಗೂ ಮೃತಪಡಲಾರನು. ಹಝ್ರತ್ ಅಬೂಬಕರ್(ರ) ಮೇಲಿನ ಈ ಎರಡು ವಚನಗಳನ್ನು ಪಾರಾಯಣ ಮಾಡಿಕೊಂಡು, ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವರು ಎಂದು ಜನರೊಡನೆ ಹೇಳಿದಾಗ, ಸಹಾಬಿಯರಿಗೆ ಸತ್ಯದ ಅರಿವಾಯಿತು. ಅವರು ಅನಿಯಂತ್ರಿತವಾಗಿ ಅಳಲು ಶುರುಮಾಡಿದರು. ಹಝ್ರತ್ ಉಮರ್(ರ) ಸ್ವತಃ ಹೇಳುತ್ತಾರೆ: ಈ ಎರಡು ವಚನಗಳಿಂದ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಮರಣವನ್ನು ಸಾಬೀತುಗೊಳಿಸಿದಾಗ, ಈ ಎರಡು ವಚನಗಳು ಇಂದೇ ಅವತೀರ್ಣವಾಗಿವೆ ಎಂದು ನನಗೆ ಭಾಸವಾಗುತ್ತಿತ್ತು. ನನ್ನ ಕಾಲುಗಳು ಬಲಹೀನವಾದವು. ನನ್ನ ಕಾಲುಗಳು ನಡುಗಲು ಶುರುವಾದವು. ದುಃಖದ ತೀವ್ರತೆಯಿಂದ ನಾನು ನೆಲಕ್ಕೆ ಬಿದ್ದೆನು. (ದಲ್‌ವತುಲ್ ಅಮೀರ್, ಅನ್ವಾರುಲ್ ಉಲೂಮ್, ಸಂಪುಟ-7, ಪುಟ-345-347)

ಈ ಸಂಬಂಧವಾಗಿ ಮುಸ್ಲಿಮರ ಮೊದಲ ಒಮ್ಮತಾಭಿಪ್ರಾಯದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಮುಂಚಿನ ಎಲ್ಲ ಪ್ರವಾದಿಗಳು ಮೃತಪಟ್ಟಿದ್ದಾರೆ. ಅವರಲ್ಲಿ ಹಝ್ರತ್ ಈಸಾ ಮಸೀಹ್ ಕೂಡ ಸೇರುತ್ತಾರೆ. ಹಝ್ರತ್ ಪೈಗಂಬರ್(ಸ) ನಿಧನರಾದಾಗ ಮುಸ್ಲಿಮರು ಗಾಬರಿಗೊಂಡರು. ಈ ದುಃಖವನ್ನು ಅವರಿಗೆ ಸಹಿಸಲು ಸಾಧ್ಯವಾಗಿರಲಿಲ್ಲ. ಹಝ್ರತ್ ಉಮರ್(ರ) ಅದೇ ಗಾಬರಿಯಲ್ಲಿ ಖಡ್ಗವನ್ನು ಎತ್ತಿ ಹೀಗೆ ಹೇಳಿದರು: 'ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವರು ಎಂದು ಯಾರಾದರೂ ಹೇಳಿದರೆ, ನಾನು ಅವನ ತಲೆಯನ್ನು ಕಡಿಯುವೆನು. ಹಝ್ರತ್ ಪೈಗಂಬರ್(ಸ) ಮೃತಪಟ್ಟಿಲ್ಲ. ಬದಲಾಗಿ ಹಝ್ರತ್ ಮೂಸಾ(ಅ)ರಂತೆ ಅಲ್ಲಾಹನನ್ನು ಭೇಟಿಯಾಗಲು ಹೋಗಿರುವರು. ಅವರು ಮರಳಿ ಬರುವರು ಮತ್ತು ಕಪಟವಿಶ್ವಾಸಿಗಳನ್ನು ಮುಗಿಸಿದ ನಂತರ ವಫಾತ್ ಆಗುವರು.' ಕಪಟವಿಶ್ವಾಸಿಗಳು ಕೊನೆಗೊಳ್ಳುವ ತನಕ ಹಝ್ರತ್ ಪೈಗಂಬರ್(ಸ) ಮೃತಪಡಲಾರರು ಎಂದಾಗಿತ್ತು ಅವರ ವಿಶ್ವಾಸ. ಮದೀನದ ಸಮೀಪ ಗ್ರಾಮಕ್ಕೆ ಹೋಗಿದ್ದ ಹಝ್ರತ್ ಅಬೂಬಕರ್(ರ) ಅಷ್ಟರಲ್ಲಿ ಮರಳಿ ಬಂದರು ಮತ್ತು ಹಝ್ರತ್ ಪೈಗಂಬರ್(ಸ)ರ ಮನೆಗೆ ಹೋದರು. ಹಝ್ರತ್ ಪೈಗಂಬರ್(ಸ)ರ ಅನುಗ್ರಹೀತ ದೇಹವನ್ನು ನೋಡಿದರು. ಸತ್ಯವಾಗಿಯೂ ಹಝ್ರತ್ ಪೈಗಂಬರ್(ಸ) ನಿಧನಗೊಂಡಿರುವರು ಎಂದು ಗೊತ್ತುಮಾಡಿದರು. ಅನಂತರ ಹೀಗೆ ಹೇಳುತ್ತಾ ಹೊರಗೆ ಬಂದರು: ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಎರಡು ಮರಣಗಳನ್ನು ಕೊಡಲಾರನು. ಎಂದರೆ ಶಾರೀರಿಕ ಮರಣವನ್ನು ನೀಡುವನು. ಆದರೆ ಆಧ್ಯಾತ್ಮಿಕ ಮರಣವನ್ನು ನೀಡಲಾರನು. ಹಝ್ರತ್ ಪೈಗಂಬರ್(ಸ) ನಿಧನರಾದ ಕೂಡಲೇ ಮುಸ್ಲಿಮರು ಕೆಟ್ಟುಹೋಗಲಾರರು. (ಅವರು ತಂದ ಇಸ್ಲಾಂ ಜೀವಂತವಾಗಿಯೇ ಇರುವುದು.) ಅನಂತರ ಹಝ್ರತ್ ಅಬೂಬಕರ್(ರ) ನೇರವಾಗಿ ಸಹಾಬರು ಒಟ್ಟುಗೂಡಿದ್ದ ಸ್ಥಳಕ್ಕೆ ಹೋದರು ಮತ್ತು ಸ್ವಲ್ಪ ಮಾತುಗಳನ್ನು ಹೇಳಲು ಬಯಸುತ್ತೇನೆ ಎಂದು ಜನರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ನಿಧನರಾದರು ಎಂದು ಹೇಳುವವನ ತಲೆಯನ್ನು ಕಡಿಯಲಿಕ್ಕಾಗಿ ಹಝ್ರತ್ ಉಮರ್(ರ) ಖಡ್ಗವೆತ್ತಿ ನಿಂತಿದ್ದರು. ಹಝ್ರತ್ ಅಬೂಬಕರ್(ರ) ನಿಂತುಕೊಂಡು ಜನರೊಡನೆ ಹೀಗೆ ಸಂಬೋಧಿಸುತ್ತಾ ಹೇಳಿದರು: **ಮನ್‌ಕಾನ ಮಿನ್‌ಕುಂ ಯಅ್‌ಬುದು ಮುಹಮ್ಮದನ್. ಫಇನ್ನ ಮುಹಮ್ಮದನ್ ಖದ್ ಮಾತ ವಮನ್‌ಕಾನ ಮಿನ್‌ಕುಂ ಯಅ್‌ಬುದುಲ್ಲಾಹ ಫಇನ್ನಲ್ಲಾಹ ಲಾ ಯಮೂತ್.** ಎಂದರೆ ಯಾರು ಮುಹಮ್ಮದ್ ರಸೂಲುಲ್ಲಾಹ್‌ರನ್ನು ಆರಾಧಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿರುವರು. ಯಾರು ಅಲ್ಲಾಹನ ಆರಾಧನೆ ಮಾಡುತ್ತಾರೋ ಅವರು ಸಂತೋಷಗೊಳ್ಳಲಿ. ಏಕೆಂದರೆ, ಅಲ್ಲಾಹನು ಜೀವಂತನಾಗಿರುವನು. ಅವನು ಎಂದಿಗೂ ಮೃತಪಡಲಾರನು.

ಅನಂತರ ಹಝ್ರತ್ ಅಬೂಬಕರ್(ರ) ಪವಿತ್ರ ಖುರ್‌ಆನಿನ ಈ ವಚನವನ್ನು ಓದಿ ಹೇಳಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲ್, ಖದ್ ಖಲತ್ ಮಿನ್ ಖಬ್ಲಿಹಿರ್‌ರಸೂಲ್, ಅಫಿಮ್ಮಾತ ಅಔ ಖುತಿಲನ್ಖಲಬ್‌ತುಮ್ ಅಲಾ ಅಅ್‌ಖಾಬಿಕುಮ್, ವಮ್ಮೈಂ ಯನ್‌ಖಲಿಬ್ ಅಲಾ ಅಖಬೈಹಿ ಫಲೈಂಯಝುರ್‌ರಲ್ಲಾಹ ಶೈಅ, ಫಸಯಜ್‌ಝಿಯಲ್ಲಾಹುಶ್ಶಾಕಿರೀನ್** ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ಇಸ್ಲಾಂ ಉಪೇಕ್ಷಿಸುವಿರಾ? ಹಝ್ರತ್ ಉಮರ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಪವಿತ್ರ ಖುರ್‌ಆನಿನ ಈ ವಚನವನ್ನು ಓದಿದಾಗ ನನ್ನ ಕಣ್ಣುಗಳು ತೆರೆದುವು. ಈ ವಚನ ಈಗ ಅವತೀರ್ಣವಾದದ್ದು ಎಂದು ನನಗೆ ಅನಿಸುತ್ತಿತ್ತು. ಹಝ್ರತ್ ಪೈಗಂಬರ್(ಸ) ಮೃತಪಟ್ಟಿರುವರು ಎಂದು ನನಗೆ ಗೊತ್ತಾಯಿತು. ನನ್ನ ಕಾಲುಗಳು ನಡುಗಿದ್ದುವು ಮತ್ತು ನಾನು ನೆಲಕ್ಕೆ ಬಿದ್ದುಬಿಟ್ಟೆ. ಇದನ್ನು ಹೇಳಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಣೆ ನೀಡುತ್ತಾರೆ: ಎಲ್ಲ ಸಹಾಬಿಯರ ಒಮ್ಮತಾಭಿಪ್ರಾಯ ಈ ಒಂದೇ ಸಂಗತಿಯಲ್ಲಿ ಆಗಿತ್ತು. ಏಕೆಂದರೆ ಆ ಸಮಯದಲ್ಲಿ ಎಲ್ಲ ಸಹಾಬಿಯರು ಅಲ್ಲಿದ್ದರು. ಇಂತಹ ಒಂದು ಸನ್ನಿವೇಶ, ಎಲ್ಲ ಸಹಾಬಿಯರು ಒಟ್ಟುಗೂಡಿ ಒಮ್ಮತಾಭಿಪ್ರಾಯ ಹೊಂದಿದ ಸನ್ನವೇಶ ಹಿಂದೆಂದೂ ಆಗಿರಲಿಲ್ಲ. ನಂತರವೂ ಆಗಲಿಲ್ಲ. ಈ ಸಭೆಯಲ್ಲಿ ಹಝ್ರತ್ ಅಬೂಬಕರ್(ರ) ಈ ವಚನವನ್ನು ಓದಿದರು: ಮುಹಮ್ಮದ್(ಸ) ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಆದ್ದರಿಂದ ಅವರ ಮರಣ ಆಶ್ಚರ್ಯಕರವಾದ ಸಂಗತಿಯಲ್ಲ. ಎಲ್ಲ ಸಹಾಬಿಯರು ಹಝ್ರತ್ ಅಬೂಬಕರ್(ರ)ರ ಹೇಳಿಕೆಯೊಂದಿಗೆ ಒಮ್ಮತಾಭಿಪ್ರಾಯವನ್ನು ಹೊಂದಿಕೊಂಡರು.
(ಮಸ್‌ಅಲ ವಹೀ ವ ನಬುವ್ವತ್ ಕೆ ಮುತಲ್ಲಿಕ್ ಇಸ್ಲಾಮಿ ನಝ್‌ರಿಯ, ಅನ್ವಾರುಲ್ ಉಲೂಮ್, ಸಂಪುಟ–23, ಪುಟ–327–328)

ಹಝ್ರತ್ ಮಸೀಹ್ ಮೌಊದ್(ಅ) ಸಹ ಹಝ್ರತ್ ಅಬೂಬಕರ್(ರ)ರ ಇದೇ ಸಂಗತಿಯನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಮುಸ್ಲಿಂ ಸಮುದಾಯಕ್ಕೆ ಮಾಡಿದ ಔದಾರ್ಯಕ್ಕೆ ಕೃತಜ್ಞತೆ ಅರ್ಪಿಸಲು ಕೂಡ ನಮ್ಮಿಂದ ಸಾಧ್ಯವಿಲ್ಲ. ಹಿಂದಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವರು ಎಂಬ ಪವಿತ್ರ ಖುರ್‌ಆನಿನ ಈ ವಚನವನ್ನು ಮಸ್ಜಿದ್ ನಬವಿಯಲ್ಲಿ ಎಲ್ಲ ಸಹಾಬಿಯರನ್ನು ಒಟ್ಟುಸೇರಿಸಿ ಹಝ್ರತ್ ಅಬೂಬಕರ್(ರ) ಓದಿ ಹೇಳಿರದಿದ್ದರೆ, ಈ ಸಮುದಾಯ ನಾಶವಾಗುತ್ತಿತ್ತು. ಹಝ್ರತ್ ಅಬೂಬಕರ್(ರ) ಹಾಗೆ ಹೇಳಿಲ್ಲದಿದ್ದರೆ, ಅಂತಹ ಸ್ಥಿತಿಯಲ್ಲಿ ಹಝ್ರತ್ ಈಸಾ ಮಸೀಹರು ಜೀವಂತರಾಗಿರುವರು ಎಂದೇ ಸಹಾಬಿಯರ ಅಭಿಪ್ರಾಯವಾಗಿತ್ತು ಎಂದು ಈಗಿನ ಗಲಭೆಕೋರರಾದ ಉಲೇಮಗಳು ಹೇಳಿಕೊಳ್ಳುತ್ತಿದ್ದರು. ಆದರೆ ಈಗ ಅಬೂಬಕರ್(ರ) ಈ ವಚನವನ್ನು ಮುಂದಿರಿಸಿದ ಕಾರಣದಿಂದ ಈ ಮಾತಿನಲ್ಲಿ ಎಲ್ಲ ಸಹಾಬಿಯರ ಒಮ್ಮತಾಭಿಪ್ರಾಯ ಉಂಟಾಯಿತು. ಮುಂಚಿನ ಎಲ್ಲ ಪ್ರವಾದಿಗಳು ಮೃತಪಟ್ಟಿರುವರು ಎಂದು ಎಲ್ಲ ಸಹಾಬಿಯರು ಒಪ್ಪಿಕೊಂಡರು. ಮಾತ್ರವಲ್ಲ ಈ ಒಮ್ಮತಾಭಿಪ್ರಾಯದ ಬಗ್ಗೆ ಕವನಗಳನ್ನು ಕೂಡ ರಚಿಸಿದರು. ಹಝ್ರತ್ ಅಬೂಬಕರ್(ರ)ರ ಆತ್ಮದ ಮೇಲೆ ಅಲ್ಲಾಹನು ಸಾವಿರಾರು ಕಾರುಣ್ಯಗಳ ಮಳೆಯನ್ನು ವರ್ಷಿಸಲಿ. ಅವರು ಎಲ್ಲರನ್ನು ನಾಶದಿಂದ ರಕ್ಷಿಸಿದರು. ಈ ಒಮ್ಮತಾಭಿಪ್ರಾಯದಲ್ಲಿ ಎಲ್ಲ ಸಹಾಬಿಯರು ಹಾಜರಿದ್ದರು. ಒಬ್ಬರೂ ಕೂಡ ಹೊರತಾಗಿರಲಿಲ್ಲ. ಇದು ಸಹಾಬಿಯರ ಮೊದಲ ಒಮ್ಮತಾಭಿಪ್ರಾಯವಾಗಿತ್ತು ಮತ್ತು ಅತ್ಯಂತ ವಂದನೀಯ ಕಾರ್ಯವಾಗಿತ್ತು. ಅಬೂಬಕರ್(ರ) ಮತ್ತು ಮಸೀಹ್ ಮೌಊದ್‌ರ ನಡುವೆ ಒಂದು ಸಾಮ್ಯತೆಯಿದೆ. ಒಂದು ಭಯದ ಸ್ಥಿತಿ ಇಸ್ಲಾಮಿಗೆ ಉಂಟಾಗುವಾಗ ಮತ್ತು ಜನರು ಧರ್ಮತ್ಯಾಗ ಮಾಡಲು ಶುರುವಾಗುವಾಗ ಅವರು ಪ್ರಕಟಗೊಳ್ಳುವರು ಎಂದು ಇಬ್ಬರ ಕುರಿತೂ ಪವಿತ್ರ ಖುರ್‌ಆನನಲ್ಲಿ ವಾಗ್ದಾನವಿದೆ. ಹಾಗೆಯೇ ಹಝ್ರತ್ ಅಬೂಬಕರ್(ರ) ಮತ್ತು ಮಸೀಹ್ ಮೌಊದ್‌ರ ಕಾಲದಲ್ಲಿ ಉಂಟಾಯಿತು. ಎಂದರೆ ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಹಝ್ರತ್ ಪೈಗಂಬರ್(ಸ)ರ ಮರಣದ ನಂತರ ನೂರಾರು ಮೂಢರಾದ ಅರೇಬಿಯರು ಧರ್ಮತ್ಯಾಗ ಮಾಡಿದರು. ಕೇವಲ ಎರಡು ಮಸೀದಿಗಳಲ್ಲಿ ನಮಾಝ್ ನಿರ್ವಹಿಸುವಂತಹ ಸ್ಥಿತಿ ಉಂಟಾಯಿತು. ಹಝ್ರತ್ ಅಬೂಬಕರ್(ರ) ಅವರನ್ನು ಪುನಃ ಇಸ್ಲಾಮಿಗೆ ತಂದರು. ಅದೇ ರೀತಿಯಲ್ಲಿ ಮಸೀಹ್ ಮೌಊದ್‌ರ ಕಾಲದಲ್ಲಿ ಅನೇಕ ಲಕ್ಷದಷ್ಟು ಜನರು ಇಸ್ಲಾಮ್ ಧರ್ಮವನ್ನು ತ್ಯಜಿಸಿದರು ಮತ್ತು ಕ್ರೈಸ್ತರಾದರು. ಈ ಎರಡೂ ಸ್ಥಿತಿಗಳ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಭವಿಷ್ಯ ನುಡಿಯಾಗಿದೆ. (ಝಮೀಮ ಬರಾಹೀನೆ ಅಹ್ಮದಿಯ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–285–286 ಅಡಿಟಿಪ್ಪಣಿ)

ಹಝ್ರತ್ ಅಬೂಬಕರ್(ರ)ರ ಖಿಲಾಫತಿನ ಬಗ್ಗೆ ಹೀಗೆ ವರದಿಯಿದೆ. ಸಹಾಬಿಯರಿಗೆ ಹಝ್ರತ್ ಪೈಗಂಬರ್(ಸ)ರ ನಿಧನದ ಬಗ್ಗೆ ಗೊತ್ತಾದಾಗ ಮದೀನದ ಅನ್ಸಾರರು ಸಖೀಫ ಬನೀ ಸಾಇದದಲ್ಲಿ ಒಟ್ಟುಸೇರಿದರು. ಈ ಸಭೆಯಲ್ಲಿ ಖಿಲಾಫತಿನ ಕುರಿತು ಮಾತುಕತೆ ನಡೆಯಿತು. ಖಜ್‌ರಜಿನ ನೇತಾರ ಸಅದ್ ಬಿನ್ ಉಬಾದರ ಸುತ್ತ ಅನ್ಸಾರರು ಒಟ್ಟು ಸೇರಿದರು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಮುಹಮ್ಮದ್ ಸಲಾಬಿ, ಪುಟ–174)

ಹಝ್ರತ್ ಸಅದ್ ಬಿನ್ ಉಬಾದ ಆ ದಿನಗಳಲ್ಲಿ ರೋಗಿಯಾಗಿದ್ದರು. ಅವರು ಅನ್ಸಾರರ ತ್ಯಾಗಗಳ ಮತ್ತು ಅವರು ಇಸ್ಲಾಮಿಗೆ ಮಾಡಿದ ಸೇವೆಗಳ ಬಗ್ಗೆ ವಿಶದವಾಗಿ ಪ್ರಸ್ತಾಪಿಸುತ್ತಾ ಅನ್ಸಾರರನ್ನು ಖಿಲಾಫತಿಗೆ ಹಕ್ಕುದಾರರೆಂದು ಹೇಳಿದರು. ಆದರೆ ಅನ್ಸಾರರು ಹಝ್ರತ್ ಸಅದ್ ಬಿನ್ ಉಬಾದರನ್ನೇ ಖಿಲಾಫತಿಗಾಗಿ ಅನುಯೋಜ್ಯವಾದ ವ್ಯಕ್ತಿಯೆಂದು ಹೇಳಿದರು. ಆದರೆ ಅಷ್ಟರ ವರೆಗೂ ಅನ್ಸಾರರು ಅವರ ಕೈಯಲ್ಲಿ ಬೈಅತ್ ಮಾಡಿರಲಿಲ್ಲ. ಮುಹಾಜಿರರು ಅವರ ಖಿಲಾಫತನ್ನು ಅಂಗೀಕರಿಸದಿದ್ದರೆ ಏನು ಮಾಡುವುದು ಎಂದು ಒಬ್ಬರು ಕೇಳಿದರು. ಒಬ್ಬ ವ್ಯಕ್ತಿ ಮುಹಾಜಿರರಿಂದ ಮತ್ತು ಒಬ್ಬ ವ್ಯಕ್ತಿ ಅನ್ಸಾರರಿಂದ ಖಲೀಫರಾಗಬೇಕು ಎಂದು ಮತ್ತೊಬ್ಬ ವ್ಯಕ್ತಿ ಅದಕ್ಕೆ ಸಲಹೆ ನೀಡಿದರು. ಆದರೆ ಅದು ಬನೂ ಔಸಿನ ದೌರ್ಬಲ್ಯವಾಗಿದೆ ಎಂದು ಹಝ್ರತ್ ಸಅದ್ ಬಿನ್ ಉಬಾದ(ರ) ಹೇಳಿದರು. ಸಖೀಫ ಬನೂ ಸಾಇದದಲ್ಲಿ ಇದ್ದುಕೊಂಡು ಅನ್ಸಾರರು ಖಿಲಾಫತಿನ ಕುರಿತು ಚರ್ಚಿಸುತ್ತಿದ್ದರು. ಅದೇ ಸಮಯದಲ್ಲಿ ಹಝ್ರತ್ ಉಮರ್ ಬಿನ್ ಖತ್ತಾಬ್, ಹಝ್ರತ್ ಅಬೂಉಬೈದ ಬಿನ್ ಜರ್ರಾಹ್(ರ) ಮತ್ತು ಇತರ ಶ್ರೇಷ್ಠ ಸಹಾಬಿಯರು ಮಸ್ಜಿದ್ ನಬವಿಯಲ್ಲಿ ಹಝ್ರತ್ ಪೈಗಂಬರ್(ಸ)ರ ಮರಣದ ಬಗ್ಗೆ ಪ್ರಸ್ತಾಪಿಸುತ್ತಿದ್ದರು. ಹಝ್ರತ್ ಅಬೂಬಕರ್ ಸಿದ್ದೀಖ್, ಹಝ್ರತ್ ಅಲಿ(ರ) ಮತ್ತು ಹಝ್ರತ್ ಪೈಗಂಬರ್(ಸ)ರ ಕುಟುಂಬದವರು ಕಫನ್ ಮತ್ತು ದಫನ ಮಾಡುವ ಕಾರ್ಯದಲ್ಲಿ ನಿರತರಾಗಿದ್ದರು. ಅವರಲ್ಲಿ ಯಾರಿಗೂ ಆ ಸಮಯದಲ್ಲಿ ಖಿಲಾಫತ್ ಬಗ್ಗೆ ಚಿಂತೆಯಿರಲಿಲ್ಲ. ಖಿಲಾಫತ್ ಬಗ್ಗೆ ಚರ್ಚಿಸಲು ಮತ್ತು ಅನ್ಸಾರರಲ್ಲಿ ಯಾರನ್ನಾದರೂ ನೇತಾರನನ್ನಾಗಿ ಮಾಡಿಕೊಳ್ಳಲಿಕ್ಕಾಗಿ ಅನ್ಸಾರರು ಒಟ್ಟುಗೂಡಿರುವರು ಎಂದು ಮುಹಾಜಿರರಿಗೆ ಗೊತ್ತಿರಲಿಲ್ಲ. (ಸಿದ್ದೀಖೆ ಅಕ್ಬರ್, ಮುಹಮ್ಮದ್ ಹುಸೈನ್ ಹೈಕಲ್, ಅಂಜುಮ್ ಸುಲ್ತಾನ್ ಶಹ್‌ಬಾಝ್, ಪುಟ–85–86, ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್)

ತಬ್‌ಖಾತುಲ್ ಕುಬ್ರಾದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಉಮರ್(ರ) ಹಝ್ರತ್ ಅಬೂಉಬೈದ ಬಿನ್ ಜರ್ರಾಹ್‌ರ ಬಳಿಗೆ ಹೋಗಿ ಹೀಗೆ ಹೇಳಿದರು: ನಿಮ್ಮ ಕೈಯಲ್ಲಿ ಬೈಅತ್ ಮಾಡಲಿಕ್ಕಾಗಿ ನೀವು ನಿಮ್ಮ ಕೈಯನ್ನು ಮುಂದಕ್ಕೆ ಚಾಚಿರಿ. ಏಕೆಂದರೆ ನಿಮ್ಮನ್ನು ಮುಸ್ಲಿಂ ಸಮುದಾಯದ ಅಮೀನ್ ಎಂದರೆ, ವಿಶ್ವಸ್ತ ವ್ಯಕ್ತಿ ಎಂಬುವುದಾಗಿ ಹಝ್ರತ್ ಪೈಗಂಬರ್(ಸ) ಹೇಳಿರುವರು. ಆಗ ಹಝ್ರತ್ ಅಬೂಉಬೈದ(ರ) ಹಝ್ರತ್ ಉಮರ್(ರ)ರೊಡನೆ ಹೇಳಿದರು: ನೀವು ಇಸ್ಲಾಂ ಸ್ವೀಕಾರ ಮಾಡಿದ ನಂತರ ಇಲ್ಲಿಯ ವರೆಗೂ ನಿಮ್ಮ ನಾಲಗೆಯಿಂದ ಇಂತಹ ಮೂರ್ಖತನದ ಮಾತನ್ನು ನಾನು ಆಲಿಸಿಲ್ಲ. ನಿಮ್ಮ ನಡುವೆ ಹಝ್ರತ್ ಅಬೂಬಕರ್(ರ) ಇರುವಾಗ ನೀವು ನನ್ನ ಬೈಅತ್ ಮಾಡುವಿರಾ?

(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–135, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಇದೇ ಮಾತುಕತೆಯ ನಡುವೆ ಅವರಿಗೆ ಅನ್ಸಾರರು ಒಟ್ಟುಗೂಡಿರುವುದರ ಬಗ್ಗೆ ತಿಳಿಯಿತು. ಆಗ ಒಂದು ಮುಖ್ಯವಾದ ಕೆಲಸವಿದೆ ಎಂಬ ಸಂದೇಶವನ್ನು ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರಿಗೆ ಕಳುಹಿಸಿದರು. ಕಫನ್ ಮಾಡುವ ಮತ್ತು ದಫನ ಕಾರ್ಯಗಳು ನಡೆಯುತ್ತಿವೆ. ಆದ್ದರಿಂದ ಈಗ ಬರಲು ಸಾಧ್ಯವಿಲ್ಲವೆಂದು ಹಝ್ರತ್ ಅಬೂಬಕರ್(ರ) ತಿಳಿಸಿದರು. ಆಗ ಹಝ್ರತ್ ಉಮರ್(ರ) ಪುನಃ ಹೀಗೆ ಸಂದೇಶ ಕಳುಹಿಸಿದರು: ಒಂದು ತುರ್ತು ಪರಿಸ್ಥಿತಿ ಉಂಟಾಗಿದೆ. ಅಲ್ಲಿ ನೀವು ಇರಲೇ ಬೇಕಾಗಿದೆ. ಆಗ ಹಝ್ರತ್ ಅಬೂಬಕರ್(ರ) ಹೊರಗೆ ಬಂದು ಹಝ್ರತ್ ಉಮರ್(ರ)ರೊಡನೆ ಕೇಳಿದರು: ಹಝ್ರತ್ ಪೈಗಂಬರ್(ಸ)ರ ಕಫನ್ ಹೊದಿಕೆ ಮತ್ತು ದಫನ್ ಕಾರ್ಯಗಳಿಗಿಂತ ಹೆಚ್ಚು ಮುಖ್ಯವಾದ ಯಾವ ಸಂಗತಿಗಾಗಿ ನೀವು ನನ್ನನ್ನು ಕರೆಯುತ್ತಿದ್ದೀರಿ? ಆಗ ಹಝ್ರತ್ ಉಮರ್(ರ) ಹೇಳಿದರು: ಅನ್ಸಾರರು ಸಖೀಫ ಬನೂ ಸಾಇದದಲ್ಲಿ ಒಟ್ಟುಗೂಡಿ ಹಝ್ರತ್ ಸಅದ್ ಬಿನ್ ಉಬಾದರನ್ನು ಖಲೀಫರನ್ನಾಗಿ ಮಾಡಲು ಉದ್ದೇಶಿರುವವರು ಎಂದು ನಿಮಗೆ ಗೊತ್ತಿದೆಯೇ? ಅವರಿಂದ ಒಬ್ಬ ವ್ಯಕ್ತಿ ಅಮೀರ್ ಆಗಬೇಕೆಂದೂ ಖುರೈಶಿಯರಿಂದ ಒಬ್ಬ ವ್ಯಕ್ತಿ ಅಮೀರ್ ಆಗಬೇಕೆಂದೂ ಮತ್ತೊಬ್ಬ ಅನ್ಸಾರ್ ಸಹೋದರ ಹೇಳಿರುವವರು. ಇದನ್ನು ಕೇಳಿದಾಗ ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಉಬೈದ(ರ)ರ ಜೊತೆಗೆ ಹಝ್ರತ್ ಅಬೂಬಕರ್(ರ) ಸಖೀಫ ಬನೂ ಸಾಇದಗೆ ತಲುಪಿದರು. ಅಲ್ಲಿ ಚರ್ಚೆ ನಡೆಯುತ್ತಿತ್ತು. ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬೂಉಬೈದ(ರ) ಅವರ ನಡುವೆ ಕುಳಿತುಕೊಂಡರು. (ಹಝ್ರತ್ ಸಯ್ಯಿದುನಾ ಅಬೂಬಕ್ಕರ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ–86–87, ಶಿರ್ಕತ್ ಪ್ರಿಂಟಿಂಗ್ ಪ್ರೆಸ್ ಲಾಹೋರ್) (ಸಯ್ಯಿದುನಾ ಸಿದ್ದೀಖೆ ಅಕ್ಬರ್, ಅಲ್‌ಹಾಜ್ ಹಕೀಮ್ ಗುಲಾಮ್ ನಬಿ, ಪುಟ–72–73, ಮತ್‌ಬುಅ ಅದ್‌ಬಿಯಾತ್ ಲಾಹೋರ್)

ಒಂದು ವರದಿಯಲ್ಲಿ ಹಝ್ರತ್ ಉಮರ್(ರ) ಹೀಗೆ ಹೇಳಿದ್ದಾಗಿ ಬಂದಿದೆ: ನಾವು ಅನ್ಸಾರರ ಕಡೆಗೆ ಹೋಗಿ ಅವರ ಸಮೀಪಕ್ಕೆ ತಲುಪಿದಾಗ ಅವರಲ್ಲಿ ಎರಡು ಸಾತ್ವಿಕ ವ್ಯಕ್ತಿಗಳಾದ ಅವೀಮ್ ಬಿನ್ ಸಾಇದ ಮತ್ತು ಉಮ್ಮಾನ್ ಬಿನ್ ಅದ್ದಿಯನ್ನು ಭೇಟಿಯಾದೆವು. ನೀವೆಲ್ಲಿಗೆ ಹೋಗುತ್ತಿದ್ದೀರಿ ಎಂದು ಅವರು ಕೇಳಿದರು. ನಾವು ಅನ್ಸಾರ್ ಸಹೋದರರ ಬಳಿಗೆ ಹೋಗುತ್ತಿದ್ದೇವೆ ಎಂದು ಹೇಳಿದೆವು. ಅವರಿಬ್ಬರೂ ಹೇಳಿದರು: ನೀವು ಅವರ ಬಳಿಗೆ ಹೋಗುವ ಆವಶ್ಯಕತೆಯಿಲ್ಲ. ನೀವು ಸ್ವತಃ ಸಂಗತಿಯ ತೀರ್ಮಾನ ಮಾಡಿರಿ. ನಾನು ಹೇಳಿದೆ: ಅಲ್ಲಾಹನ ಆಣೆ, ನಾವು ಖಂಡಿತ ಅಲ್ಲಿಗೆ ಹೋಗುವೆವು. (ಸಹೀಹ್ ಬುಖಾರಿ, ಕಿತಾಬುಲ್ ಹುದೂದ್........ ಹದೀಸ್–6830) (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಹದೀಸ್–4021)

ಹೇಗಿದ್ದರೂ ಹಝ್ರತ್ ಉಮರ್(ರ) ಹೇಳುತ್ತಾರೆ: ನಾವು ಅನ್ಸಾರರ ಬಳಿಗೆ ಹೋದೆವು. ಅನ್ಸಾರರ ಮುಂದೆ ಹೇಳಲಿಕ್ಕಾಗಿ ನಾನು ನನ್ನ ಮನಸ್ಸಿನಲ್ಲಿ ಒಂದು ವಿಷಯವನ್ನು ಯೋಚಿಸಿ ತಯಾರಿ ಮಾಡಿದ್ದೆ. ನಾನು ಅವರ ಬಳಿಗೆ ತಲುಪಿ ಮಾತನಾಡಲು ಮುಂದಕ್ಕೆ ಹೋದೆ. ಆದರೆ ಹಝ್ರತ್ ಅಬೂಬಕರ್(ರ) ನನ್ನನ್ನು ತಡೆದರು. ನಾನು ಮಾತನಾಡುವ ವರೆಗೂ ನೀವು ಏನೂ ಹೇಳಬೇಡಿರಿ. ಅನಂತರ ಏನು ಬೇಕಾದರೂ ಹೇಳಿರಿ ಎಂದು ಅವರು ನನ್ನೊಡನೆ ಹೇಳಿದರು. ಅನಂತರ ಹಝ್ರತ್ ಅಬೂಬಕರ್(ರ) ಮಾತನಾಡಲು ಶುರುಮಾಡಿದರು. ನಾನು ಹೇಳಬಯಸಿದ್ದನ್ನು ಹಝ್ರತ್ ಅಬೂಬಕರ್(ರ) ಹೇಳಿದರು. ಮಾತ್ರವಲ್ಲ ಅದಕ್ಕಿಂತ ಹೆಚ್ಚು ಅವರು ಹೇಳಿದರು. (ತಾರೀಖ್ ಅತ್ತಿಬರಿ, ಸಂಪುಟ–2, ಪುಟ–242, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಹಝ್ರತ್ ಅಬೂಬಕರ್(ರ) ಮಾಡಿದ ಭಾಷಣದ ಸಂಕ್ಷಿಪ್ತ ಪ್ರಸ್ತಾಪವಿದೆ. ಅಬ್ದುಲ್ಲಾಹ್ ಬಿನ್ ಅಬ್ದುರ್ರಹ್ಮಾನ್ ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಭಾಷಣವನ್ನು ಶುರುಮಾಡಿದರು. ಅಲ್ಲಾಹನಿಗೆ ಸ್ತುತಿಯನ್ನು ಅರ್ಪಿಸಿದ ನಂತರ ಅವರು ಹೇಳಿದರು: ಅಲ್ಲಾಹನ ಆರಾಧನೆ ಮಾಡಲಿಕ್ಕಾಗಿ ಮತ್ತು ಅವನ ಏಕತ್ವವನ್ನು ಸ್ಥಾಪಿಸಿಲಿಕ್ಕಾಗಿ ಅಲ್ಲಾಹನು ಮುಹಮ್ಮದ್(ಸ)ರನ್ನು ಪ್ರವಾದಿಯನ್ನಾಗಿ ಮತ್ತು ತನ್ನ ಉಮ್ಮತಿನ ಮೇಲ್ನೋಟಗಾರನಾಗಿ ಕಳುಹಿಸಿದನು. ಇದಕ್ಕಿಂತ ಮುಂಚೆ ಜನರು ಬೇರೆ ಬೇರೆ ಆರಾಧ್ಯ ವಸ್ತುಗಳನ್ನು ಪೂಜಿಸುತ್ತಿದ್ದರು. ಆ ಮೂರ್ತಿಗಳು ಅಥವಾ ಆರಾಧ್ಯ ವಸ್ತುಗಳು ಅಲ್ಲಾಹನ ಮುಂದೆ ನಮ್ಮ ಶಿಫಾರಸ್ಸು ಮಾಡುವರು ಮತ್ತು ನಮಗೆ ಪ್ರಯೋಜನ ನೀಡುವರು ಎಂದು ಜನರು ಹೇಳುತ್ತಿದ್ದರು. ಆದರೆ ಆ ಮೂರ್ತಿಗಳು ಕಲ್ಲಿನಿಂದ ಕೆತ್ತಲಾಗಿದ್ದುವು ಮತ್ತು ಮರದ ತುಂಡುಗಳಿಂದ ತಯಾರಿಸಲಾಗಿದ್ದುವು. ಅನಂತರ ಹಝ್ರತ್ ಅಬೂಬಕರ್(ರ) ಈ ವಚನವನು ಪಾರಾಯಣ ಮಾಡಿದರು: **ವಯಅ್‌ಬುದೂನ ಮಿನ್ ದೂನಿಲ್ಲಾಹಿ ಮಾ ಲಾ ಯಝುರ್ರುಹುಮ್ ವಲಾ ಯನ್‌ಫಉಹುಮ್ ವಯಖೂಲೂನ ಹಾಉಲಾಇ ಶುಫಆಉನಾ ಇಂದಲ್ಲಾ** (ಯೂನುಸ್–19) ಎಂದರೆ, ಅವರು ಅಲ್ಲಾಹನನ್ನು ಬಿಟ್ಟು ತಮಗೆ ಉಪದ್ರವನ್ನಾಗಲಿ, ಉಪಕಾರವನ್ನಾಗಲಿ ಮಾಡದವುಗಳನ್ನು ಆರಾಧಿಸುತ್ತಾರೆ. 'ಇವರು ಅಲ್ಲಾಹನ ಸನ್ನಿಧಿಯಲ್ಲಿ ನಮ್ಮ ಶಿಫಾರಸುಗಾರರಾಗಿದ್ದಾರೆ' ಎಂದು ಅವರು ಹೇಳುತ್ತಾರೆ. ಅವರು ನಮ್ಮನ್ನು ಅಲ್ಲಾಹನಿಗೆ ಹೆಚ್ಚು ನಿಕಟಗೊಳಿಸಲಿಕ್ಕಾಗಿ ಮಾತ್ರವೇ ನಾವು ಅವರನ್ನು ಆರಾಧಿಸುತ್ತಿರುವುದು ಎಂದೂ ಅವರು ಹೇಳುತ್ತಾರೆ. ಈ ವಚನಗಳನ್ನು ಓದಿದ ನಂತರ ಹಝ್ರತ್ ಅಬೂಬಕರ್(ರ) ಹೇಳಿದರು: ತಮ್ಮ ತಾತಂದಿರ ಧರ್ಮವನ್ನು ಉಪೇಕ್ಷಿಸುವುದು ಅರೇಬಿಯರಿಗೆ ಕಷ್ಟಕರವಾದ ಸಂಗತಿಯಾಗಿತ್ತು. ಹೀಗೆ ಹಝ್ರತ್ ಪೈಗಂಬರ್(ಸ)ರ ಸಮುದಾಯದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಸತ್ಯಪಡಿಸಲಿಕ್ಕಾಗಿ, ಅವರ ಮೇಲೆ ವಿಶ್ವಾಸ ಇರಿಸಲಿಕ್ಕಾಗಿ, ಹಝ್ರತ್ ಪೈಗಂಬರ್(ಸ)ರ ದುಃಖಗಳನ್ನು ದೂರಮಾಡಲಿಕ್ಕಾಗಿ, ಅವರ ಸಮುದಾಯ ಅವರಿಗೆ ಕಠಿಣವಾದ ಕಷ್ಟಗಳನ್ನು ಕೊಡುತ್ತಿದ್ದಾಗ ಮತ್ತು ಅವರನ್ನು ಕಠಿಣವಾಗಿ ನಿರಾಕರಿಸುತ್ತಿದ್ದಾಗ ಅವರೊಂದಿಗೆ ಧೈರ್ಯದಿಂದ ನಿಲ್ಲಲಿಕ್ಕಾಗಿ ಅಲ್ಲಾಹನು ಮೊದಲಿಗೆ ಮುಹಾಜಿರರನ್ನು ಆಯ್ಕೆ ಮಾಡಿದನು. ಎಲ್ಲರೂ ಹಝ್ರತ್ ಪೈಗಂಬರ್(ಸ)ರ ವಿರೋಧಿಗಳಾಗಿದ್ದರು. ಅವರ ಮೇಲೆ ದೌರ್ಜನ್ಯ ಎಸಗುತ್ತಿದ್ದರು. ಹೀಗಿದ್ದರೂ ಮುಹಾಜಿರರು ಭಯಗೊಳ್ಳಲಿಲ್ಲ. ಭೂಮಿಯಲ್ಲಿ ಅಲ್ಲಾಹನ ಆರಾದನೆಯನ್ನು ಅನ್ಸಾರ್‌ಗಳಿಗಿಂತ ಮೊದಲು ಮಾಡಿದವರೂ ಮುಹಾಜಿರರೇ ಆಗಿದ್ದರು. ಅವರೇ ಮೊದಲು ಅಲ್ಲಾಹ್ ಮತ್ತು ಪೈಗಂಬರ್(ಸ)ರನ್ನು ನಂಬಿದ್ದರು. ಅವರು ಹಝ್ರತ್ ಪೈಗಂಬರ್(ಸ)ರ ಸ್ನೇಹಿತರು ಮತ್ತು ಕುಟುಂಬದವರಾಗಿರುವರು. ಹಝ್ರತ್ ಪೈಗಂಬರ್(ಸ) ನಂತರ ಈ ಸ್ಥಾನಕ್ಕೆ ಹೆಚ್ಚು ಹಕ್ಕುದಾರರು ಅವರೇ ಆಗಿರುವರು. ಈ ವಿಷಯದಲ್ಲಿ ದುರ್ಜನರಲ್ಲದೇ ಬೇರೆ ಯಾರೂ ಭಿನ್ನಾಭಿಪ್ರಾಯ ಹೊಂದಲಾರರು. ಎಲೈ ಅನ್ಸಾರರ ಸಂಘವೇ, ನೀವು ಧರ್ಮದಲ್ಲಿ ಶ್ರೇಷ್ಠತೆಯನ್ನು ಗಳಿಸಿರುವಿರಿ ಮತ್ತು ಒಟ್ಟಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸುವುದರಲ್ಲಿ ನೀವು ಮೊದಲಿಗರು ಆಗಿರುವಿರಿ ಎಂಬುದನ್ನು ನಿರಾಕರಿಸಲು ಸಾಧ್ಯವಿಲ್ಲ. ಅಲ್ಲಾಹನ ಧರ್ಮದ ಮತ್ತು ಅವನ ಪ್ರವಾದಿಯ ಸಹಾಯಕರು ಎಂಬ ಕಾರಣದಿಂದ ಅಲ್ಲಾಹನು ನಿಮ್ಮೊಂದಿಗೆ ಸಂಪ್ರೀತನಾದನು. ಹಝ್ರತ್ ಪೈಗಂಬರ್(ಸ)ರ ಹಿಜ್ರತನ್ನು ಕೂಡ ನಿಮ್ಮ ಕಡೆಗೆ ಅಲ್ಲಾಹನು ಮಾಡಿಸಿದನು. ಅವರ ಅನೇಕ ಪತ್ನಿಯರು ಮತ್ತು ಸಹಾಬಿಯರು ನಿಮ್ಮ ಬಳಿ ನೆಲೆಸಿರುವರು. ಆರಂಭದ ಮುಹಾಜಿರರ ನಂತರ ನಿಮ್ಮ ಸ್ಥಾನ ಯಾರಿಗೂ ಇಲ್ಲ.

ಆದ್ದರಿಂದ ನೇತಾರ ಖುರೈಶಿಗಳಿಂದ ಚುನಾಯಿತಗೊಳ್ಳಬೇಕು ಮತ್ತು ಮಂತ್ರಿ ನಿಮ್ಮಿಂದ. ಎಲ್ಲ ವಿಷಯಗಳಲ್ಲಿ ನಿಮ್ಮೊಡನೆ ಸಲಹೆ ಪಡೆಯಲಾಗುವುದು. ನೀವಿಲ್ಲದೇ ಮುಖ್ಯವಾದ ಸಂಗತಿಗಳಲ್ಲಿ ನಾವು ತೀರ್ಪು ಮಾಡಲಾರೆವು.

(ತಾರೀಖ್ ಅತ್ತಿಬರಿ, ಸಂಪುಟ–2, ಪುಟ–242–243, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಸಖೀಫ ಬನೂ ಸಾಇದಾದಲ್ಲಿ ಹಝ್ರತ್ ಅಬೂಬಕರ್(ರ) ಮಾಡಿದ ಭಾಷಣದ ಬಗ್ಗೆ ಸೀರತ್ ಹಲ್‌ಬಿಯದಲ್ಲಿ ಪ್ರಸ್ತಾಪ ಲಭಿಸುತ್ತದೆ. ಅವರು ಹೇಳಿದರು: ಖಿಲಾಫತಿನ ಬಗ್ಗೆ ಹೇಳುವುದಾದರೆ, ಅರೇಬಿಯದ ಜನರು ಖುರೈಶಿ ಗೋತ್ರದವರನ್ನಲ್ಲದೇ ಯಾರನ್ನೂ ಖಲೀಫರನ್ನಾಗಿ ಅಂಗೀಕರಿಸಲಾರರು. ಖುರೈಶಿಯರು ತಮ್ಮ ಪಾರಂಪರ್ಯ ಮತ್ತು ಕುಟುಂಬ ಮಹಿಮೆಯ ದೃಷ್ಟಿಯಲ್ಲಿ ಮಕ್ಕದಲ್ಲಿ ಅತ್ಯಂತ ಶ್ರೇಷ್ಠರೂ ಉನ್ನತರೂ ಆಗಿರುವರು. ಖುರೈಶಿಗಳು ತಮ್ಮ ಕುಟುಂಬದ ನೆಲೆಯಲ್ಲಿ ಪೂರ್ತಿ ಅರೇಬಿಯರೊಂದಿಗೆ ಸಂಬಂಧವನ್ನು ಹೊಂದಿರುವರು. ಇಸ್ಲಾಂ ಧರ್ಮವನ್ನು ಮೊತ್ತಮೊದಲು ಸ್ವೀಕರಿಸಿದವರು ಖುರೈಶಿಗಳಾಗಿದ್ದರು. ಖುರೈಶಿಗಳೇ ಹಝ್ರತ್ ಪೈಗಂಬರ್(ಸ)ರ ಸಹೋದರರು ಮತ್ತು ಕುಟುಂಬದವರು ಆಗಿರುವರು ಮತ್ತು ರಕ್ತ ಸಂಬಂಧಿಗಳಾಗಿರುವರು. ಖುರೈಶಿಗಳು ನುಬುವ್ವತ್ ಕುಟುಂಬದವರಾಗಿರುವರು ಮತ್ತು ಖಿಲಾಫತಿನ ಹಕ್ಕುದಾರರಾಗಿದ್ದಾರೆ. (ಅಸ್ಸೀರತುಲ್ ಹಲಬೀಯ , ಸಂಪುಟ–3, ಪುಟ–504–505, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಇವೇ ಘಟನೆಗಳ ಬಗ್ಗೆ ಪ್ರಸ್ತಾಪಿಸುತ್ತಾ ಇಮಾಂ ಅಹ್ಮದ್ ಬಿನ್ ಹಂಬಲ್(ರ) ತನ್ನ ಮಸ್ನದ್ ಗ್ರಂಥದಲ್ಲಿ ಹಝ್ರತ್ ಅಬೂಬಕರ್(ರ) ವಹಿಸಿದ ಪಾತ್ರವನ್ನು ವಿವರಿಸಿರುವರು. ಅವರು ಮಾಡಿದ ಭಾಷಣ ಮತ್ತು ಹಝ್ರತ್ ಪೈಗಂಬರ್(ಸ)ರ ನಿಧನದ ಬಗ್ಗೆ ಅವರು ಮಾಡಿದ ಘೋಷಣೆ ಬಗ್ಗೆ ವಿವರಿಸಿದ ನಂತರ ಹೇಳುತ್ತಾರೆ: ಇದೆಲ್ಲ ಆದ ನಂತರ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ವೇಗವಾಗಿ ಸಖೀಫ ಬನೂ ಸಾಇದದ ಕಡೆಗೆ ಹೋದರು. ಅಲ್ಲಿಗೆ ತಲುಪಿದ ನಂತರ ಹಝ್ರತ್ ಅಬೂಬಕರ್(ರ) ಮಾತುಕತೆ ಶುರುಮಾಡಿದರು. ಮದೀನದ ಅನ್ಸಾರ್ ಮುಸ್ಲಿಮರ ಕುರಿತು ಪವಿತ್ರ ಖುರ್‌ಆನಿನಲ್ಲಿ ಅವತೀರ್ಣವಾದ ಎಲ್ಲ ವಚನಗಳನ್ನು ಅವರು ಹೇಳಿದರು. ಹಝ್ರತ್ ಪೈಗಂಬರ್(ಸ) ಮದೀನದ ಅನ್ಸಾರರ ಶ್ರೇಷ್ಠತೆ ಕುರಿತು ವಿವರಿಸಿದ ಎಲ್ಲವನ್ನು ಅವರು ಹೇಳಿದರು. ಅನಂತರ ಹಝ್ರತ್ ಅಬೂಬಕರ್(ರ) ಹೇಳಿದರು: ಜನರು ಒಂದು ಕಣಿವೆಗೆ ಹೋದರೆ ಮತ್ತು ಮದೀನದ ಅನ್ಸಾರರು ಮತ್ತೊಂದು ಕಣಿವೆಗೆ ಹೋಗುವುದಾದರೆ, ನಾನು ಮದೀನದ ಅನ್ಸಾರರು ಹೋದ ಕಣಿವೆಗೆ ಹೋಗುವೆನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದು ನಿಮಗೆ ಗೊತ್ತಿದೆ.

ಅನಂತರ ಹಝ್ರತ್ ಸಅದ್‌ರನ್ನು ಸಂಬೋಧಿಸುತ್ತಾ ಹೇಳಿದರು: ಎಲೈ ಸಅದ್, ನೀನು ಕುಳಿತುಕೊಂಡಿದ್ದಾಗ, ಖಿಲಾಫತಿಗೆ ಖುರೈಶಿಗಳು ಹಕ್ಕುದಾರರಾಗಿರುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದು ನಿನಗೆ ಗೊತ್ತಿದೆಯಲ್ಲವೇ? ಜನರಲ್ಲಿ ಸಜ್ಜನರು ಖುರೈಶಿಗಳ ಸಜ್ಜನರನ್ನು ಅನುಸರಿಸುವರು. ಜನರಲ್ಲಿ ಕೆಟ್ಟವರು ಖುರೈಶಿಗಳ ಕೆಟ್ಟವರಿಗೆ ವಿಧೇಯರಾಗುವರು. ಹಝ್ರತ್ ಸಅದ್(ರ) ಹೇಳಿದರು: ನೀವು ಸತ್ಯವನ್ನು ಹೇಳುತ್ತಿದ್ದೀರಿ. ನಾವು ಮಂತ್ರಿಗಳು ಮತ್ತು ನೀವು ಸರದಾರರು. ಈ ಪ್ರಸ್ತಾಪ ಮುಂದುವರೆಯುವುದು.

(ಮಸ್ನದ್ ಅಹ್ಮದ್ ಬಿನ್ ಹಂಬಲ್, ಹದೀಸ್–18, ಸಂಪುಟ–1, ಪುಟ–158–159, ದಾರುಲ್ ಹದೀಸ್ ಖಾಹಿರ 1994)

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 31 March 2022, Issue No. 13

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

ಲೋಕದ ಈಗಿನ ಸ್ಥಿತಿಗತಿಗಳ ಬಗ್ಗೆಯೂ ಪ್ರಾರ್ಥಿಸಬೇಕೆಂದು ಹೇಳಬಯಸುತ್ತೇನೆ. ಅವು ಅತ್ಯಂತ ಅಪಾಯಕಾರಿಯಾಗಿವೆ ಮತ್ತು ಅವು ವರ್ಧಿಸುತ್ತಾ ಹೋಗುವುವು. ಒಂದು ದೇಶ ಮಾತ್ರವಲ್ಲ, ಅನೇಕ ರಾಷ್ಟ್ರಗಳು ಇದರಲ್ಲಿ ಭಾಗಿಯಾಗುವರು. ಇದು ಇದೇ ರೀತಿಯಲ್ಲಿ ವರ್ಧಿಸುತ್ತಾ ಹೋದರೆ ಇದರ ಭಯಾನಕ ಪರಿಣಾಮದ ಪ್ರಭಾವ ಬರುವ ಪೀಳಿಗೆಗಳ ವರೆಗೂ ಇರುವುದು. ಈ ಜನರು ಅತ್ಯುನ್ನತನಾದ ದೇವನನ್ನು ಅರಿಯುವವರಾಗಲಿ. ತಮ್ಮ ಲೌಕಿಕ ಬಯಕೆಗಳ ಪೂರೈಕೆಗಾಗಿ ಮನುಷ್ಯರ ಜೀವದೊಂದಿಗೆ ಆಟವಾಡದಿರಲಿ.

ಹೇಗಿದ್ದರೂ ನಾವಂತು ಪ್ರಾರ್ಥಿಸಬಹುದಾಗಿದೆ ಮತ್ತು ಪ್ರಾರ್ಥಿಸುತ್ತಿದ್ದೇವೆ. ತಿಳಿಸಿಕೊಡಬಹುದಾಗಿದೆ ಮತ್ತು ತಿಳಿಸಿಕೊಡುತ್ತಿದ್ದೇವೆ. ಒಂದು ದೀರ್ಘಕಾಲದಿಂದ ನಾವು ಈ ಕೆಲಸವನ್ನು ಮಾಡುತ್ತಿದ್ದೇವೆ. ಹೇಗಿದ್ದರೂ ಈ ದಿನಗಳಲ್ಲಿ ವಿಶೇಷವಾಗಿ ಅಹ್ಮದಿಯರು ದುಆ ಮಾಡಬೇಕು. ಮನುಷ್ಯನಿಗೆ ಊಹಿಸಲು ಕೂಡ ಸಾಧ್ಯವಾಗದಷ್ಟು ಭಯಾನಕ ಸ್ಥಿತಿಗತಿಗಳು ಮತ್ತು ವಿನಾಶಗಳು ಇದರಿಂದ ಆಗಬಹುದು. ಅಲ್ಲಾಹನು ಅವುಗಳಿಂದ ಮನುಷ್ಯಕುಲವನ್ನು ರಕ್ಷಿಸಲಿ.

ಜುಮಾ ನಮಾಝ್ ನಂತರ ಜಮಾಅತಿನ ಮರಬ್ಬಿಯಾದ ಸನ್ಮಾನ್ಯ ಖು಼ಶಿ ಮುಹಮ್ಮದ್ ಶಾಕಿರ್ ಸಾಹಿಬ್‌ರ ಜನಾಝ಼ ನಮಾಝ್ ಸಹ ನಿರ್ವಹಿಸುವೆನು. 69ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ಅವರ ತಾತರಾದ ಹಝ್ರತ್ ಮೌಲವಿ ಕರೀಂ ಬಕ್ಷ್ ಸಾಹಿಬ್‌ರ ಮೂಲಕ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರ ತಾತ ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾಗಿದ್ದರು. ಅವರು ಪ್ಲೇಗಿನ ದೃಷ್ಟಾಂತವನ್ನು ಕಂಡು ಬೈಅತ್ ಮಾಡಿದ್ದರು. ಹೀಗೆ ಮೌಲವಿ ಕರೀಂ ಬಕ್ಷ್ ಸಾಹಿಬ್‌ರ ಪತ್ನಿ ಫಝ್ಲ್ ಬೀಬಿ ಸಾಹಿಬರ ಸಹೋದರರಾದ ಹಝ್ರತ್ ಹಾಜೀ ಮುಹಮ್ಮದ್ ಅಬ್ದುಲ್ಲಾಹ್ ಸಾಹಿಬ್ ಸಹ ಹಝ್ರತ್ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ಹಝ್ರತ್ ಹಾಜೀ ಮುಹಮ್ಮದ್ ಅಬ್ದುಲ್ಲಾಹ್ ಸಾಹಿಬ್‌ರ ಹೆಸರನ್ನು ತಾರೀಖೇ ಅಹ್ಮದಿಯ್ಯತ್ತಿನ ಸಂಪುಟ 6ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯರ ಹೆಸರುಪಟ್ಟಿಯಲ್ಲಿ 23ನೇ ಸಂಖ್ಯೆಯಲ್ಲಿ ನಮೂದಿಸಲಾಗಿದೆ. (ಝಮೀಮ ತಾರೀಖೆ ಅಹ್ಮದೀಯತ್ ಸಂಪುಟ–8, ಪುಟ–11)

ಹೇಗಿದ್ದರೂ ಖು಼ಶಿ ಮುಹಮ್ಮದ್ ಶಾಕಿರ್ ಸಾಹಿಬ್‌ರು 1969ರಲ್ಲಿ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಜೀವಿತ ವಖ್ಫ್ ಮಾಡಿದ್ದರು. ಜಾಮಿಅ ಅಹ್ಮದಿಯಾದಲ್ಲಿ ದಾಖಲಾದರು. 1977ರಲ್ಲಿ ಜಾಮಿಅದಿಂದ ಶಾಹಿದ್ ಡಿಗ್ರಿ ಪಡೆದರು. 1978ರಲ್ಲಿ ಅರಬೀ ಫಾಝಿಲ್‌ನ ಪರೀಕ್ಷೆ ಪಾಸಾದರು. ಅನಂತರ ಜಮಾಅತಿನ ಸೇವೆ ಮಾಡುತ್ತಿದ್ದರು. ಅದರೊಂದಿಗೆ 1987ರಲ್ಲಿ ಎಂ.ಎ. ಇಸ್ಲಾಮಿಯಾತಿನ ಡಿಗ್ರಿ ಪಡೆದರು. ಪಾಕಿಸ್ತಾನದ ಅನೇಕ ಪಟ್ಟಣಗಳಲ್ಲಿ ಅಲ್ಲದೇ ಗಿನಿಕನಾಕುರಿಯಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅಲ್ಲಿ ಫ್ರಂಚ್ ಭಾಷೆಯಲ್ಲಿ ಡಿಪ್ಲೋಮ ಸಹ ಪಡೆದರು. ಅಲ್ಲಾಹನು ಅವರಿಗೆ 6 ಪುತ್ರರನ್ನು ದಯಪಾಲಿಸಿದನು. ಅವರ ಒಬ್ಬ ಮಗನಾದ ನಾಸಿರ್ ಇಸ್ಲಾಂ ಸಾಹಿಬ್ ರಬ್ವದಲ್ಲೇ ಮುಬಲ್ಲಿಗ್ ಆಗಿ ಸೇವೆಯಲ್ಲಿರುವರು.

1977ರಿಂದ 1991ರ ತನಕ ಪಾಕಿಸ್ತಾನದ ಅನೇಕ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1991ರಿಂದ 2007ರ ತನಕ ಸಿರಲಿಯೋನಿನಲ್ಲಿ ಮತ್ತು ಗಿನಿಕನಾಕುರಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅಲ್ಲಿಂದ ಮರಳಿ ಬಂದು 2008ರಿಂದ ಅಂಜುಮನಿನ ಆಫೀಸಿನ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡಲು ಸೌಭಾಗ್ಯ ಪಡೆದರು. ಎಡಿಶನಲ್ ನಾಝಿ಼ರ್ ಇಸ್ಲಾಹೋ ಇರ್‌ಶಾದ್ ಮತ್ತು ನಜ಼ಾರತ್ ಉಮೂರೆ ಆಮ್ಮದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಆಫ್ರಿಕದಲ್ಲಿ ಇದ್ದಾಗ ಅವರ ಮೂಲಕ ಅನೇಕ ಸೌಭಾಗ್ಯಶಾಲಿಗಳಿಗೆ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಪಡೆದರು. ಅವರ ಮೂಲಕ ಅನೇಕ ಜಮಾಅತುಗಳು ಸ್ಥಾಪಿಸಲ್ಪಟ್ಟುವು. ಬಹಳ ನಿಸ್ವಾರ್ಥರಾದ ಮತ್ತು ಪರಿಶ್ರಮಪಡುವ ಮುಬಲ್ಲಿಗ್ ಆಗಿದ್ದರು. ಹೇಗೆ ಅಲ್ಲಾಹನು ಅವರಿಗೆ ನೆರವಾಗುತ್ತಿದ್ದನು ಎಂಬುವುದಾಗಿ ಅವರ ತಬ್ಲೀಗ್ ಮೈದಾನದ ಬಹಳ ವಿಶ್ವಾಸವರ್ಧಕ ಘಟನೆಗಳನ್ನು ಜನರು ವಿವರಿಸಿರುವರು. ಅವರಿಗೆ 1986, ಜೂಲಾಯಿಯಲ್ಲಿ ಕಲಿಮ ತಯ್ಯಿಬದ ಮೊಕದ್ದಮೆಯಲ್ಲಿ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗುವ ಸೌಭಾಗ್ಯ ಲಭಿಸಿತು.

ಅವರ ಪತ್ನಿ ಹೇಳುತ್ತಾರೆ: ಅವರು ಎಂದಿಗೂ ಯಾವುದೇ ಕಡ್ಡಾಯ ನಮಾಝ಼ನ್ನಾಗಲೀ ತಹಜ್ಜುದ್ ನಮಾಝ಼ನ್ನಾಗಲೀ ನಿರ್ವಹಿಸದೇ ಇರಲಿಲ್ಲ ಎಂಬುದಕ್ಕೆ ನನ್ನ ಪೂರ್ತಿ ಜೀವಿತ ಸಾಕ್ಷಿಯಾಗಿದೆ. ಜಮಾಅತಿನ ಪರ್ಯಟಣೆಗಳಿಂದ ಮರಳಿ ಬರುವಾಗ ಆಯಾಸಗೊಂಡಿದ್ದರೂ ನಮಾಝ಼ನ್ನು ಖಂಡಿತವಾಗಿಯೂ ನಿರ್ವಹಿಸುತ್ತಿದ್ದರು. ವಿಶೇಷವಾಗಿ ಜಮಾಅತ್ ಆಗಿ ನಿರ್ವಹಿಸಲು ಪ್ರಯತ್ನಿಸುತ್ತಿದ್ದರು. ಕಠಿಣವಾದ ಕಾಯಿಲೆಯಿದ್ದಾಗಲೂ, ನಡೆಯಲು ಕಷ್ಟವಾಗುತ್ತಿದ್ದ ಸಮಯದಲ್ಲೂ ಜಮಾಅತಾಗಿ ನಮಾಝ್ ನಿರ್ವಹಿಸುತ್ತಿದ್ದರು. ಅನೇಕ ಗುಣಗಳನ್ನು ಹೊಂದಿದ್ದರು. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳು ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳಲ್ಲಿ ಸದಾ ನಿರತರಾಗಿದ್ದರು. ತಖ್ವದ ಸೂಕ್ಷ್ಮ ಮಾರ್ಗಗಳಲ್ಲಿ ನಡೆಯುವ, ಖಿ಼ಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ಅನುಸರಣೆಯುಳ್ಳ ವಿನಯವಂತರಾದ ಮುಬಲ್ಲಿಗ್ ಆಗಿದ್ದರು. ಮುಬಲ್ಲಿಗ್‌ರನ್ನು ಮತ್ತು ಜಮಾಅತಿನ ಹುದ್ದೇದಾರರನ್ನು ಗೌರವಿಸುವ, ಮಕ್ಕಳೊಂದಿಗೆ ವಾತ್ಸಲ್ಯ ಹೊಂದಿದ, ಉದಾರಿಶಾಲಿಯಾದ, ಸಂಬಂಧಿಕರನ್ನು ಮತ್ತು ಬಡವರನ್ನು ಪ್ರೀತಿಸುವ ಹಾಗೂ ತಬ್ಲೀಗ್ ಮಾಡುವ ವಿಶೇಷ ಆಸಕ್ತಿ ಹೊಂದಿದ್ದ ವ್ಯಕ್ತಿಯಾಗಿದ್ದರು. ರೋಗದ ಕೊನೆಯ ದಿನಗಳಲ್ಲೂ, ಆರೋಗ್ಯ ಬಹಳ ಕೆಟ್ಟುಹೋದಾಗ ಅವರನ್ನು ಮೂರು ದಿನಗಳು ಎಮರ್ಜೆನ್ಸಿಯಲ್ಲಿ ಕೊಂಡುಹೋಗಲಾಗುತ್ತಿತ್ತು. ಆಗಲೂ ಮನೆಗೆ ಬಂದು ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಒಂದು ದಿನ ಹಾಸ್ಪಿಟಲ್‌ನಿಂದ ಬಂದು ಫಜ್ರ್ ನಮಾಝ್ ನಿರ್ವಹಿಸಿದ ನಂತರ ತಯಾರಾಗಿ ಆಫೀಸಿಗೂ ಹೋದರು. ಹೇಗಿದ್ದರೂ ಅವರನ್ನು ಅದರಿಂದ ತಡೆಯಲಾಗುತ್ತಿದ್ದಾಗ ಇದೇ ವಖ್ಫೇ ಝಿ಼ಂದಗಿಯ ಕೆಲಸವಾಗಿದೆ. ಆದ್ದರಿಂದ ನನ್ನನ್ನು ತಡೆಯಬೇಡಿರಿ ಎಂದು ಹೇಳುತ್ತಿದ್ದರು.

ಅವರ ಮಗನಾದ ನಾಸಿರ್ ಇಸ್ಲಾಂ ಹೇಳುತ್ತಾರೆ: ನನ್ನ ಚಿಕ್ಕಂದಿನಿಂದಲೇ ನಾನು ಅವರನ್ನು ತಹಜ್ಜುದ್ ನಿರ್ವಹಿಸುವವರನ್ನಾಗಿಯೇ ನೋಡಿದ್ದೇನೆ ಮತ್ತು ಅನುಸರಣೆಯ ಉನ್ನತ ಮಟ್ಟದಲ್ಲಿ ಕಂಡಿದ್ದೇನೆ. ಜಮಾಅತಿನ ಕಿರಿಯ ಮತ್ತು ಹಿರಿಯ ಹುದ್ದೇದಾರರನ್ನು ಅನುಸರಿಸುತ್ತಿದ್ದರು. ದಿನಾಲೂ ದಾನಧರ್ಮಗಳನ್ನು ಮಾಡುವುದು ಅವರ ಮಾಮೂಲಾಗಿತ್ತು. ಅಂದಿನ ಕೆಲಸವನ್ನು ಅಂದೇ ಮಾಡುತ್ತಿದ್ದರು. ಬಹಳ ಸ್ನೇಹಮಯಿ ಮತ್ತು ತಬ್ಲೀಗ್ ಮಾಡುವ ಅಪಾರ ಆಸಕ್ತಿಯನ್ನು ಹೊಂದಿದ್ದರು. ನಮಾಝಿ಼ಗೆ ಹೋಗುವಾಗಲೂ, ಬೆಳಿಗ್ಗೆ ವಾಯುವಿಹಾರಕ್ಕೆ ಹೋಗುವಾಗಲೂ ಆಫ್ರಿಕದಲ್ಲಿ ಯಾತ್ರೆಯಲ್ಲೂ ಯಾವುದಾದರೂ ಹೋಟೆಲಲ್ಲಿ ಕುಳಿತುಕೊಂಡಿರುವಾಗಲೂ, ವೇಟಿಂಗ್ ರೂಮಿನಲ್ಲಿ ಕಾಯುತ್ತಿರುವಾಗಲೂ ಎಲ್ಲರಿಗೂ ತಬ್ಲೀಗ್ ಮಾಡುತ್ತಿರುವುದಾಗಿ ನಾನು ಕಂಡಿದ್ದೇನೆ. ಅವರು ಪೋಲೀಸ್ ಆಫೀಸರ್ ಆಗಿರಲಿ, ಮಿಲಿಟರಿ ಆಫೀಸರ್ ಆಗಿರಲಿ ತಬ್ಲೀಗ್ ಮಾಡುವ ಚಾನ್ಸ್‌ನ್ನು ಕೈಬಿಡುತ್ತಿರಲಿಲ್ಲ. ಯಾರಾದರೂ ಕಂಡುಬಂದರೆ, ಅವರನ್ನು ತಬ್ಲೀಗ್ ಮಾಡದೇ ಬಿಡಲಿಕ್ಕಿಲ್ಲ ಎಂದು ನಾವು ಹೇಳಿಕೊಳ್ಳುತ್ತಿದ್ದೆವು.

ಆಫ್ರಿಕದಲ್ಲಿ ತಬ್ಲೀಗಿಗೆ ಸಂಬಂಧಪಟ್ಟು ಅನೇಕ ಸಮಸ್ಯೆಗಳು ಮುಂದೆಬರುತ್ತಿದ್ದುವು. ಅವರು ಸಾಕಷ್ಟು ದುಆ ಮಾಡಿದ್ದರು. ತಹಜ್ಜುದ್ ನಿರ್ವಹಿಸಿದರು. ಸಜ್‌ದಲ್ಲಿ ಹೀಗೆ ಶಬ್ದ ಕೇಳಿಬಂತು: ನನಗೆ ಪರಾಜಯ ಎಂಬುದಿಲ್ಲ. ಮರುದಿನ ತಬ್ಲೀಗಿನಲ್ಲಿ ಇದ್ದ ಅಡಚಣೆ ದೂರವಾಯಿತು. ಹೇಗಿದ್ದರೂ ಅವರ ಕುರಿತು ಅನೇಕ ಜನರು ಘಟನೆಗಳನ್ನು ಬರೆದಿರುವರು. ಸ್ನೇಹಮಯಿ, ವಿನಯವಂತ, ದುಆ ಮಾಡುವ ವ್ಯಕ್ತಿ, ಖಿ಼ಲಾಫತಿನೊಂದಿಗೆ ದೃಢವಾದ ನಂಟು ಮತ್ತು ಅಲ್ಲಾಹನೊಂದಿಗೆ ಪರಿಪೂರ್ಣ ಭರವಸೆ ಹೊಂದಿದ್ದ ವ್ಯಕ್ತಿಯೆಂದೇ ಎಲ್ಲರೂ ಅವರ ಕುರಿತು ಬರೆದಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

************

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

ನಾವು ನ್ಯಾಯ ನೀತಿಯ ದೃಷ್ಟಿಯಿಂದ ಎಲ್ಲ ಪ್ರವಾದಿಗಳನ್ನು ನೋಡಿದರೆ ಅವರಲ್ಲಿ ಎಲ್ಲರಿಗಿಂತಲೂ ಧೈರ್ಯಶಾಲಿಯೂ ಚೈತನ್ಯಶಾಲಿಯೂ ದೇವನಿಂದ ಅತ್ಯಂತ ಹೆಚ್ಚು ಪ್ರೀತಿಸಲ್ಪಟ್ಟವರೂ ಆದ ಪ್ರವಾದಿಯಾಗಿ ನಾವು ಒಬ್ಬರನ್ನು ಮಾತ್ರ ಕಾಣುತ್ತೇವೆ. ಅವರೇ ಪ್ರವಾದಿಗಳ ನಾಯಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ, ಅಹ್ಮದ್ ಮುಜ್ತಬಾ(ಸ). **(ಸಿರಾಜೆ ಮುನೀರ್; ರೂಹಾನೀ ಖ಼ಝಾ಼ಇನ್ ಸಂಪುಟ 12, ಪುಟ 82)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.